ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಚಾಮರಾಜನಗರ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸರೆಡ್ಡಿ**

ಲೇಖಕರು

**ಡಾ. ಸುಂದ್ರೇಶ ಎನ್.**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**CHAMARAJANAGAR:** An Introduction Book on Places in Karnataka that Played a Major Role in the Freedom Struggle, Written by Dr. Sundresha N, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಸುಂದ್ರೇಶ ಎನ್.

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೮೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಇಂದು ಭಾರತವು ಸ್ವಾತಂತ್ರ್ಯ ಪಡೆದ ಅಮೃತ ಮಹೋತ್ಸವದ ಸಂಭ್ರಮ ಘಳಿಗೆಯಲ್ಲಿ ನಿಂತಿದೆ. ಭಾರತವು ಸ್ವಾತಂತ್ರ್ಯ ಪಡೆದ ಕಥನವನ್ನು ಅರಿಯದ ಹಲವು ತಲೆಮಾರುಗಳೇ ಇಂದು ಮುಂಚೂಣಿಯಲ್ಲಿವೆ. ಜಗತ್ತಿನ ಅತೀ ಹೆಚ್ಚಿನ ಯುವ ದೇಶ ಎಂದೇ ಗುರುತಿಸಲ್ಪಡುತ್ತಿರುವ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಸಾವಿರಾರು ವೀರರು ಇಂದು ನಮ್ಮೊಂದಿಗೆ ಇಲ್ಲ. ಹಾಗಾಗಿ ಅವರ ಸ್ವಾತಂತ್ರ್ಯದ ಹೋರಾಟದ ಸಮಗ್ರ ಪರಿಚಯವನ್ನು ಅವಲೋಕಿಸಬೇಕಾದ ಅನಿವಾರ್ಯತೆ ಇಂದಿಗೆ ಬಹಳ ಇದ್ದು, ಇದನ್ನು ಮನಗಂಡು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡುತ್ತಿರುವ ಕೆಲಸ ಅತ್ಯಂತ ಸ್ತುತ್ಯಾರ್ಹವಾದ ಕಾರ್ಯವಾಗಿದೆ. ಚಾಮರಾಜನಗರದಂತಹ ಸಣ್ಣ ಸಣ್ಣ ಪ್ರದೇಶಗಳಲ್ಲೂ ಕೂಡ ಭಾರತಾಂಬೆಯ ಬಿಡುಗಡೆಗಾಗಿ ಹರತಾಳಗಳು, ಮೆರವಣಿಗೆಗಳು, ಜಾಥಾ, ಪೀಕೆಟಿಂಗ್, ಬಹಿಷ್ಕಾರದಂತಹ ಹೋರಾಟ ನಡೆದಿದ್ದು ಸಮಾಜದ ಎಲ್ಲಾ ವರ್ಗದ ಜಾತಿಗಳು, ಧರ್ಮಗಳು ಮೇಲು ಕೀಳು ಎಂದು ಎಣಿಸದೆ ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡು ಸ್ವಾತಂತ್ರ್ಯಕ್ಕಾಗಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿರುವುದು ನಾವು ಗಮನಿಸಬಹುದು. ಅಂತಹ ಹೋರಾಟಗಾರರ ದೇಶ ಸೇವೆಯನ್ನು ನೆನೆದು ಅದನ್ನು ಮುಂದಿನ ಪೀಳಿಗೆಗೆ ತಿಳಿಸುವ ಸಣ್ಣ ಪ್ರಯತ್ನ ಇದಾಗಿದೆ.

ಈ ಕಾರ್ಯದ ಪ್ರತಿ ಹಂತದಲ್ಲೂ ಮಾರ್ಗದರ್ಶನ, ಸ್ಫೂರ್ತಿಯುತ ನುಡಿ, ಉತ್ತೇಜನ ನೀಡುತ್ತಾ ಈ ಕಿರುಹೊತ್ತಿಗೆ ಮಾಡಲು ಅವಕಾಶ ಕೊಟ್ಟ ನನ್ನ ಸಂಶೋಧನೆಯ ನಿಜಗುರು ಡಾ.ಎಸ್.ಜಿ.ರಾಮದಾಸರೆಡ್ಡಿ ಸರ್ ರವರಿಗೆ ಮೊದಲಿಗೆ ಹೃತ್ಪೂರ್ವಕ ಧನ್ಯವಾದಗಳು. ನನ್ನ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀ ಗೋವಿಂದೇಗೌಡರು (ಹರವೆ), ಶ್ರೀ ಬಂಗಾರು(ನಿವೃತ ರೇಷ್ಮೆ ಇಲಾಖೆ, ಹರವೆ)ಶ್ರೀ ಗುರುಸ್ವಾಮಿ(ಮಾದಾಪುರ) ಇವರಿಗೂ ವಿಶೇಷ ಧನ್ಯವಾದಗಳು.

ಪತ್ರಾಗಾರ ಇಲಾಖೆಯಲ್ಲಿ ಮಾಹಿತಿ ನೀಡಿ ಸಹಕರಿಸಿದ ಶ್ರೀ ಮಂಜುನಾಥ್ ಹೆಚ್.ಎಲ್., ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಇವರಿಗೆ ಧನ್ಯವಾದಗಳು. ಮುಖಾಮುಖಿ ಸಂದರ್ಶನದಲ್ಲಿ ಮಾಹಿತಿ ನೀಡಿ ಸಹಕರಿಸಿದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತ ಲಲಿತಾ ಜೀ ಟ್ಯಾಗೆಟ್ ಮತ್ತು ಸಿ.ಆರ್. ರಂಗಶೆಟ್ಟರು ಇವರಿಗೆ ವಿಶೇಷ ಧನ್ಯವಾದಗಳು. ಈ ಕಾರ್ಯದಲ್ಲಿ ಪ್ರಾರಂಭದಿಂದ ಕೊನೆಯವರೆಗೂ ತಮ್ಮ ಅಮೂಲ್ಯ ಸಮಯ ನೀಡಿ ಅಪರೂಪದ ಛಾಯಾಚಿತ್ರಗಳನ್ನು, ಮಾಹಿತಿಯನ್ನು ನೀಡಿ ನೆರವು ಕೊಟ್ಟ ಶ್ರೀಯುತ ಕೆ.ವೆಂಕಟರಾಜು ಸರ್ (ಕೆ.ವಿ. ಕೃಷ್ಣಮೂರ್ತಿರವರ ಮಗ), ದೊರೆಸ್ವಾಮಿ, ಪುಣಜನೂರು (ಡಿ.ಜೆ. ಶಂಕರಪ್ಪನವರ ಮಗ), ವಾಸುದೇವ ಮೂರ್ತಿ (ಬಿ.ಎಲ್. ನಂಜುಂಡಶೆಟ್ಟರು ಮಗ)ರೇವಣ್ಣ ಸರ್ (ಮಲೆಯೂರು ಚಿಕ್ಕಲಿಂಗಪ್ಪನವರ ಮೋಮ್ಮಗ), ಶ್ರೀ ಮಂಜುನಾಥ್ ಮತ್ತು ಮನೋನ್ಮಣಿ (ಸಿ.ಆರ್. ರಂಗಶೆಟ್ಟರ ಮಗ, ಸೋಸೆ) ಇವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ನಮ್ಮ ಕಾಲೇಜಿನಲ್ಲಿ ಸಹಕರಿಸಿದ ಪ್ರಾಂಶುಪಾಲರಾದ ಡಾ. ಜಿ.ಡಿ. ನಾರಾಯಣ್‌ಸರ್, ಇತಿಹಾಸ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಆರ್.ಎಸ್. ವೆಂಕಟೇಶ್, ಕವಿತಾ.ಎ ಸಹಾಯಕ ಪ್ರಾಧ್ಯಾಪಕರು ಇವರಿಗೆ ಕೃತಜ್ಞತೆಗಳು ಸಲ್ಲಿಸುತ್ತೇನೆ. ಈ ಕಿರು ಹೊತ್ತಿಗೆ ಬರೆಯಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

**ಡಾ. ಸುಂದ್ರೇಶ .ಎನ್**
ಮೈಸೂರು

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರು ೧೫
ಚಾಮರಾಜನಗರ ಹೆಸರಿನ ಉಗಮ ೧೫
ಇತಿಹಾಸಪೂರ್ವ ಕಾಲ ೧೬
ಮೈಸೂರಿನಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ ಮತ್ತು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ೨೦
ಅಗರಂ ರಂಗಯ್ಯ ೨೬
ಮಲೆಯೂರು ಚಿಕ್ಕಲಿಂಗಪ್ಪನವರು ೩೭
ಸಿ. ರಂಗಸ್ವಾಮಿರವರು ೩೯
ಡಿ.ಜೆ. ಶಂಕರಪ್ಪನವರು (೧೧.೧೧.೧೯೦೬ ರಿಂದ ೧೭.೧೧.೧೯೪೯) ೪೦
ಕೆ.ವಿ. ಕೃಷ್ಣಮೂರ್ತಿ (ಕೊಚ್ಚಿ ಕಿಟ್ಟಪ್ಪ) ೪೬
ಸಿ. ಗೋಪಾಲ್‌ರಾವ್ ೪೭
ಎಸ್. ನಾಗರಾಜ್ ೫೧
ಎಂ. ನಾಗೇಶರಾವ್ ೫೧

| | |
|---|---|
| ಸಿ.ಪಿ.ಪದ್ಮರಾಜ ಪಂಡಿತ್ | ೫೨ |
| ದಿವಂಗತ ಸಿ.ಜಿ.ರಾಜಶೇಖರ್‌ರವರು | ೫೨ |
| ಶ್ರೀ ಬಿ.ಎಲ್. ನಂಜುಂಡಶೆಟ್ಟರು | ೫೩ |
| ಹೆಚ್.ಕೆ.ಕುಮಾರಸ್ವಾಮಿ | ೫೫ |
| ಎಸ್ ಪ್ರಭುವಯ್ಯ | ೫೬ |
| ಎಸ್.ಗಾಂಧಿ ಪುಟ್ಟನಂಜಪ್ಪನವರು | ೫೮ |
| ಐ.ಎನ್.ಎ ರಾಮರಾವ್ | ೬೨ |
| ಸೂರ್ಯನಾರಾಯಣ ಪಂಡಿತರು | ೬೫ |
| ಪಿ.ಮಹದೇವಪ್ಪ | ೬೬ |
| ಜೆ.ಸಿದ್ದ ನಾಯಕ | ೬೬ |
| ಎಸ್ ನಾರಾಯಣಸ್ವಾಮಿ | ೬೬ |
| ಜಿ.ವಿ.ಲಿಂಗಯ್ಯ(ವೀರಪ್ಪ ದೇವರು) | ೬೭ |
| ಯು.ಎಂ ಮಾದಪ್ಪ | ೬೮ |
| ಲಲಿತಾ ಜಿ ಟ್ಯಾಗೆಟ್ | ೬೮ |
| ಸ್ವಾತಂತ್ರ್ಯ ಹೋರಾಟದ ನೆನಪುಗಳು | ೬೯ |
| ಸಿ ಆರ್ ರಂಗಶೆಟ್ಟರು | ೭೧ |
| ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹೆಮ್ಮೆಯ ವೀರಪುತ್ರರು – ಚಾಮರಾಜನಗರ ತಾಲೂಕು | ೭೩ |
| ಗ್ರಂಥಋಣ | ೭೪ |
| • ಅನುಬಂಧ ಛಾಯಾಚಿತ್ರಗಳು | ೭೫ |
| • ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೮೩ |


# ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರು

ಚಾಮರಾಜನಗರ ಜಿಲ್ಲೆಯು ಭೌಗೋಳಿಕವಾಗಿ ಪೂರ್ವಘಟ್ಟಗಳಲ್ಲಿ ವ್ಯಾಪಿಸಿದ್ದು ಮೈಸೂರು, ಮಂಡ್ಯ ಹಾಗೂ ರಾಮನಗರ ಜಿಲ್ಲೆ ಮತ್ತು ಹೊರ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡುಗಳಿಂದ ಸುತ್ತುವರೆದಿದೆ. ರಾಜ್ಯದ ದಕ್ಷಿಣದಂಚಿನಲ್ಲಿರುವ ಚಾಮರಾಜನಗರ ಜಿಲ್ಲೆಯು ಐತಿಹಾಸಿಕವಾಗಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಹಿಂದಿನ ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೆಗಾಲ ತಾಲ್ಲೂಕುಗಳನ್ನು ಬೇರ್ಪಡಿಸಿ ಚಾಮರಾಜನಗರ ಜಿಲ್ಲೆಯನ್ನು ೧೯೯೭ ರಲ್ಲಿ ರಚಿಸಲಾಯಿತು. ನೈಸರ್ಗಿಕವಾಗಿ ಈ ಜಿಲ್ಲೆಯು ಅತ್ಯಂತ ಉಪಯುಕ್ತವಾದ ಅರಣ್ಯಗಳನ್ನು ಹೊಂದಿದ್ದು ಕಾವೇರಿ ನದಿಯ ಉಪನದಿಗಳಾದ ಸುವರ್ಣವತಿ ಮತ್ತು ಚಿಕ್ಕಹೊಳೆ ಮುಂತಾದ ನದಿಗಳು ಈ ಜಿಲ್ಲೆಯ ಭಾಗವನ್ನು ಸಮೃದ್ಧಗೊಳಿಸಿವೆ. ಮಂಡ್ಯ ಜಿಲ್ಲೆಯಿಂದ ಹರಿದು ಬರುವ ಕಾವೇರಿ ನದಿಯು ಕೊಳ್ಳೆಗಾಲವನ್ನು ಸುತ್ತುವರೆದಿದ್ದು ನಂತರ ತಮಿಳುನಾಡಿಗೆ ಮೇಕೆದಾಟು ಮೂಲಕ ಹರಿದುಹೋಗುತ್ತದೆ. ಈ ಜಿಲ್ಲೆಯು ಪೂರ್ವಕ್ಕೆ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆ, ಉತ್ತರಕ್ಕೆ ಮಂಡ್ಯ ಮತ್ತು ರಾಮಗನಗರ ಜಿಲ್ಲೆ, ಪಶ್ಚಿಮಕ್ಕೆ ಮೈಸೂರು ಜಿಲ್ಲೆ ಹಾಗೂ ದಕ್ಷಿಣಕ್ಕೆ ತಮಿಳುನಾಡಿನ ನೀಲಗಿರಿ ಜಿಲ್ಲಾ ಪ್ರದೇಶಗಳಿಂದ ಸುತ್ತುವರಿದಿದೆ. ದಕ್ಷಿಣೋತ್ತರವಾಗಿ ಹಸಿರು ಕಾಡುಗಳಿಂದ ಕೂಡಿರುವ ಪೂರ್ವಘಟ್ಟಗಳು ನೈಸರ್ಗಿಕವಾಗಿ ಅತ್ಯಂತ ಆಕರ್ಷಣೀಯವಾಗಿದೆ.

## ಚಾಮರಾಜನಗರ ಹೆಸರಿನ ಉಗಮ

ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ಒಂದು ಪ್ರಮುಖ ಜಿಲ್ಲೆಯಾಗಿದ್ದು, ಹೊಂದಿರುವ ಐತಿಹಾಸಿಕ ಮತ್ತು ಭೌಗೋಳಿಕ ಲಕ್ಷಣಗಳ

ಆಧಾರದ ಮೇಲೆ ಇದು ಇಡೀ ಭಾರತದಲ್ಲೇ ವಿಶಿಷ್ಟವಾಗಿರುವ ಜಿಲ್ಲೆಯಾಗಿದೆ. ಪ್ರಾಚೀನ ಕಾಲದಿಂದಲೂ ಈ ಜಿಲ್ಲೆಯು ಐತಿಹಾಸಿಕವಾಗಿ ತನ್ನ ಪ್ರಾಮುಖ್ಯತೆಯನ್ನು ಹೊಂದಿದ್ದು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಕೊಡುಗೆಯನ್ನು ಕೊಟ್ಟಿರುವಂತದ್ದು. ಈ ಜಿಲ್ಲೆಯನ್ನು ಕ್ರಿ.ಶ. ೧೮೧೮ ರವರೆಗೂ 'ಅರಿಕುಠಾರ' ಎಂದೇ ಕರೆಯಲಾಗುತ್ತಿತ್ತು. ಮೂರನೇ ಕೃಷ್ಣರಾಜ ಒಡೆಯರ್ ಅವರ ತಂದೆಯವರಾದ ಚಾಮರಾಜ ಒಡೆಯರ್ ಅವರು ಇಲ್ಲಿ ಜನಿಸಿದರು. ಅವರ ನೆನಪಿಗಾಗಿ 'ಚಾಮರಾಜನಗರ' ಎಂದು ನಾಮಕರಣ ಮಾಡಲಾಯಿತು. ಕ್ರಿ.ಶ. ೧೮೭೪ ರಿಂದಲೂ ತಾಲ್ಲೂಕು ಕೇಂದ್ರವಾಗಿದ್ದ ಚಾಮರಾಜನಗರ ಮೈಸೂರು ಜಿಲ್ಲೆಯ ಭಾಗವಾಗಿತ್ತು. ೧೯೩೯ ರ ಜುಲೈ ಒಂದರಂದು ಮೈಸೂರು ಜಿಲ್ಲೆಯನ್ನು ವಿಭಜಿಸಿ ಮಂಡ್ಯ ಜಿಲ್ಲೆಯನ್ನು ರಚಿಸಲಾಯಿತು. ಮಂಡ್ಯ ಮತ್ತು ಫ್ರೆಂಚ್‌ರಾಕ್ಸ್ ಉಪವಿಭಾಗಗಳು ಒಳಗೊಂಡಂತೆ ಏಳು ತಾಲ್ಲೂಕುಗಳನ್ನು ಮಂಡ್ಯ ಜಿಲ್ಲೆಗೆ ಸೇರಿಸಲಾಯಿತು. ಉಳಿದ ಎಂಟು ತಾಲ್ಲೂಕುಗಳು ಮೈಸೂರು ಜಿಲ್ಲೆಯಲ್ಲಿಯೇ ಉಳಿದುಕೊಂಡವು. ೧೯೫೬ರ ರಾಜ್ಯ ಪುನರ್ವಿಂಗಡಣಾ ಕಾಯ್ದೆಯ ಪ್ರಕಾರ ಕೊಯಮತ್ತೂರು ಜಿಲ್ಲೆಗೆ ಸೇರಿದ್ದ ಕೊಳ್ಳೆಗಾಲ ತಾಲ್ಲೂಕನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. ಜಿಲ್ಲೆಯು ಹಲವು ವಿಶೇಷತೆಗಳಿಂದ ಕೂಡಿದೆ. ಇದರಲ್ಲಿ ಪ್ರಮುಖವಾದದ್ದು ಅಪಾರ ಪ್ರಮಾಣದಲ್ಲಿ ಹೊಂದಿರುವ ಗ್ರಾನೈಟ್ ಶಿಲೆಗಳು, ಶ್ರೀಗಂಧ, ಆನೆದಂತ ಮುಂತಾದವುಗಳು. ರೇಷ್ಮೆಯು ಜಿಲ್ಲೆಯ ಜೀವನಾಧಾರ ಹಾಗೂ ಪುರಾತನ ಕಸುಬುಗಳಲ್ಲಿ ಒಂದಾಗಿದೆ. ತಲೆಮಾರುಗಳಿಂದ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರು, ಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿ ರಂಗಯ್ಯನ ಬೆಟ್ಟ, ಬಂಡೀಪುರದಂತಹ ಪ್ರಸಿದ್ಧ ಅಭಯಾರಣ್ಯಗಳು ಇವೆಲ್ಲದರ ಜೊತೆಗೆ ಇಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಕಬಿನಿ ನದಿ, ಸುವರ್ಣಾವತಿ ನದಿ, ಗುಂಡಾಲ್ (ಕೌಂಡಿನ್ಯನದಿ), ಕಾವೇರಿ ನದಿ.

## ಇತಿಹಾಸಪೂರ್ವ ಕಾಲ

ಚಾಮರಾಜನಗರ ಜಿಲ್ಲೆಯಲ್ಲಿ ಕಾವೇರಿ ಹಾಗೂ ಇತರೆ ಉಪನದಿಗಳು ಹರಿಯುತ್ತಿರುವ ಕಾರಣ ಪ್ರಾಚೀನ ಕಾಲದಿಂದಲೂ ಕೂಡ ಮಾನವ ವಸತಿಗಳು



ಕೇಂದ್ರೀಕೃತಗೊಂಡಿವೆ. ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ನೆಲೆಗಳೂ ಕಂಡುಬರುತ್ತವೆ. ಪ್ರಮುಖವಾಗಿ ಕೊಳ್ಳೆಗಾಲ, ಯಳಂದೂರು, ಚಾಮರಾಜನಗರ ಪರಿಸರದಲ್ಲಿ ಇತಿಹಾಸಪೂರ್ವ ಕಾಲದ ನೆಲೆಗಳು ಬೆಳಕಿಗೆ ಬಂದಿವೆ. ಹೆಸರಾಂತ ಪುರಾತತ್ವ ತಜ್ಞರಾದ ರಾಬರ್ಟ್ ಬ್ರೂಸ್ ಫ್ರೂಟ್, ಡಾ.ಎಂ.ಶೇಷಾದ್ರಿ, ಡಾ.ಸಿ.ಕೃಷ್ಣಮೂರ್ತಿ, ಡಾ. ಎಸ್.ಜಿ. ರಾಮದಾಸರೆಡ್ಡಿ ಮೊದಲಾದವರು ಈ ಪ್ರದೇಶಗಳ ಸರ್ವೇಕ್ಷಣೆಯನ್ನು ಕೈಗೊಂಡಿದ್ದು ಶಿಲಾಯುಗದ ನೆಲೆಗಳನ್ನು ಸಂಶೋಧನೆ ಮಾಡಿ ಬೆಳಕಿಗೆ ತಂದಿರುತ್ತಾರೆ.

ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಮತ್ತು ಯಳಂದೂರು ತಾಲ್ಲೂಕಿನ ಗುಂಬಳ್ಳಿಗಳ ಭೂಭಾಗದ ಮೇಲ್ಮೈಗಳಲ್ಲಿ ಒಳಸುಳಿಯಿರುವ ಶಿಲಾ ಉಜ್ಜುಗತ್ತಿಗಳು ಮತ್ತು ಚಕ್ಕೆ ತೆಗೆದಿರುವ ಶಿಲಾ ಉಪಕರಣಗಳು ದೊರೆತಿರುವುದನ್ನು ಸಂಶೋಧಕ ಸಿ.ಕೃಷ್ಣಮೂರ್ತಿ ಈಗಾಗಲೇ ಪತ್ತೆಹಚ್ಚಿದ್ದಾರೆ. ಸಿ.ಕೃಷ್ಣಮೂರ್ತಿರವರೇ ಇತಿಹಾಸಪೂರ್ವ ಕಾಲದ ಇತರೆ ನೆಲೆಗಳನ್ನು ಸಂಶೋಧಿಸಿದ್ದಾರೆ. ಆ ನೆಲೆಗಳೆಂದರೆ ಬೂದಿತಿಟ್ಟು, ಶಿವನಹಳ್ಳಿ ಮತ್ತು ಕೊಳ್ಳೆಗಾಲ ತಾಲೂಕಿನ ತಿಲನೂರುಗಳಾಗಿದ್ದು ನವಶಿಲಾಯುಗದ ನಿವೇಶನಗಳ ಪೈಕಿ ಯಳಂದೂರು ತಾಲೂಕಿನಲ್ಲಿ ೯ ನೆಲೆಗಳು, ಕೊಳ್ಳೆಗಾಲ ತಾಲೂಕಿನ ೧೫ ನಿವೇಶನಗಳನ್ನು ಗುರುತಿಸಲಾಗಿದೆ.ಈ ರೀತಿಯಾಗಿ ಬೃಹತ್ ಶಿಲಾಯುಗದ ಕಾಲದ ಸಾಂಸ್ಕೃತಿಕ ನೆಲೆಗಳು ಈ ಜಿಲ್ಲೆಯಲ್ಲಿ ಗೋಚರವಾಗುತ್ತವೆ. ನಂತರ ಈ ಪ್ರದೇಶದ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ಎರಡನೇ ಶತಮಾನದವರೆಗೂ ವ್ಯಾಪಿಸಿದೆ ಎಂದು ಹೇಳಲಾಗುತ್ತದೆ. ಡಾ. ಎಸ್.ಜಿ. ರಾಮದಾಸರೆಡ್ಡಿ ಅವರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸೂಕ್ಷ್ಮಶಿಲಾಯುಗದ ಒಂದು ನೆಲೆ, ನವಶಿಲಾಯುಗದ ಒಂದು ನೆಲೆಯನ್ನು ಹಾಗೂ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ೬ ನೆಲೆಗಳನ್ನು ಹಾಗೂ ಸಮಾಧಿಗಳನ್ನು ಶೋಧಿಸಿದ್ದಾರೆ. ಶಾತವಾಹನರ ಇಟ್ಟಿಗೆಗಳನ್ನು ಸಹ ಶೋಧಿಸಿ ಚಾಮರಾಜನಗರ ಜಿಲ್ಲೆ ಶಾತವಾಹನರ ಆಳ್ವಿಕೆ ಒಳಪಟ್ಟಿತ್ತೆಂದು ಗುರುತಿಸಿದ್ದಾರೆ.

ನಂತರ ಕ್ರಿ.ಶ ೪ ನೇ ಶತಮಾನದಿಂದ ಮಧ್ಯಭಾಗದ ೧೦ ನೇ

ಶತಮಾನದವರೆಗೂ ಕರ್ನಾಟಕದ ದಕ್ಷಿಣ ಭಾಗದಲ್ಲಿ ಆಳ್ವಿಕೆ ಮಾಡಿದ ತಲಕಾಡಿನ ಗಂಗರ ಅಧೀನದಲ್ಲಿ ಈ ಪ್ರಾಂತ್ಯವು ಇತ್ತು. ಗಂಗರ ಪ್ರಸಿದ್ಧ ದೊರೆಯಾಗಿದ್ದ ದುರ್ವಿನೀತನ ಆಳ್ವಿಕೆಯಲ್ಲಿ ಪುನ್ನಾಟ ಹಾಗೂ ಪುನ್ನಾಡ (ಬಾಣ) ಎಂಬ ಭಾಗಗಳು ಗಂಗ ಸಾಮ್ರಾಜ್ಯಲ್ಲಿ ವಿಲೀನಗೊಂಡವು. ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಸಿಕ್ಕಿರುವ ಗಂಗ ವಂಶದ ಆಳ್ವಿಕೆ ಅವಧಿಯ ಹಲವು ಶಾಸನಗಳು ಅತ್ಯಂತ ಕುತೂಹಲಕಾರಿಯಾದ ವಿಷಯವನ್ನು ತಿಳಿಸುತ್ತವೆ. ಕೊಳ್ಳೆಗಾಲ ತಾಲ್ಲೂಕಿನ ಅಗರ ಗ್ರಾಮದ ಕೆರೆಯಂಗಳದ ತೂಬಿನ ಬಳಿ ಇರುವ ಶಾಸನವು ಕ್ರಿ.ಶ. ಎಂಟನೇ ಶತಮಾನದ ಲಕ್ಷಣವನ್ನು ಹೊಂದಿದ್ದು ಗಂಗಾ ಶ್ರೀಪುರುಷನ ಆಳ್ವಿಕೆಯ ಅವಧಿಯಲ್ಲಿ ಆತನ ರಾಣಿ ವಿನತಿನಿಮ್ಮಡಿ ಮಳವೆಲ್ಲೂರನ್ನು ಆಳುತ್ತಿದ್ದಾಗ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ಒಂದನೇ ಶಿವಮಾರನ ಉತ್ತರಾಧಿಕಾರಿಯ ಮೊಮ್ಮಗನಾದ ಶ್ರೀಪುರುಷನ ೬ ಶಾಸನಗಳು ಜಿಲ್ಲೆಯಲ್ಲಿ ಇದುವರೆಗೂ ಲಭ್ಯವಾಗಿವೆ.

ಚಾಮರಾಜನಗರ ತಾಲ್ಲೂಕಿನ ಅಮಚವಾಡಿ ಗ್ರಾಮದ ಕ್ಯಾತೆದೇವರ ಗುಡಿಯ ಬಳಿ ಇರುವ ವೀರಗಲ್ಲು ಶಾಸನ ಕ್ರಿ.ಶ. ೮ ಮತ್ತು ೯ ನೇ ಶತಮಾನದ ಲಕ್ಷಣವನ್ನು ಹೊಂದಿದ್ದು, ಗಂಗ ಅರಸು ನೀತಿಮಾರ್ಗ ಪೆರ್ಮಾಡಿಯ ಮೊದಲ ವರ್ಷದ ಆಳ್ವಿಕೆಯಲ್ಲಿ ನಡೆದ ಯುದ್ಧದಲ್ಲಿ ವೀರಸ್ವರ್ಗವನ್ನು ಹೊಂದಿದ ಮೇಳೆಯ ಪುಣಸುಗನೆಂಬುವವನ ಬಗ್ಗೆ ಉಲ್ಲೇಖಿಸುತ್ತದೆ. ಇದೇ ತಾಲ್ಲೂಕಿನ ಸಿದ್ದಯ್ಯನಪುರ ಬೇಚರಾಕ್ ಗ್ರಾಮದ ಹೊಲವೊಂದರಲ್ಲಿ ಕ್ರಿ.ಶ. ೯ನೇ ಶತಮಾನದ ಲಕ್ಷಣಗಳಿರುವ ವೀರಗಲ್ಲು ಶಾಸನವು ಮಾರಯ್ಯನ ಮಗ ತೆರರೆಲಿಯ ಎಂಬ ಯೋಧನು ಹಸುಗಳನ್ನು ಕಳ್ಳರಿಂದ ರಕ್ಷಿಸುತ್ತ ಮರಣ ಹೊಂದಿದ ವಿಚಾರ ದಾಖಲಿಸುತ್ತದೆ. ಈ ರೀತಿಯಾಗಿ ಜಿಲ್ಲೆಯು ಪ್ರಾಚೀನ ಕಾಲದಿಂದಲೇ ಕಲಿತನಕ್ಕೆ ಮತ್ತು ವೀರತ್ವಕ್ಕೆ ಸಾಕಷ್ಟು ಕುರುಹುಗಳನ್ನು ಒದಗಿಸುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಚೋಳರ ಆಳ್ವಿಕೆಯನ್ನು ನಡೆಸಿದ್ದು ಒಂದನೇ ರಾಜರಾಜನಿಂದ ಆರಂಭಗೊಂಡು ಮೊದಲನೇ ಕುಲೋತ್ತುಂಗ ಚೋಳನವರೆಗೂ ಈ ಜಿಲ್ಲೆಯು ಆಳಲ್ಪಟ್ಟಿದೆ. ಚೋಳರ ಆಳ್ವಿಕೆಗೆ ಸಂಬಂಧಿಸಿದ ಸುಮಾರು ೧೨ ಶಾಸನಗಳು ಈ ಜಿಲ್ಲೆಯಲ್ಲಿ ಪತ್ತೆಯಾಗಿವೆ. ಇದರಲ್ಲಿ ಬಹಳ



ಪ್ರಮುಖವಾದದ್ದು ಚಾಮರಾಜನಗರ ತಾಲೂಕಿನ ಕೆಂಪನಪುರ ಗ್ರಾಮದ ದೇವಸ್ಥಾನದ ಬಳಿ ಇರುವ ಕ್ರಿ.ಶ. ೯೯೧ರ ಶಾಸನದಲ್ಲಿ ಒಂದನೇ ರಾಜರಾಜ ಚೋಳನನ್ನು 'ಚೋಳ ನಾರಾಯಣ' ಎಂದು ಉಲ್ಲೇಖಿಸಲಾಗಿದೆ. ಯಳಂದೂರು ತಾಲ್ಲೂಕು ಅಗರ ಗ್ರಾಮದ ವರದರಾಜ ದೇವಾಲಯದ ದಕ್ಷಿಣ ಗೋಡೆಯ ಮೇಲೆ ಉತ್ತರಕ್ಕೆ ಬಿದ್ದಿರುವ ತಮಿಳು ಶಾಸನವು ಪದ್ಯರೂಪದಲ್ಲಿ ಸಂಸ್ಕೃತದಲ್ಲಿದ್ದು ಮೊದಲನೇ ಅಪರೂಪದ ಪ್ರಶಸ್ತಿ ಶಾಸನವಾಗಿದೆ.

ಕರ್ನಾಟಕದ ಅತ್ಯಂತ ಜನಪ್ರಿಯ ರಾಜಮನೆತನವಾದ ಹೊಯ್ಸಳರು ಹಲವಾರು ವರ್ಷಗಳ ಕಾಲ ಈ ಜಿಲ್ಲೆಯಲ್ಲಿ ತಮ್ಮ ಪ್ರಭಾವವನ್ನು ಹೊಂದಿದ್ದರು. ಚಾಮರಾಜನಗರದ ಪಾರ್ಶ್ವನಾಥ ಬಸದಿಯಲ್ಲಿರುವ ಶಾಸನವು ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿದ್ದು, ವಿಷ್ಣುವರ್ಧನ ಗಂಗವಾಡಿ ೯೬೦೦೦ ಭಾಗವನ್ನು ಆಳ್ವಿಕೆ ಮಾಡುತ್ತಿದ್ದ ಉಲ್ಲೇಖಗಳಿವೆ. ವಿಜಯನಗರ ಸಾಮ್ರಾಜ್ಯಕ್ಕೆ ಮತ್ತು ಮೈಸೂರು ಒಡೆಯರ ಆಳ್ವಿಕೆಗೆ ಚಾಮರಾಜನಗರ ಒಳಪಟ್ಟಿತ್ತು. ವಿಜಯನಗರ ಸಾಮ್ರಾಜ್ಯ ಪತನದ ನಂತರ ಮೈಸೂರು ಒಡೆಯರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಚಾಮರಾಜನಗರವನ್ನು ಸಾಮಂತ ರಾಜ್ಯವನ್ನಾಗಿ ಮಾಡಿಕೊಂಡಿದ್ದರು. ೧೫ನೇ ಶತಮಾನದ ಅಂತ್ಯ ಹಾಗೂ ೧೬ನೇ ಶತಮಾನದ ಆದಿಭಾಗದಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದ ಪಾಳೆಗಾರರನ್ನು ಉಮ್ಮತ್ತೂರಿನ ಪ್ರಭುಗಳು ಎಂದು ಕರೆಯಲಾಗುತ್ತಿತ್ತು. ಇವರು ವಿಜಯನಗರದ ಅರಸರ ಕಾಲದಲ್ಲಿ ಪಾಳೆಯಗಾರರಾಗಿ ಉಮ್ಮತ್ತೂರಿನಿಂದ ಆಳುತ್ತಿದ್ದವರು. ಉಮ್ಮತ್ತೂರು ಅವರ ರಾಜಧಾನಿಯಾಗಿತ್ತು.

ಮೈಸೂರು ಒಡೆಯರ ಕಾಲದಲ್ಲಿ ಮತ್ತು ಹೈದರಾಲಿ, ಟಿಪ್ಪು ಸುಲ್ತಾನನ ಕಾಲದಲ್ಲಿ ದಿವಾನರಾಗಿದ್ದ ದಿವಾನ್ ಪೂರ್ಣಯ್ಯನವರು ಕೂಡ ಯಳಂದೂರು ಜಹಗೀರನ್ನು ಹಲವಾರು ವರ್ಷ ಅತ್ಯಂತ ದಕ್ಷತೆಯಿಂದ ಆಳ್ವಿಕೆ ನಡೆಸಿ ತಾಲ್ಲೂಕಿನ ಅಭಿವೃದ್ಧಿ ಮಾಡಿರುವುದು ಒಂದು ಅವಿಸ್ಮರಣೀಯ ಕಾಲಘಟ್ಟ.

## ಮೈಸೂರಿನಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ ಮತ್ತು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಹೈದರ್‌ಆಲಿ ಮತ್ತು ಟಿಪ್ಪುಸುಲ್ತಾನ್‌ನ ಕಾಲದಿಂದಲೇ ಗುರುತಿಸಬಹುದು. ಮೈಸೂರು ರಾಜ್ಯದಲ್ಲಿ ಸಂಭವಿಸಿದ ಸ್ವಾತಂತ್ರ್ಯ ಹೋರಾಟವನ್ನು ಪ್ರಮುಖವಾಗಿ ಎರಡು ಆಯಾಮಗಳಲ್ಲಿ ಪರಿಶೀಲಿಸ ಬೇಕಾಗುತ್ತದೆ. ರಾಷ್ಟ್ರದಲ್ಲಿ ಮಾಂಟೆಗ್ಯೂ ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳು (೧೯೧೯) ಪ್ರಥಮ ಮಹಾಯುದ್ಧದ ಅಂತ್ಯದ ವೇಳೆಗೆ ಜಾರಿಗೆ ಬಂದ ತರುವಾಯ ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವುದು ಮತ್ತು ರಾಷ್ಟ್ರದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಎರಡು ಪ್ರಮುಖವಾದ ಕಾರ್ಯಕ್ರಮಗಳಾಗಿದ್ದವು. ಮಹಾರಾಜರ ಆಳ್ವಿಕೆಯಲ್ಲಿ ದಸರಾ ವೈಭವವನ್ನು ಕಾಣುತ್ತಿದ್ದ ಮೈಸೂರಿನ ಜನತೆಯ ಮೇಲೆ ವಿದೇಶಿ ಆಳ್ವಿಕೆಯ ಪ್ರಭಾವ ನೇರವಾಗಿ ಉಂಟಾಗಲೇ ಇಲ್ಲ. ಆದರೆ, ಸ್ಥಳೀಯ ಸವಲತ್ತುಗಳು ಲಭಿಸದೇ ಇದ್ದಾಗ, ಇದಕ್ಕೆ ವಿದೇಶಿಯರ ಆಳ್ವಿಕೆಯೇ ಪರೋಕ್ಷವಾಗಿ ಕಾರಣವೆಂಬ ಅಂಶವು ಮೈಸೂರಿನ ಜನತೆಗೆ ಅರಿವಾಗತೊಡಗಿತು. ಕನ್ನಂಬಾಡಿ ಅಣೆಕಟ್ಟು ನಿರ್ಮಾಣಗೊಂಡ ಮೇಲೆ ಕಾವೇರಿ ನೀರನ್ನು ಮದರಾಸ್ ಪ್ರಾಂತ್ಯದೊಂದಿಗೆ ಹಂಚಿಕೊಳ್ಳುವ ಸಮಸ್ಯೆ ಒದಗಿದಾಗಲೆಲ್ಲಾ ಬ್ರಿಟಿಷರು ಮದರಾಸ್ ಪ್ರಾಂತ್ಯದ ಹಿತಾಸಕ್ತಿಯನ್ನು ಕಾಪಾಡಿದರೆಂಬ ಅಭಿಪ್ರಾಯ ಮೈಸೂರಿನ ಜನತೆಯಲ್ಲಿ ಮೂಡಿತು. ಮೈಸೂರು ಜನತೆಗೆ ತಾವು ಗುಲಾಮರ ಗುಲಾಮರು ಎಂಬ ಅಂಶವು ಈ ವೇಳೆಗೆ ಮನದಟ್ಟಾಯಿತು. ಮೈಸೂರು ಸಂಸ್ಥಾನವನ್ನು ಕೈಗಾರಿಕೀಕರಣಗೊಳಿಸುವ ಬಗ್ಗೆ ಸರ್.ಎಂ. ವಿಶ್ವೇಶ್ವರಯ್ಯನವರು ಪ್ರಯತ್ನಿಸುತ್ತಿದ್ದಾಗ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಗಳು ಸಹಜವಾಗಿಯೇ ಅಡೆತಡೆಗಳನ್ನುಂಟುಮಾಡಿದವು. ಬೆಂಗಳೂರಿನಲ್ಲಿ ಆಟೋಮೋಬೈಲ್ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂದು ಸಂಸ್ಥಾನದ ಸರ್ಕಾರವು ಪ್ರಯತ್ನಿಸಿದಾಗ ಬ್ರಿಟಿಷರು ಅನುಮತಿಯನ್ನು ನಿರಾಕರಿಸಿದರು. ಈ ಎಲ್ಲಾ ಕಾರಣಗಳಿಂದಾಗಿ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಜಾಗೃತವಾಗತೊಡಗಿತು.



ಈ ಹೋರಾಟವು ಸಂಸ್ಥಾನದಲ್ಲಿ ೧೯೦೬ರ ಸ್ವದೇಶಿ ಚಳುವಳಿ ಸಂದರ್ಭದಲ್ಲಿ ಅರಮನೆಯ ವಾರ್ಷಿಕ ವನಭೋಜನ ಸಮಾರಂಭದಲ್ಲಿ ವಿದೇಶಿ ಸಕ್ಕರೆಯಿಂದ ತಯಾರಿಸಿದ್ದ ತಿನಿಸುಗಳನ್ನು ಬಿಸಾಡುವ ಮೂಲಕ ಪ್ರಕಟವಾಯಿತು. ಆದರೆ ನಿಜವಾದ ಅರ್ಥದಲ್ಲಿ ಇದು ಆರಂಭಗೊಂಡಿದ್ದು ಮೊದಲ ಜಾಗತಿಕ ಮಹಾಯುದ್ಧದ ಸಮಯದಲ್ಲಿ. ಹಿಂದೂ ಧರ್ಮದ ವಿರುದ್ಧ ಕ್ರೈಸ್ತ ಧರ್ಮೀಯರು ನಡೆಸುತ್ತಿದ್ದ ವಾಗ್ದಾಳಿಯನ್ನು, ಮತಾಂತರವನ್ನು ವಿರೋಧಿಸಿ ಚಳುವಳಿಯನ್ನು ಮೈಸೂರಿನಲ್ಲಿ ತಗಡೂರು ರಾಮಚಂದ್ರರಾಯರು ಆರಂಭಿಸಿದರು. ಭಾರತಾದ್ಯಂತ ಸಂಭವಿಸಿದ ಹೋಂರೂಲ್ ಚಳುವಳಿಯು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಗೆ ಚಾಲನೆ ನೀಡಿತು. ತಿಲಕರು ೧೯೨೦ರ ಆಗಸ್ಟ್‌ನಲ್ಲಿ ಗತಿಸಿದಾಗ ಮೈಸೂರಿನಲ್ಲಿ ಬೃಹತ್ ಮೆರವಣಿಗೆ ನಡೆದು ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು. ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದಂತೆ ತಲಕಾಡು ಹಾಗೂ ಮುಡುಕುತೊರೆಯ ಜಾತ್ರೆಗಳಲ್ಲಿ ಹರಿಜನರ ಮೆರವಣಿಗೆಯನ್ನು ತಗಡೂರು ರಾಮಚಂದ್ರರಾಯರ ಮುಂದಾಳತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಕಣಿಯರ ಚಳುವಳಿಯ ಅಂಗವಾಗಿ ೧೯೨೪ರಲ್ಲಿ ಟಿ.ನರಸೀಪುರದ ನರಸಿಂಹಸ್ವಾಮಿ ಗುಡಿಗೆ ಪ್ರವೇಶ ಪಡೆಯಲೆಂದು ಕಣಿಯರು ಸಹಸ್ರಾರು ಸಂಖ್ಯೆಯಲ್ಲಿ ಸೇರಿದರಾದರೂ, ಕಡೆಗೆ ತೀರ್ಥಪ್ರಸಾದವನ್ನು ವಿತರಿಸುವುದರೊಂದಿಗೆ ಸಮಾಪ್ತಿಯಾಯಿತು. ಏತನ್ಮಧ್ಯೆ ತಗಡೂರಿನಲ್ಲಿ ಖಾದ್ದಾರ್ ಸಹಕಾರಿ ಸಂಘವನ್ನು ತಗಡೂರರು ಆರಂಭಿಸಿದರು. ಗಾಂಧಿಯುಗದ ಸ್ವಾತಂತ್ರ್ಯ ಚಳುವಳಿ ಮೈಸೂರು ಪ್ರಾಂತ್ಯದಲ್ಲಿ ಗಮನಾರ್ಹ ಪ್ರಭಾವ ಬೀರಿತು. ೧೯೨೦ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಸ್ತಿತ್ವಕ್ಕೆ ಬಂದಿತು. ಮರುವರ್ಷ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಬೆಂಗಳೂರಿನಲ್ಲಿ ಸೆಟ್ಲೂರ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಅನಂತರ ಅಸಹಕಾರ ಚಳುವಳಿ, ಕಾನೂನುಭಂಗ ಚಳುವಳಿ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮುಂತಾದವುಗಳಲ್ಲಿ ಜನತೆ ಸ್ಪಂದಿಸುವಂತಾಯಿತು. ೧೯೩೭ರಲ್ಲಿ ಮೈಸೂರು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಿತು. ೧೯೩೮ರಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮೈಸೂರು ಕಾಂಗ್ರೆಸ್‌ನ ೨೫೦೦೦ ಕಾರ್ಯಕರ್ತರು ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ತ್ರಿವರ್ಣ ಧ್ವಜವನ್ನು ಹಾರಿಸಿದರು. ಇದರ ಸ್ವಾಗತ ಸಮಿತಿಯ ಅಧ್ಯಕ್ಷರಾದ

ಸಾಹುಕಾರ್ ಚೆನ್ನಯ್ಯ ಸೇರಿದಂತೆ ಕೆ.ಟಿ. ಭಾಷ್ಯಂ, ಕೆ.ಸಿ. ರೆಡ್ಡಿ, ಸಿದ್ದಯ್ಯ, ಬಳ್ಳಾರಿ ಸಿದ್ದಮ್ಮ, ಯಶೋಧರ ದಾಸಪ್ಪ, ತುಳಸಿ ದಾಸಪ್ಪ ಮುಂತಾದವರು ದಸ್ತಗಿರಿಯಾದರು. ಶಿವಪುರದ ಕಾಂಗ್ರೆಸ್ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಸೇರಿದಂತೆ ೧೮ ನಿರ್ಣಯಗಳನ್ನು ಅಂಗೀಕರಿಸಿತು. ೧೯೪೨ ರಲ್ಲಿ ಭಾರತಕ್ಕೆ ಬಂದ ಕ್ರಿಪ್ಸ್ ನಿಯೋಗದ ವಿರುದ್ಧ ನಡೆದ ಕ್ವಿಟ್ ಇಂಡಿಯಾ ಚಳುವಳಿ ಮೈಸೂರಿನಲ್ಲಿ ಉಗ್ರಗೊಂಡು ಅನೇಕ ಸ್ವಾತಂತ್ರ್ಯ ಹೋರಾಟಗಾರರು ದಸ್ತಗಿರಿಯಾದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು, ವಕೀಲರು ಕೋರ್ಟುಗಳನ್ನು, ಕಾರ್ಮಿಕರು ಕಾರ್ಖಾನೆಗಳನ್ನು ತೊರೆದು ಚಳುವಳಿಯಲ್ಲಿ ಧುಮುಕಿದರು.

೧೯೪೭ರಲ್ಲಿ ಆಗಸ್ಟ್ ೧೫ರಂದು ಭಾರತ ಸ್ವಾತಂತ್ರ್ಯವನ್ನು ಪಡೆಯಿತು. ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರ ಹಿರಿದಾದಂತೆ, ಮೈಸೂರು ಸಂಸ್ಥಾನದ ಹಾಗೂ ಮೈಸೂರಿನ ಪಾತ್ರವು ಅತ್ಯಂತ ಶ್ಲಾಘನೀಯವಾದದ್ದು. ಮಹಾರಾಜ ಜಯಚಾಮರಾಜರು ವೀಲಿನ ಪತ್ರಕ್ಕೆ ಸಹಿ ಹಾಕಿ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಆದರೆ ಮೈಸೂರಿನ ಜನತೆಗೆ ಪ್ರಜಾಪ್ರಭುತ್ವಯುಕ್ತ ಪೂರ್ಣ ಜವಾಬ್ದಾರಿ ಸರ್ಕಾರ ರಚನೆಗೆ ವಿಳಂಬಿಸಿದರು. ಹಾಗಾಗಿ ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ 'ಮೈಸೂರು ಚಲೋ ಚಳುವಳಿ' ಯನ್ನು ಸೆಪ್ಟೆಂಬರ್ ೩, ೧೯೪೭ ರಂದು ಬೆಂಗಳೂರಿನ ಬನಪ್ಪ ಪಾರ್ಕಿನಿಂದ ಕೆ.ಸಿ ರೆಡ್ಡಿಯವರ ನಾಯಕತ್ವದಲ್ಲಿ ಸತ್ಯಾಗ್ರಹವನ್ನು ಆರಂಭಿಸಲಾಯಿತು. ಇದರಲ್ಲಿ ಬಳ್ಳಾರಿ ಸಿದ್ದಮ್ಮ, ಹೆಚ್.ಸಿ ದಾಸಪ್ಪ, ಗೌರಮ್ಮ, ಯಶೋಧರ ದಾಸಪ್ಪ, ಎಸ್ ನಿಜಲಿಂಗಪ್ಪ, ಮರಿಯಪ್ಪ, ಚೆನ್ನಪ್ಪ, ಟಿ. ಸಿದ್ಧಲಿಂಗಯ್ಯ ಮತ್ತಿತರು ಗಣ್ಯರು ಭಾಗವಹಿಸಿದರು. ಸರ್ಕಾರ ಮುಂಜಾಗ್ರತೆ ಕ್ರಮವಾಗಿ ಸೆಪ್ಟೆಂಬರ್ ೩ ರಂದು ಎಲ್ಲಾ ರಾಷ್ಟ್ರನಾಯಕರನ್ನು ಬಂಧಿಸಿತು. ಮಡಿಕೇರಿಯಿಂದ ಮೈಸೂರಿಗೆ ಬಂದ ಎಸ್. ನಿಜಲಿಂಗಪ್ಪನವರು ಬಂಧಿತರಾದರು.

ಆದರೂ ರಾಜ್ಯದ ಶಿವಮೊಗ್ಗ, ಬೆಂಗಳೂರು, ಉತ್ತರ ಕರ್ನಾಟಕ, ಮೈಸೂರು ಪ್ರಾಂತ್ಯದಿಂದ ತಾಲ್ಲೂಕು ಕೇಂದ್ರಗಳಾದ ನಂಜನಗೂಡು, ಚಾಮರಾಜನಗರ, ಕೊಳ್ಳೆಗಾಲ, ಯಳಂದೂರು, ಕೆ.ಆರ್. ನಗರ, ಚಿತ್ರದುರ್ಗ,



ಹುಣಸೂರು, ಹೆಚ್.ಡಿ. ಕೋಟೆಗಳಿಂದ ಸತ್ಯಾಗ್ರಹಿಗಳು ಆಗಮಿಸಿ ಮೈಸೂರು ಅರಮನೆ ಮುಂದೆ ಸತ್ಯಾಗ್ರಹ ಹೂಡಿದರು. ಮೈಸೂರಿನಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು, ಚುನಾಯಿತ ಪ್ರತಿನಿಧಿಯಿರುವ ರಾಜ್ಯಾಂಗ ರಚನಾ ಸಭೆ ರಚಿಸುವುದು, ರಾಜ್ಯಾಂಗ ರಚನೆ ಆಗುವವರೆಗೂ ತಾತ್ಕಾಲಿಕ ಸರ್ಕಾರವನ್ನು ಏರ್ಪಡಿಸುವುದು, ರಾಜಕೀಯ ಬಂಧಿಗಳ ಬಿಡುಗಡೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟರು. ಈ ಚಳುವಳಿಯ ಅಂಗವಾಗಿ ಮೈಸೂರು ಮಾತ್ರವಲ್ಲದೆ ಮೈಸೂರು ಸಂಸ್ಥಾನದಾದ್ಯಂತ ಸಭೆಗಳು ನಡೆದು ಸತ್ಯಾಗ್ರಹಿಗಳು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ತಂಬೂಚೆಟ್ಟಿ ವಿರುದ್ಧ ಘೋಷಣೆ ಕೂಗಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು, ಕಾರ್ಮಿಕರು ಕಾರ್ಖಾನೆಗಳನ್ನು ತೊರೆದು ಚಳುವಳಿಗೆ ಇಳಿದರು.

ಸ್ತ್ರೀಯರು ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್ ಹೂಡಿದರು. ಅನೇಕ ಕಡೆ ಅಂಚೆ, ತಂತಿ, ರೈಲ್ವೆ ಕಚೇರಿಗಳಿಗೆ ಧಕ್ಕೆಯುಂಟುಮಾಡಲಾಯಿತು. ಪೋಲಿಸರು ಗೋಲಿಬಾರ್, ಲಾಠಿ ಚಾರ್ಜ್ ಹಾಗೂ ಗುಂಡು ಹಾರಿಸಿ ಹಲವರನ್ನು ಕೊಂದರಲ್ಲದೆ, ಸುಮಾರು ನಾಲ್ಕು ಸಾವಿರ ಜನರನ್ನು ದಸ್ತಗಿರಿ ಮಾಡಿದರು. ಮೈಸೂರಿನಲ್ಲಿ ನಡೆದ ಅರಮನೆ ಸತ್ಯಾಗ್ರಹ ಚಳುವಳಿ ಮೆರವಣಿಗೆಯಲ್ಲಿ ಹಾರ್ಡ್ವಿಕ್ ಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಗುಂಡೇಟಿಗೆ ಬಲಿಯಾದ. ರಾಮಸ್ವಾಮಿಯ ನೆನಪಿಗಾಗಿ ಈಗಲೂ ಮೈಸೂರಿನ ಒಂದು ವೃತ್ತಕ್ಕೆ ರಾಮಸ್ವಾಮಿ ವೃತ್ತ ಎಂದು ನಾಮಕರಣ ಮಾಡಲಾಗಿದೆ.

ಮೈಸೂರಿನ ಅರಮನೆ ಸತ್ಯಾಗ್ರಹ ೪೨ ದಿನ ನಡೆಯಿತು. ಸತ್ಯಾಗ್ರಹಿಗಳು ಅರಮನೆಯೂ ಸೇರಿದಂತೆ ಎಲ್ಲಾ ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜ ಹಾರಿಸಿ ಪ್ರತಿಭಟನೆ ತೋರಿಸಿದರು. ಕೊನೆಗೆ ಸತ್ಯಾಗ್ರಹಿಗಳಿಗೆ ಮಣಿದ ಒಡೆಯರು ಕಾಂಗ್ರೆಸ್ ನಾಯಕರೊಂದಿಗೆ ಒಪ್ಪಂದಕ್ಕೆ ಬಂದು, ರಾಜಕೀಯ ಬಂಧಿಗಳನ್ನು ಬಿಡುಗಡೆಗೊಳಿಸಿದರು. ಕೆ.ಸಿ. ರೆಡ್ಡಿ ದಿವಾನರೊಂದಿಗೆ ಮಾತುಕತೆ ನಡೆದು ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಮಹಾರಾಜರ ಆದೇಶದಂತೆ ಕೆ.ಸಿ. ರೆಡ್ಡಿ ಅಕ್ಟೋಬರ್ ೨೪ ರ ವಿಜಯ ದಶಮಿಯಂದು ಜವಾಬ್ದಾರಿ ಸರ್ಕಾರವನ್ನು ರಚಿಸಿದರು.

ಚಾಮರಾಜನಗರ ಜಿಲ್ಲೆಯಲ್ಲಿಯೂ ಭಾರತದ ಎಲ್ಲಾ ಹಳ್ಳಿಗಳಲ್ಲಿ ಆದಂತೆ ಮಹಾತ್ಮ ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾಗಿ ಯುವ ಜನತೆ ಚಳುವಳಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗೆ ಚಾಮರಾಜನಗರದ ಬೀದಿಬೀದಿಗಳಲ್ಲಿ ಮೆರವಣಿಗೆಗಳು, ಬಹಿರಂಗ ಭಾಷಣಗಳು, ಶಾಲೆಯ ಬಹಿಷ್ಕಾರಗಳು, ಪಿಕೆಟಿಂಗ್, ಹರತಾಳಗಳು, ಸಾರ್ವಜನಿಕ ಸಭೆಗಳು, ಚರ್ಚೆಗಳು, ಸ್ವಾತಂತ್ರ್ಯ ಚಳುವಳಿಗಳಿಗೆ ಚಾಮರಾಜನಗರ ಸಾಕ್ಷಿಯಾಗಿದೆ. ಹಿಂದಿ ಕಲಿಯುವುದು ದೇಶಪ್ರೇಮದ ಸಂಕೇತವಾಗಿತ್ತು. ಈ ಹಂತದಲ್ಲಿ ಇಲ್ಲಿ ಚಾಮರಾಜೇಶ್ವರ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದ ಚಕ್ರವರ್ತಿ ಗೋಪಾಲಾಚಾರ್ಯರು ೧೯೨೯ರಲ್ಲಿ ಹಿಂದಿ ಪ್ರಸಾರ ಸಭೆ ಆರಂಭಿಸಿದರು. ಗೋಪಾಲಾಚಾರ್ಯರು ಲಕ್ಷ್ಮೀಕಾಂತಸ್ವಾಮಿ ದೇವಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಂತರ ಪುರಸಭೆಯು ಉಚಿತವಾಗಿ ಹೆಂಚಿನ ಮನೆಯನ್ನು ನೀಡಿತು. ಇಲ್ಲಿ ಆರಂಭದ ವಿದ್ಯಾರ್ಥಿಗಳೆಲ್ಲಾ ದೇಶಪ್ರೇಮ ಉಳ್ಳವರೇ ಆಗಿದ್ದರು. ಪಂಡಿತ್ ಜವಾಹರ್‌ಲಾಲ್ ತಮ್ಮ ಪತ್ನಿ ಮತ್ತು ಮಗಳೊಂದಿಗೆ ದಕ್ಷಿಣ ಭಾರತ ಪ್ರವಾಸ ಕೈಗೊಂಡಾಗ ನಂಜನಗೂಡಿಗೆ ಬಂದಿದ್ದರು. ಆ ಸಂದರ್ಭದಲ್ಲಿ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳನ್ನು ನಂಜನಗೂಡಿಗೆ ಕರೆದೊಯ್ದಾಗ. ಆಗ ವಿದ್ಯಾರ್ಥಿಗಳು ನೆಹರು ಅವರನ್ನೂ ಭೇಟಿಯಾಗಿ ಅವರೊಡನೆ ಹಿಂದಿಯಲ್ಲಿಯೇ ಮಾತನಾಡಿದರು. ಬಹಿರಂಗ ಸಭೆಯಲ್ಲಿ ಈ ವಿದ್ಯಾರ್ಥಿಗಳು "ಏ ಮಾತೃಭೂಮಿ ತೇರೆ...." ಹಾಡನ್ನು ಹಾಡಿದರು. ೧೯೩೪ ರಲ್ಲಿ ಗಾಂಧಿಜೀಯವರು ಬದನವಾಳುವಿಗೆ ಬಂದಾಗಲೂ ವಿದ್ಯಾರ್ಥಿಗಳು ಭೇಟಿಯಾಗಿದ್ದರು.

ಈ ರೀತಿಯ ಚಟುವಟಿಕೆಗಳು ೧೯೩೦ ರಿಂದಲೇ ಚಾಮರಾಜನಗರದಲ್ಲಿ ಪ್ರಾರಂಭವಾಗಿದ್ದವು.ಇಲ್ಲಿಯ 'ಮಾರಿಗುಡಿಯೇ' ಕಾಂಗ್ರೆಸಿನ ಬಹಿರಂಗ ಸಾರ್ವಜನಿಕ ಸಭೆಗಳು ನಡೆಯುತ್ತಿದ್ದ ಸ್ಥಳವಾಗಿತ್ತು. ಆ ದಿನಗಳಲ್ಲಿ ಯಾವುದೇ ಮೈಕ್ ಆಗಲೀ, ವೇದಿಕೆಗಳಾಗಲೀ ಇರಲಿಲ್ಲ. ಅಲ್ಲಿನ ಬ್ಯಾಡ್ಮಿಂಟನ್ ಕೋರ್ಟಿನ ಬದಿಯಲ್ಲಿ ಕಲ್ಲುಬೆಂಚುಗಳೇ ಆಸನಗಳಾಗಿದ್ದವು. ಇಲ್ಲಿಯ ಸಭೆಗಳಿಗೆ ಆಗ ಮುಖಂಡರುಗಳಾಗಿದ್ದ ತಗಡೂರು ರಾಮಚಂದ್ರರಾಯರು, ಎಂ.ಎನ್. ಜೋಯಿಸರು, ಎ.ರಾಮಣ್ಣ ಮುಂತಾದ ನಾಯಕರು ಇಲ್ಲಿ ಬಂದು ತಮ್ಮ



ಭಾಷಣಗಳನ್ನು ಮಾಡುತ್ತಿದ್ದರು. ಹರತಾಳಗಳು ಆದಾಗ ಸಂತೆಮರಳ್ಳಿ ಮತ್ತು ತೆರಕಾಣಾಂಬಿಯ ಸಂತೆಗಳನ್ನು ಬಂದ್ ಮಾಡಲಾಗುತ್ತಿತ್ತು. ಆ ಕಾಲದಲ್ಲಿ ಈ ಎರಡು ಸಂತೆ ಬಂದಾದರೆ ಚಾಮರಾಜನಗರದ ವಾಣಿಜ್ಯ ವ್ಯವಹಾರವೇ ಬಂದ್ ಆಗುತ್ತಿತ್ತು. ಆಗ ಇದರ ವಿರುದ್ಧ ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮಲೆಯೂರು ಚಿಕ್ಕಲಿಂಗಪ್ಪನವರು, ಪುಣಜನೂರು ಶಂಕರಪ್ಪ, ಸಿ.ಗೋಪಾಲ್‌ರಾವ್, ಯತಿರಾಜು, ಸಿ.ಸಿ.ರಂಗಸ್ವಾಮಿ. ವೆಂಕಟರಾವ್, ಕೆ.ವಿ.ಕೃಷ್ಣಮೂರ್ತಿ(ಕೊಚ್ಚಿಕಿಟ್ಟು), ಆಲೂರು ರಂಗಸ್ವಾಮಯ್ಯ ಮತ್ತು ಅಂದು ಯುವಕರಾಗಿದ್ದ ಎಸ್. ನಾಗರಾಜು, ಸಿ.ಪಿ. ಪದ್ಮರಾಜ ಪಂಡಿತ್, ಎಂ.ನಾಗೇಶ್‌ರಾವ್, ಸಿ.ಜಿ. ರಾಜಶೇಖರ್, ಲಕ್ಷ್ಮೀಕಾಂತ್ ಚೆಟ್ಟಪ್ಪ ಹೋರಾಟ ಮಾಡುತ್ತಿದ್ದರು. ಇವರಿಗೆಲ್ಲಾ ಬೆಂಬಲವಾಗಿ ನಿಂತು ಸಹಾಯ ಮಾಡುತ್ತಿದ್ದವರಲ್ಲಿ ಬಿ.ನಾರಾಯಣ್, ಎ. ವಾಸುದೇವರಾವ್ ಮತ್ತು ಕುಟುಂಬದ ಸದಸ್ಯರು ಅತ್ಯಂತ ಪ್ರಮುಖರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಚಾಮರಾಜನಗರದ ಭಾಗದಲ್ಲಿ ಬಂಧನಕ್ಕೆ ಒಳಗಾದವರಲ್ಲಿ ಪ್ರಮುಖರೆಂದರೆ ಮಲೆಯೂರು ಚಿಕ್ಕಲಿಂಗಪ್ಪ, ಪುಣಜನೂರು ಡಿ.ಜೆ.ಶಂಕರಪ್ಪ, ಯತಿರಾಜು, ಸಿ. ಗೋಪಾಲ್‌ರಾವ್, ಸಿ.ಸಿ.ರಂಗಸ್ವಾಮಿ, ವೆಂಕಟರಾವ್ ಮತ್ತು ಕೆ.ವಿ. ಕೃಷ್ಣಮೂರ್ತಿ. ಇವರನ್ನೆಲ್ಲಾ ಮೈಸೂರು, ಹಾಸನ ಮತ್ತು ಬೆಂಗಳೂರು ಜೈಲಿನಲ್ಲಿ ಇಡಲಾಗಿತ್ತು. ಜೈಲಿನಲ್ಲಿದ್ದಾಗ ಎಸ್. ನಿಜಲಿಂಗಪ್ಪ, ಎಸ್.ವಿ. ಕೃಷ್ಣಮೂರ್ತಿರಾವ್, ಎಸ್ ಕರಿಯಪ್ಪ, ಸಿ.ಬಂದಿಗೌಡ, ಹೆಚ್.ಎಸ್. ದೊರೆಸ್ವಾಮಿ, ಟಿ.ಚೆನ್ನಯ್ಯ, ಹೆಚ್.ಎಂ. ಚನ್ನಬಸಪ್ಪ ಇವರೆಲ್ಲಾ ಒಡನಾಡಿಗಳಾಗಿದ್ದರು. ಇಲ್ಲಿನ ಬಹುತೇಕ ಹೋರಾಟಗಾರರ ಬಳಿಯ ಬಾಕ್ಸ್ ಚರಕಗಳು ಇದ್ದು, ಅದರಲ್ಲೆ ನೂಲುತ್ತಿದ್ದರು. ಆ ನೂಲನ್ನು ಡಿ.ಜೆ. ಶಂಕರಪ್ಪನವರು ಬದನವಾಳುವಿನಲ್ಲಿ ನೀಡಿ ಬಟ್ಟೆ ಮಾಡಿಸುತ್ತಿದ್ದರು. ಬಹುತೇಕ ಹೋರಾಟಗಾರರು ಹಿಂದ್ ಸ್ವರಾಜ್ ಓದಿದವರಾಗಿದ್ದರು, ಎಲ್ಲರ ಬಳಿಯು ಗಾಂಧೀಜಿಯವರ ಆತ್ಮಕತೆಯ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳು ಇದ್ದವು, ಎಲ್ಲರೂ ಖಾದಿದಾರಿಗಳಾಗಿದ್ದರು, ಆರಂಭದಲ್ಲಿ ಎಲ್ಲರೂ ಗಾಂಧಿ ಟೋಪಿ ಧರಿಸುತ್ತಿದ್ದರು ಎಂದು ಕೆ.ವಿ. ಕೃಷ್ಣಮೂರ್ತಿಯವರ (ಸ್ವಾತಂತ್ರ್ಯ ಹೋರಾಟಗಾರರು) ಮಗ ಕೆ.

ವೆಂಕಟರಾಜುರವರು (ಕ್ಷೇತ್ರಕಾರ್ಯದ ಸಂದರ್ಭದಲ್ಲಿ) ಮಾಹಿತಿ ನೀಡಿದರು. ಚಾಮರಾಜನಗರದಲ್ಲಿ ನೂರಾರು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಅವರಲ್ಲಿ ಕೆಲವು ಪ್ರಮುಖ ಹೋರಾಟಗಾರರ ಬಗ್ಗೆ ಮಾಹಿತಿಯನ್ನು ಈ ಕೆಳಗೆ ಹಂಚಿಕೊಳ್ಳಲಾಗಿದೆ.

## ಅಗರಂ ರಂಗಯ್ಯ

ಶ್ರೀಯುತರು ಕ್ರಿ.ಶ. ೧೯೦೧ರಲ್ಲಿ ಇಂದಿನ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನಲ್ಲಿ ಜನಿಸಿದರು. ಇವರ ತಂದೆಯವರು ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಮೈಸೂರು ನಗರದಲ್ಲಿ ಒಂದು ಮನೆಯನ್ನು ಮಾಡಿ ನೆಲೆಸಿದ್ದರು. ಪ್ರಾಥಮಿಕ ಶಿಕ್ಷಣ ದಳವಾಯಿ ಶಾಲೆ, ಮರಿಮಲ್ಲಪ್ಪ ಶಾಲೆಗಳಲ್ಲಿ ಆಯಿತು. ಇವರ ಪ್ರೌಢಶಿಕ್ಷಣ ಮಹಾರಾಜ ಕಾಲೇಜಿನ ಕೊಲಿಜಿಯೆಟ್ ಹೈಸ್ಕೂಲಿನಲ್ಲಿ ಪೂರ್ಣಗೊಂಡಿತು. ಮರಿಮಲ್ಲಪ್ಪ ಶಾಲೆಯಲ್ಲಿ ಓದುತ್ತಿರುವಾಗ ಉಪಾಧ್ಯಾಯರಾಗಿದ್ದವರು ರಾಮರಾವ್ ಮತ್ತು ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರು ಮುಖ್ಯೋಪಾಧ್ಯಾರಾಗಿದ್ದರು. ಇವರ ಅಂದಿನ ಪಾಠ ಪ್ರವಚನಗಳಿಂದ ದೇಶಪ್ರೇಮ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ಹೆಚ್ಚು ಆಕರ್ಷಣೆ ಉಂಟಾಯಿತು. ಬಾಲ್ಯದಲ್ಲಿಯೇ ಇವರ ಪಾಠ ಮತ್ತು ಪ್ರವಚನಗಳ ಪ್ರಭಾವ ರಂಗಯ್ಯನವರ ಮೇಲೆ ಗಾಢ ಪರಿಣಾಮವನ್ನು ಬೀರಿದವು. ೧೯೨೦ರ ಸುಮಾರಿನಲ್ಲಿ ಬಾಲಗಂಗಾಧರ ತಿಲಕ್‌ರವರ ಜನ್ಮದಿನದ ಆಚರಣೆಯನ್ನು ಮೈಸೂರು ನಗರಲ್ಲಿ ಮಾಡುತ್ತಿರುವಾಗ ಮೈಸೂರಿನ ಜನಸಾಮಾನ್ಯರಲ್ಲಿ ಅತ್ಯಂತ ಹೆಚ್ಚಿನ ಉತ್ಸಾಹ ಕಂಡು ಬಂದು, ಇದು ರಂಗಯ್ಯನವರ ಮೇಲೆ ಗಾಢವಾಗಿ ಪರಿಣಾಮ ಬೀರಿತು.

ಮೆಟ್ರಿಕ್ಯುಲೇಷನ್ ಶಿಕ್ಷಣ ಮುಗಿಸಿದ ನಂತರ ಸ್ವತಂತ್ರ ಜೀವನ ಮಾಡುವ ಹಂಬಲದಿಂದ ಅನಿಬೆಸೆಂಟರು ಮದ್ರಾಸ್‌ನ ಆಡ್ಯಾರ್‌ನಲ್ಲಿ ಸ್ಥಾಪಿಸಿದ್ದ ನೇಷನ್ ವಿಶ್ವವಿದ್ಯಾನಿಲಯಕ್ಕೆ ಸೇರಿಕೊಂಡರು. ಇದರ ಅಂಗವಾಗಿದ್ದ ಮದನಪಲ್ಲಿ ಕಾಲೇಜಿನಲ್ಲಿ ಪತ್ರಿಕೋದ್ಯಮ ತೆಗೆದುಕೊಂಡು ಅಭ್ಯಾಸವನ್ನು ನಡೆಸಿದರು. ಇವರು ಮದ್ರಾಸ್‌ನಲ್ಲಿ ಶಿಕ್ಷಣ ಮಾಡುವಂತಹ ಸಂದರ್ಭದಲ್ಲಿ ಅನಿಬೆಸೆಂಟ್ (ಪ್ರೊ–ಛಾನ್ಸಲರ್), ರವೀಂದ್ರನಾಥ ಟ್ಯಾಗೋರ್(ಛಾನ್ಸಲರ್), ಸಿ.ಪಿ. ರಾಮಸ್ವಾಮಿ ಅಯ್ಯರ್, ಜಿ.ಎಸ್. ಅರುಂಡೇಲ್ (ರಿಜಿಸ್ಟ್ರಾರ್) ಹಾಗೂ ಜೆ.ಹೆಚ್. ಕಸಿನ್ಸ್‌ರವರು ಪ್ರಾಂಶುಪಾಲರಾಗಿದ್ದರು. ಇಂತಹ ಮಹಾನ್ ಪ್ರತಿಭೆಗಳ ಸಂಪರ್ಕದಿಂದ ಇವರ ಮೇಲೆ ಅತಿ ಹೆಚ್ಚಿನ ಪ್ರಭಾವ ಉಂಟಾಯಿತು ಮತ್ತು ಸ್ವಾತಂತ್ರ್ಯದ ಹೋರಾಟದ ಒಂದು ಕಿಚ್ಚು ಇಲ್ಲಿಂದಲೇ ಪ್ರಾರಂಭವಾಯಿತು. ನಂತರ ಬಿ.ಎ.ಪದವಿಯನ್ನು ಪಡೆದು ಮೈಸೂರಿಗೆ ಹಿಂದಿರುಗಿದರು. ಅಂದಿನ ವೃದ್ಧಪಿತಾಮಹಾ ವೆಂಕಟಕೃಷ್ಣಯ್ಯನವರು ಇಡೀ ಮೈಸೂರು ನಗರ ಭಾಗದಲ್ಲಿ ಆದರ್ಶ ಸಾರ್ವಜನಿಕ ಜೀವನಕ್ಕೆ ಬುನಾದಿಯಂತಿದ್ದರು. ಆ ಕಾಲದಲ್ಲೇ ಅವರು ನಾಲ್ಕು ಪತ್ರಿಕೆಗಳನ್ನು ನಡೆಸುತ್ತಿದ್ದರು. ಅಗರಂ ರಂಗಯ್ಯನವರು ಮದ್ರಾಸ್‌ನ ಅಡ್ಯಾರ್‌ನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಸಂದರ್ಭದಲ್ಲಿ 'ನ್ಯೂ ಇಂಡಿಯಾ' ಪತ್ರಿಕಾಲಯದಲ್ಲಿ ಪ್ರಾಕ್ಟಿಕಲ್ ಟ್ರೇನಿಂಗ್ ಮಾಡಿದ್ದರು ಮತ್ತು ಅಲ್ಲಿಯೇ ಪತ್ರಿಕೆಯ ಅನುಭವವನ್ನು ಪಡೆದುಕೊಂಡಿದ್ದರು. ಇದೇ ಸಂದರ್ಭದಲ್ಲಿ ತಾತಯ್ಯನವರ ಸಂದರ್ಶನಕ್ಕೆ ವಿವಿಧ ಕ್ಷೇತ್ರಗಳಿಂದ, ವಿವಿಧ ಭಾಗಗಳಿಂದ ಹಲವಾರು ಮುಖಂಡರುಗಳು ಬರುತ್ತಿದ್ದರು. ಬಂದವರಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಿಂದ ಬರುತ್ತಿದ್ದಂತಹ ಜನಗಳು ಅಗರಂ ರಂಗಯ್ಯನವರಿಗೂ ಪರಿಚಿತರಾದರು. ಇವರೆಲ್ಲರ ಸಂಪರ್ಕದಿಂದ ಸ್ವಾತಂತ್ರ್ಯದ ಹೋರಾಟದ ಕಿಚ್ಚನ್ನು ಹಚ್ಚಿಸಿಕೊಂಡರು. ಆಗ ಮೈಸೂರಿನಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಅಡ್ವೋಕೇಟ್ ವಿ.ಸೀತಾರಾಮಯ್ಯ ಮತ್ತು ಕಾಂಗ್ರೆಸ್ ಘಟಕದ ಕಾರ್ಯದರ್ಶಿಯಾಗಿ ಅಡ್ವೋಕೇಟ್ ಕೆ.ಕೃಷ್ಣಸ್ವಾಮಿಯವರು ಕಾರ್ಯ ನಿರ್ವಹಿಸುತ್ತಿದ್ದರು.ಈ ವೇಳೆಗೆ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರು ಸಂಸ್ಥಾನದಿಂದ ಪ್ರತಿನಿಧಿಗಳನ್ನು ಬೆಳಗಾವಿಗೆ ಚುನಾಯಿಸುವ ಕೆಲಸವು ರಂಗಯ್ಯನವರು ಮತ್ತು ತಗಡೂರು ರಾಮಚಂದ್ರರಾಯರ ಪಾಲಿಗೆ ಬಂತು. ಈ ಕಾರ್ಯವನ್ನು ಇವರಿಬ್ಬರೂ ಸೇರಿ ಅತ್ಯಂತ ಯಶಸ್ವಿಯಾಗಿ ಮಾಡಿ ಮುಗಿಸಿದರು. ಹಾಗೆಯೇ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಾಂಸ್ಕೃತಿಕ ಕಾರ್ಯಕಾರ್ಯಕ್ರಮಕ್ಕೆ ಮೈಸೂರು ನಗರದಿಂದ ಕಲಾವಿದರುಗಳಾದ ಶ್ರೀ ವೆಂಕಟಪ್ಪ, ವೀಣೆ ಶೇಷಣ್ಣ ಮೊದಲಾದವರು ಸಂಗೀತಗಾರರು ಭಾಗವಹಿಸುವಂತೆ ಮಾಡಿ ಕಾರ್ಯಕ್ರಮವು ಯಶಸ್ವಿಯಾಗುವಂತೆ ಮಾಡಿದ್ದು ಹೆಮ್ಮೆಯ ವಿಷಯ.

ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಡೆದಂತಹ ಒಂದು ಘಟನೆ ಅತ್ಯಂತ ಸ್ವಾರಸ್ಯದಿಂದ ಕೂಡಿದೆ.

ಬೆಳಗಾಂ ಅಧಿವೇಶನದ ಸಂದರ್ಭದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೀಣೆ ಶೇಷಣ್ಣನವರಿಗೆ ಐದು ನಿಮಿಷ ಸಂಗೀತ ನುಡಿಸುವುದಕ್ಕೆ ಅವಕಾಶ ನೀಡಲಾಗಿತ್ತು. ಐದು ನಿಮಿಷ ವೀಣೆಯನ್ನು ನುಡಿಸಿ ಅವರು ನಿಲ್ಲಿಸಿದರು. ಈ ಸಂದರ್ಭದಲ್ಲಿ ಗಾಂಧೀಜಿಯವರು ಪಕ್ಕದಲ್ಲೇ ಚರಕದಲ್ಲಿ ನೂಲು ತೆಗೆಯುತ್ತಿದ್ದರು. ತಕ್ಷಣ ಅವರು "ಏಕೆ ನಿಲ್ಲಿಸಿದಿರಿ"? ಎಂದು ಕೇಳಿದರು. ಅದಕ್ಕೆ ಹತ್ತಿರದಲ್ಲಿ ಇದ್ದವರೆಲ್ಲ ೫ ನಿಮಿಷವಾಯಿತು ಎಂದು ಹೇಳಿದರು. ಆಗ ಮಹಾತ್ಮರು ಬಹಳ ಚೆನ್ನಾಗಿದೆ, ಇನ್ನೂ ನುಡಿಸಿ ಎಂದು ಹೇಳಿ ಅರ್ಧಗಂಟೆ ವೀಣೆ ನುಡಿಸುವುದನ್ನು ಕೇಳಿದರು. ತಮ್ಮ ಜೀವಮಾನದ ಅತಿದೊಡ್ಡ ಘಟನೆಯೆಂದು ಸಂಗಡಿಗರ ಬಳಿ ವೀಣೆ ಶೇಷಣ್ಣನವರು ಹೇಳಿಕೊಳ್ಳುತ್ತಿದ್ದರು.

ಬೆಳಗಾಂ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಅಗರಂ ರಂಗಯ್ಯ ಮತ್ತು ತಗಡೂರು ರಾಮಚಂದ್ರರಾಯರು ಇಬ್ಬರು ಸೇರಿ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಬಂದಂತಹ ಕಾಂಗ್ರೆಸ್ ಮುಖಂಡರುಗಳ ಭೇಟಿ ಮಾಡಿ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಪಂಡಿತ ಮದನಮೋಹನ ಮಾಳವೀಯರು "ನೀವುಗಳು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೀರಿ, ಈ ರೀತಿ ಯಾವ ದೇಶಿಯ ಸಂಸ್ಥಾನದಲ್ಲೂ ಕಾರ್ಯ ನಡೆಯುತ್ತಿಲ್ಲ, ನೀವು ಕರ್ನಾಟಕದ ಒಬ್ಬ ಹೆಮ್ಮೆಯ ಪುರುಷರಾಗಿದ್ದಿರಿ" ಎಂದು ತಗಡೂರು ರಾಮಚಂದ್ರರಾಯರಿಗೆ ವೇದಿಕೆಯಲ್ಲೇ ಮೆಚ್ಚುಗೆಯನ್ನು ಕೊಟ್ಟರು. ತಗಡೂರು ರಾಮಚಂದ್ರರಾಯರಿಗೆ ಅಲ್ಲಿಯೇ ವೇದಿಕೆಯನ್ನು ಬಿಟ್ಟುಕೊಟ್ಟು, ತಮಗೆ ಆದಂತಹ ಅನುಭವಗಳನ್ನು ಮತ್ತು ತಾವು ಮಾಡಿದ ಕಾರ್ಯಚಟುವಟಿಕೆಗಳ ಬಗ್ಗೆ ಜನರಿಗೆ ಭಾಷಣದ ಮೂಲಕ ತಿಳಿಸುವಂತೆ ಹೇಳಿದರು.

ಈ ಪ್ರಮುಖ ಹೋರಾಟಗಳ ಮುಂದಾಳತ್ವವನ್ನು ನೋಡಿ ಮುಂದೆ ಮೈಸೂರು ಜಿಲ್ಲಾ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯದರ್ಶಿ ಹೊಣೆಗಾರಿಕೆಯನ್ನು



ಅಗರಂ ರಂಗಯ್ಯನವರಿಗೆ ನೀಡಲಾಯಿತು. ಇಂತಹ ಸಂದರ್ಭದಲ್ಲಿ ಇವರ ಸಹಾಯಕ್ಕೆ ಬಂದವರು ಎನ್.ಡಿ.ಶ್ರೀರಂಗಾಚಾರ್, ಎಲ್.ವಿ. ರಾಜಗೋಪಾಲ್, ಅಗರಂ ಸೂರ್ಯನಾರಾಯಣ ಪಂಡಿತ, ತಗಡೂರು ರಾಮಚಂದ್ರರಾಯರು, ಎಸ್.ರಂಗರಾಮಯ್ಯ ಹಾಗೂ ಎಂ.ಎನ್. ಜೋಯಿಸ್. ಈ ಹೋರಾಟಗಳ ನಡುವೆಯೇ ಅವರು ತಮ್ಮ ಜೀವನ ನಿರ್ವಹಣೆಗಾಗಿ 'ಶ್ರೀರಾಮ ಪ್ರೆಸ್' ಎಂಬ ಮುದ್ರಣಾಲಯವನ್ನು ಸ್ಥಾಪಿಸಿದರು. ಇದರ ಜೊತೆಯಲ್ಲಿಯೇ ಕಾಂಗ್ರೆಸ್ ಸಂಘಟಿಸುವ ಕಾರ್ಯ ಮತ್ತು ಅದರ ಕಾರ್ಯದರ್ಶಿಯ ಹೊಣೆ ಕೂಡ ಇವರ ಮೇಲೆ ಇತ್ತು.

ಮೈಸೂರು ಸಂಸ್ಥಾನದಲ್ಲಿ ಮೊದಲಿನಿಂದಲೂ ಕೂಡ ಬೆಳಗಾಂ ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನದ ನಡುವೆ ಎಲ್ಲಾ ಸ್ವಾತಂತ್ರ್ಯ ಹೋರಾಟಗಳಿಗೆ ವೇದಿಕೆಯನ್ನು ಸಂಘಟಿಸುವ ಕಾರ್ಯಕ್ರಮ ಅಗರಂ ರಂಗಯ್ಯ ಅವರದಾಗಿತ್ತು. ಮೈಸೂರು ಸಂಸ್ಥಾನದಲ್ಲಿ ಉತ್ತರ ಕರ್ನಾಟಕದ ಮುಖಂಡರುಗಳಾದ ಗಂಗಾಧರರಾವ್ ದೇಶಪಾಂಡೆ, ಮುದವೀಡು ಕೃಷ್ಣರಾಯರು, ಡಾ. ಆರ್. ಆರ್.ದಿವಾಕರ್, ಹುಕ್ಕೇರಿಕರ್, ಹನುಮಂತರಾವ್ ಕೌಜಲಗಿ, ಕೊಪ್ಪಳದ ಜಯರಾಮಾಚಾರ್ ಇವರೆಲ್ಲರನ್ನು ಕೂಡ ಸಾರ್ವಜನಿಕ ವೇದಿಕೆ ಮೂಲಕ ಮಾತನಾಡಿಸಲು ವೇದಿಕೆಯನ್ನು ಸಿದ್ಧಪಡಿಸುವ ಕಾರ್ಯ ಇವರದಾಗಿತ್ತು. ಈ ಮೇಲಿನ ಎಲ್ಲಾ ಮುಖಂಡರುಗಳು ಮೈಸೂರಿಗೆ ಬರುವ ಹೊತ್ತಿಗೆ ಅವರಿಗೆಲ್ಲ ವೇದಿಕೆಯನ್ನು ಸಿದ್ಧಮಾಡುವುದು ಅಗರಂ ರಂಗಯ್ಯನವರ ಪ್ರಮುಖ ಕಾರ್ಯವಾಗಿತ್ತು. ಇದಕ್ಕೆ ಬೇಕಾದಂತಹ ಸ್ವಯಂಸೇವಕರನ್ನು ತಯಾರು ಮಾಡಿ ಸ್ಟೂಡೆಂಟ್ ಯೂನಿಯನ್‌ಗಳನ್ನು ಕಳುಹಿಸಿಕೊಡುತ್ತಿದ್ದವರು ಶ್ರೀರಂಗಾಚಾರ್ಯರು. ಹಾಗೆಯೇ ಈ ಸ್ವಯಂಸೇವಕರ ತರಬೇತಿ ಕಾರ್ಯಗಳನ್ನು ಎಲ್.ವಿ ರಾಜಗೋಪಾಲ್, ರಂಗನಾಥ ನಾಯಕ ಮತ್ತು ಎಂ.ಎನ್. ಜೋಯಿಸ್ ನಡೆಸುತ್ತಿದ್ದರು. ಈ ಎಲ್ಲಾ ಸಿದ್ಧತೆಗಳು ನಡೆಯುತ್ತಿರುವ ಜೊತೆಯಲ್ಲೆ ಜನರ ಉತ್ಸಾಹವು ಬತ್ತಿ ಹೋಗದಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ಅಗರಂ ರಂಗಯ್ಯನವರ ಮೇಲಿತ್ತು. ೧೯೨೩–೩೦ರ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನದಲ್ಲಿ ನೇರವಾದ ಅಂತಹ ಯಾವುದೇ ಚಳುವಳಿಗಳು

ನಡೆಯುತ್ತಿರಲಿಲ್ಲ. ಆದರೆ ಬ್ರಿಟಿಷ್ ಇಂಡಿಯಾದಲ್ಲಿ ನಡೆಯುತ್ತಿದ್ದಂತಹ ಚಳುವಳಿಗಳ ಬಗ್ಗೆ ಅಗರಂ ರಂಗಯ್ಯನವರು ಸಹಜವಾದ ಸಹಾನುಭೂತಿ ತೋರಿ ಅಂತಹ ಕಾರ್ಯವನ್ನು ಮಾತ್ರ ಮಾಡುತ್ತಿದ್ದರು. ಎಲ್ಲಾ ಕಾರ್ಯಗಳ ಜೊತೆಯಲ್ಲಿಯೇ ಭಾಷಣಗಳನ್ನು ಸಿದ್ಧಪಡಿಸುವುದು, ಮೆರವಣಿಗೆಗಳು, ಹರತಾಳಗಳ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಮಾಡುತ್ತಿದ್ದರು. ಈ ಹೋರಾಟಗಳಿಗೆ ಸರ್ಕಾರದಿಂದ ಆಗಾಗ್ಗೆ ಅಡ್ಡಿ–ಆತಂಕಗಳು ಕೂಡ ಬರುತ್ತಿತ್ತು. ಆದರೂ ಕೂಡ ರಂಗಯ್ಯನವರು ಎಲ್ಲಾ ಸಂದಿಗ್ಧ ಪರಿಸ್ಥಿತಿಗಳನ್ನು ರಾಜೀ ಸಂಧಾನಗಳ ಮೂಲಕವೇ ಬಗೆಹರಿಸಿ ಕಾರ್ಯವನ್ನು ಸಾಧಿಸುತ್ತಿದ್ದರು. ಇದೇ ಮಾದರಿಯಲ್ಲಿ ಹೋರಾಟದ ಕೇಂದ್ರವಾಗಿದ್ದ ಸುಬ್ಬರಾಯನ ಕೆರೆಯಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸುವ ಏರ್ಪಾಟು ನಡೆಸಿದರು. (೨೬.೦೧.೧೯೩೦) ಇಂತಹ ಸಂದರ್ಭದಲ್ಲಿ ಎಲ್.ವಿ.ರಾಜಗೋಪಾಲ್ ಮತ್ತು ಅಗರಂ ರಂಗಯ್ಯನವರನ್ನು ಧ್ವಜಾರೋಹಣ ನಡೆಸಬಾರದೆಂದು ಪೋಲಿಸರು ಒತ್ತಾಯಪಡಿಸಿದರು. ಆದರೆ ರಂಗಯ್ಯನವರು ಅದಕ್ಕೆ ಜಗ್ಗದಿದ್ದಾಗ ದಸ್ತಗಿರಿ ಮಾಡಿದರು. ಪೋಲಿಸರು ಧ್ವಜವನ್ನು ಕಿತ್ತುಕೊಂಡು ಹೋದರು. ಈ ಘಟನೆಗೆ ಸಂಬಂಧಿಸಿದಂತೆ ಕೋರ್ಟಿನಲ್ಲಿ ಇವರ ವಿರುದ್ಧ ಮೊಕದ್ದಮೆ ಹೂಡಲಾಯಿತು. ಆದರೆ ಸ್ವಲ್ಪ ಕಾಲದ ನಂತರ ಅದನ್ನು ವಾಪಸ್ ಪಡೆದರಲ್ಲದೆ, ಧ್ವಜವನ್ನು ಹಿಂದಿರುಗಿಸಿದರು. ಆ ದಿನಗಳಲ್ಲಿ ಧ್ವಜಾರೋಹಣ ಮಾಡುವುದು ಒಂದು ರೋಮಾಂಚನಕಾರಿ ವಿಷಯವಾಗಿತ್ತು.

ಧ್ವಜಾರೋಹಣ ಕಾರ್ಯಕ್ರಮ, ಕಾಂಗ್ರೆಸ್ಸಿನ ಸಂಘಟನೆ, ವೇದಿಕೆ ಸಿದ್ಧತೆ ಈ ಕಾರ್ಯಕ್ರಮಗಳಲ್ಲದೆ ಕೆಲವು ರಚನಾತ್ಮಕ ಕಾರ್ಯಗಳನ್ನು ಕೂಡ ಮಾಡುತ್ತಿದ್ದರು. ಮನೆಮನೆಗೆ ಖಾದಿ ಬಟ್ಟೆಯನ್ನು ಹೊತ್ತುಕೊಂಡು ಹೋಗಿ ಮಾರುವ ಕೆಲಸವನ್ನು ಚುರುಕಿನಿಂದ ಮಾಡುತ್ತಿದ್ದರು. ಖಾದಿ ಮಾರಾಟದ ಕೆಲಸವನ್ನು ಅಗರಂ ರಂಗಯ್ಯನವರು ಮತ್ತು ಅವರ ಸ್ನೇಹಿತರು ಪ್ರತಿ ಭಾನುವಾರ ಮಾಡುತ್ತಿದ್ದರು.ಆ ಕಾಲದಲ್ಲಿ ಗಾಂಧಿ ಟೋಪಿಗೆ ಬಹಳ ಮಹತ್ವವಿತ್ತು. ಇಂತಹ ಕಾರ್ಯ ಚಟುವಟಿಕೆಗಳಿಗೆ ಸಂತೆಪೇಟೆಯ ವರ್ತಕರಾದ ಧರ್ಮಪ್ರಕಾಶ ಬನುಮಯ್ಯನವರು ಮತ್ತು ಪಿ.ಎನ್. ಸಂಗಪ್ಪನವರು ಬಹಳಷ್ಟು ಸಹಕಾರವನ್ನು



ನೀಡುತ್ತಿದ್ದರು. ಬನುಮಯ್ಯನವರು ಪರದೇಶಿ ಟೋಪಿಯನ್ನು ಬಿಟ್ಟುಕೊಟ್ಟ ಹುಡುಗರಿಗೆ ಪುಕ್ಕಟ್ಟೆಯಾಗಿ ಗಾಂಧಿಟೋಪಿಯನ್ನು ಕೊಟ್ಟು, ಅದಕ್ಕೆ ತಗಲುವ ವೆಚ್ಚವನ್ನು ಭರಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ "ಹಳೇ ಪರದೇಶಿ ಟೋಪಿಗೆ ಬದಲು ಹೊಸ ಗಾಂಧೀಟೋಪಿ" ಎಂಬ ಘೋಷಣೆ ಬಹಳ ಜನಪ್ರಿಯವಾಗಿತ್ತು.ಈ ರೀತಿಯಾಗಿ ನಾನಾ ಕಾರ್ಯಕ್ರಮಗಳಿಂದ ಕಾಂಗ್ರೆಸ್ ಮೈಸೂರಿನ ಜನರ ಮನಸ್ಸನ್ನು ತನ್ನೆಡೆಗೆ ಸೆಳೆಯಲು ಇವರು ಪ್ರಯತ್ನಪಟ್ಟರು.

೧೯೩೦ರ ಕಾನೂನುಭಂಗ ಚಳಿವಳಿಗೂ ಮೈಸೂರು ಸಂಸ್ಥಾನಕ್ಕೂ ನೇರವಾಗಿ ಸಂಬಂಧಪಡದಿದ್ದರೂ ಜನರಿಗೆ ಸಹಾಯ ನೀಡುವ ಉದ್ದೇಶದಿಂದ ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಸ್ವಯಂಸೇವಕ ಶಿಬಿರಗಳನ್ನು ಸ್ಥಾಪಿಸಿ ಸತ್ಯಾಗ್ರಹಿಗಳನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡಲಾಗುತ್ತಿತ್ತು. ಈ ಕಾರ್ಯದಲ್ಲಿ ಅಗರಂ ರಂಗಯ್ಯನವರ ಪಾತ್ರ ಸಾಕಷ್ಟಿತ್ತು. ೧೯೩೧ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದ ಮುರಿದುಬಿದ್ದು ಭಾರತದ್ಯಾಂತ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಆಗತಾನೆ ಜೈಲಿನಿಂದ ಬಿಡುಗಡೆಯಾಗಿದ್ದ ಜವಾಹರ್‌ಲಾಲ್ ನೆಹರು ಮೈಸೂರಿಗೆ ಭೇಟಿ ಕೊಟ್ಟರು. ಆಗ ಶ್ರೀಮನ್ಮಹಾರಾಜರೇ ಅವರನ್ನು ತಮ್ಮ ಸ್ವಂತ ಅತಿಥಿಯಂತೆ ನಡೆಸಿಕೊಂಡು ಆತಿಥ್ಯ ನೀಡಿದ್ದು ಅತ್ಯಂತ ಸ್ಮರಣೀಯವಾಗಿದೆ. ಈ ಸತ್ಯಾಗ್ರಹವನ್ನು ಪುನಾರಚನೆ ಮಾಡುವ ಸಲುವಾಗಿ ಬೆಂಗಳೂರಿನ ಅಡ್ವೋಕೇಟ್ ಸಂಪಿಗೆ ವೆಂಕಟಪತಯ್ಯನವರು, ನಿಟ್ಟೂರು ಶ್ರೀನಿವಾಸರಾಯರು, ಎಸ್.ಕೆ. ವೆಂಕಟರಂಗಯ್ಯಂಗಾರ್ ಅವರುಗಳನ್ನು ಒಳಗೊಂಡ ಗುಪ್ತ ಸಮಿತಿಯೊಂದನ್ನು ರಚನೆ ಮಾಡಲಾಯಿತು.ಈ ಕಾನೂನುಭಂಗ ಚಳುವಳಿ ಸಂದರ್ಭದಲ್ಲಿ ಶಿರಸಿ–ಸಿದ್ದಾಪುರ ಅಂಕೋಲಾಗಳಲ್ಲಿ ನಡೆಯುತ್ತಿದ್ದ ಕರನಿರಾಕರಣೆ ಸತ್ಯಾಗ್ರಹಕ್ಕಾಗಿ ಜನ ಮತ್ತು ಧನಸಹಾಯ ಒದಗಿಸುವುದು ಈ ಸಮಿತಿಯ ಮುಖ್ಯ ಉದ್ದೇಶವಾಗಿತ್ತು. ಆದರೆ ಅಲ್ಲಿ ನಡೆಯುತ್ತಿದ್ದಂತಹ ಸತ್ಯಾಗ್ರಹದ ವಿವರಗಳು ವೃತ್ತಪತಿಕ್ರೆಗಳಲ್ಲಿ ಬರದಂತೆ ಸರ್ಕಾರ ಅಡ್ಡಿಪಡಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಜನರಿಂದ ಹಣವನ್ನು ವಸೂಲು ಮಾಡುವುದು, ಸ್ವಯಂಸೇವಕರುಗಳನ್ನು ಕೂಡಿಸಿ ಕಳುಹಿಸುವುದು, ಕರಪತ್ರಗಳನ್ನು

ಹಂಚುವುದು ಇತ್ಯಾದಿ ಕಾರ್ಯಕ್ರಮಗಳಲ್ಲಿ ಮುಖ್ಯ ಪಾತ್ರವನ್ನು ಅಗರಂ ರಂಗಯ್ಯನವರು ವಹಿಸುತ್ತಿದ್ದರು.

ಈ ಎಲ್ಲಾ ಕಾರ್ಯಗಳನ್ನು ಅಗರಂ ರಂಗಯ್ಯನವರ ಜೊತೆ ನಿರ್ವಹಣೆ ಮಾಡುತ್ತಿದ್ದ ರಾಜಗೋಪಾಲ್, ಸುಬ್ರಾವ್ ಉಪಾಧ್ಯಾಯ, ಎಂ.ಎನ್.ಜೋಯಿಸರು, ಸುಬ್ಬಮ್ಮ ಜೋಯಿಸ್, ಅಗರಂ ಸೂರ್ಯನಾರಾಯಣ ಪಂಡಿತ, ಹುಣಸೂರು ಸೀತಾರಾಮ್ ಇವರುಗಳನ್ನು ಮುಖ್ಯವಾಗಿ ಸ್ಮರಿಸಬಹುದು. ಈ ಸಂದರ್ಭದಲ್ಲಿ ಸತ್ಯಾಗ್ರಹ ನಡೆಯುವವರೆಗೂ ಮಾಹೆಯಾನ ಇನ್ನೂರು ರೂಪಾಯಿಗಳನ್ನು ಕೊಡುತ್ತಿದ್ದ ಸಾಹುಕಾರ್ ಬನುಮಯ್ಯ ಅವರನ್ನು ನೆನೆಯಬೇಕು. ಇದೇ ಸಂದರ್ಭದಲ್ಲಿ ಸಂತೆಪೇಟೆಯ ವರ್ತಕರೆಲ್ಲಾ ಸೇರಿ ಮಾಹೆಯಾನ ಒಂದು ಸಾವಿರ ರೂ.ಗಳನ್ನು ಸತ್ಯಾಗ್ರಹಕ್ಕಾಗಿ ಕೊಡುತ್ತಿದ್ದದ್ದು ಬಹಳ ವಿಶೇಷವಾಗಿತ್ತು.

ಈ ರೀತಿಯಾಗಿ ಕರ್ನಾಟಕದಲ್ಲಿ ನಡೆಯುತ್ತಿದ್ದ ಚಳುವಳಿಯ ಸುದ್ದಿಪತ್ರಗಳನ್ನು ಅಗರಂ ರಂಗಯ್ಯನವರ ಪತ್ರಿಕೆಯಲ್ಲಿ ಶ್ರೀರಾಮ ಪ್ರೆಸ್‌ನಲ್ಲೆ ಮುದ್ರಿಸುತ್ತಿದ್ದರು. ಈ ಘಟನೆಗಳನ್ನು ಮುದ್ರಿಸುತ್ತಿದ್ದರಿಂದ ಪೊಲೀಸರ ಕಣ್ಣು ಯಾವಾಗಲೂ ಪ್ರೆಸ್(ಅಗರಂ ರಂಗಯ್ಯ)ಮೇಲೆ ಇರುತ್ತಿತ್ತು. ಇದೇ ಸಮಯದಲ್ಲಿ ನಾಲ್ಕು ಪತ್ರಿಕೆಗಳನ್ನು ಹೊರಡಿಸುತ್ತಿದ್ದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರ ಪತ್ರಿಕೆಗಳನ್ನು ಸರ್ಕಾರ ನಾಲ್ಕು ವರ್ಷಗಳ ಕಾಲ ನಿಲ್ಲಿಸಿ ಬಿಟ್ಟಿತು. ಅವರ ಜೊತೆಯಲ್ಲಿಯೇ ಕೆಲಸ ನಿರ್ವಹಿಸುತ್ತಿದ್ದ ಅಗರಂ ರಂಗಯ್ಯನವರಿಗೆ ತಾವೇ ಒಂದು ಪತ್ರಿಕೆಯನ್ನು ನಡೆಸಬೇಕೆಂಬ ಹಂಬಲ ಅಲ್ಲಿಂದಲೇ ಹುಟ್ಟಿತು. ಆಗ ವೆಂಕಟಕೃಷ್ಣಯ್ಯನವರ ಜೊತೆ ಈ ಸಂಬಂಧ ಚರ್ಚಿಸಿ ಅಗರಂರವರೇ ಒಂದು ಹೊಸ ಪತ್ರಿಕೆಯನ್ನು ಪ್ರಾರಂಭಿಸಲು ಪ್ರಯತ್ನಿಸಿದರು. ತಮ್ಮ ಕೊನೆಯ ಉಸಿರು ಇರುವವರೆಗೂ ಕೂಡ ಪತ್ರಿಕೆಗಳ ಬಗ್ಗೆ ಮಾತನಾಡುತ್ತಿದ್ದ ವೆಂಕಟಕೃಷ್ಣಯ್ಯನವರು ಕ್ರಿ.ಶ. ೧೯೩೩ರಲ್ಲಿ ದೈವಾಧೀನರಾದರು. ಸ್ವಲ್ಪಕಾಲದ ನಂತರ ರಂಗಯ್ಯನವರು 'ಸಾಧ್ವಿ' ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡರು. ತಾತಯ್ಯನವರು ಈ ಸಾಧ್ವಿ ಹೆಸರಿನ ಪತ್ರಿಕೆಯನ್ನು ಬಹಳ ಕಾಲ ಯಶಸ್ವಿಯಾಗಿ ನಡೆಸಿದ್ದರು. ಅದು ಬಹಳ ಜನಪ್ರಿಯವಾಗಿತ್ತು. ಸಾಧ್ವಿಯನ್ನು ಪ್ರಾರಂಭದ ದಿನಗಳಲ್ಲಿ ವಾರಪತ್ರಿಕೆಯಾಗಿ ಆರಂಭಿಸಿದ್ದರು. ಎಚ್ಚರಗೊಂಡಿದ್ದ ಮೈಸೂರಿನ ಜನರ ಆಸೆ–ಆಕಾಂಕ್ಷೆಗಳನ್ನು ಎತ್ತಿಹಿಡಿಯುವಲ್ಲಿ ಸಾಧ್ವಿ ಪತ್ರಿಕೆಯು ಹಿಂದೆ ಬೀಳಲಿಲ್ಲ. ಇದಕ್ಕಾಗಿ ಸರ್ಕಾರದ ಗದಾಪ್ರಹಾರಕ್ಕೆ ಸಾಧ್ವಿ ಪತ್ರಿಕೆ ಒಳಗಾಗಬೇಕಾಯಿತು. ೧೯೪೧ ರ ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಕಾನೂನನ್ನು ಮಾರ್ಪಡಿಸಲಾಯಿತು. ಇದರಿಂದ ಸಾಧ್ವಿ ಮತ್ತೆ ಜೀವಂತವಾಯಿತು. ನಂತರ ಎನ್.ಸುಬ್ರಹ್ಮಣ್ಯನವರು ಸಂಪಾದಕರಾಗಿದ್ದರು.ಪತ್ರಿಕೆಗೆ ಸಾಕಷ್ಟು ತೊಂದರೆಗಳು ಬಂದವು. ಅದರಂತೆ ಪತ್ರಿಕೆಯು ಸರ್ಕಾರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ರ ಅನುಮತಿಯನ್ನು ಎರಡು ಬಾರಿ ಪಡೆದೇ ಸುದ್ದಿಯನ್ನು ಅಚ್ಚು ಮಾಡಬೇಕೆಂದು ಸರ್ಕಾರವು ಆಜ್ಞೆ ಹೊರಡಿಸಿತು. ಇಂತಹ ಸಾಕಷ್ಟು ಅಡತಡೆಗಳನ್ನು ದಾಟಿ ಈ ಪತ್ರಿಕೆ ಅತ್ಯಂತ ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸಿತು.



ಅಗರಂ ರಂಗಯ್ಯನವರ ಸಾರ್ವಜನಿಕ ಜೀವನವು ಪತ್ರಿಕೋದ್ಯಮದ ಜೊತೆಗೆ ಬೆಸೆದುಕೊಂಡಿತ್ತು. ಇವರು ಸಂಸ್ಥಾನದಲ್ಲಿ ನಡೆದಂತಹ ಎಲ್ಲಾ ರಾಜಕೀಯ ಚಳುವಳಿಗಳಲ್ಲೂ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. ಆದರೆ ಪ್ರತಿಬಂಧಕಾಜ್ಞೆ ಅಥವಾ ಕಾಯಿದೆಭಂಗ ಚಳುವಳಿಗಳಲ್ಲಿ ಪ್ರತ್ಯಕ್ಷವಾಗಿ ಪಾತ್ರವಹಿಸುವ ಉತ್ಸಾಹ ಇವರಿಗೆ ಇರಲಿಲ್ಲ. ಇಂತಹ ಸಂದರ್ಭಗಳಲ್ಲಿ ಈ ಚಳುವಳಿಗಳಲ್ಲಿ ಪರೋಕ್ಷವಾಗಿ ಭಾಗವಹಿಸಿ ಈ ಎಲ್ಲ ಘಟನೆಗಳಿಗೂ ಪ್ರೋತ್ಸಾಹಗಳನ್ನು ಕೊಡುತ್ತಿದ್ದರು. ಈ ರೀತಿ ಇವರ ಕಾರ್ಯವ್ಯಾಪ್ತಿಗೆ ಬಂದ ಎಲ್ಲಾ ರೀತಿಯಾದ ಕಷ್ಟಗಳನ್ನು ನಿವಾರಿಸುವ ಮೂಲಕ ಸ್ವಾತಂತ್ರ್ಯದ ಹೋರಾಟದಲ್ಲಿ ಸಂತೋಷವನ್ನು, ದುಃಖವನ್ನು ಸಾಕಷ್ಟು ಅನುಭವಿಸಿದ್ದಾರೆ. ೧೯೩೫ರ ಕಾಲಘಟ್ಟದಲ್ಲಿ ಅಗರಂ ರಂಗಯ್ಯ ಮತ್ತು ತಗಡೂರು ರಾಮಚಂದ್ರರಾಯರನ್ನು ಅನೇಕ ಬಾರಿ ಪೋಲಿಸರು ಬಂಧಿಸಿ ಮತ್ತು ಸಾಕಷ್ಟು ಬಾರಿ ದಂಡವನ್ನು ವಸೂಲಿ ಮಾಡಿದ್ದಾರೆ. ಈ ರೀತಿಯಾದ ಹೋರಾಟಗಳಿಂದ ಗುರುತಿಸಿಕೊಂಡಿದ್ದ ರಂಗಯ್ಯನವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ರು ೧೯೩೯ರಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇರಬಾರದು ಎಂಬ ಅದೇಶವನ್ನು ಹೊರಡಿಸಿದರು. ಅಗರಂ ರಂಗಯ್ಯನವರು ಮತ್ತು ಅವರ ಜೊತೆಗೆ ಬಿ. ನಾರಾಯಣಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯ, ಎಂ.ಆರ್.ಎನ್.ಶಾಸ್ತ್ರಿ, ಎಂ.

ಶಂಕರಯ್ಯ, ಕೃಷ್ಣಪ್ಪ ಗೌಡ, ಶಿವನಂಜೇಗೌಡ ಮೊದಲಾದವರನ್ನು ಮೈಸೂರು 'ಡಿಸ್ಟ್ರಿಕ್ಟ್ ಪಬ್ಲಿಕ್ ಸೆಕ್ಯೂರಿಟಿ ಆಕ್ಟ್' ಎಂಬ ಕಾನೂನಿನ ಅನ್ವಯ ಹೊರಗೆ ದೂಡಿದರು. ಆಗ ಇವರೆಲ್ಲರೂ ಸೇರಿ ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್‌ನ್ನು ಪ್ರಚಾರ ಮಾಡಿದರು. ಕೆಲವು ತಿಂಗಳುಗಳ ನಂತರ ಆಜ್ಞೆಯ ಅವಧಿ ಮುಗಿದ ಮೇಲೆ ಮೈಸೂರು ಸಂಸ್ಥಾನಕ್ಕೆ ಹಿಂದಿರುಗಿ ತಮ್ಮ ಎಂದಿನ ಹೋರಾಟಗಳಲ್ಲಿ ತೊಡಗಿಸಿಕೊಂಡರು.

ಅಗರಂರವರು ೧೯೪೨ರ ಆಗಸ್ಟ್‌ರಿಂದ ೧೫ ತಿಂಗಳುಗಳ ಕಾಲ ಸ್ಥಾನಬದ್ಧತೆಯಲ್ಲಿ ಇರಬೇಕಾಯಿತು. ಜೈಲಿನಿಂದ ಹೊರಬಂದ ಮೇಲೆ ಸುಮಾರು ೯ ವರ್ಷಗಳ ಕಾಲ ಮೈಸೂರು ಸಿಟಿ ಮುನ್ಸಿಪಲ್ ಕೌನ್ಸಿಲರ್ ಆಗಿದ್ದರು. ೧೯೪೭ರಲ್ಲಿ ಆದ ಅರಮನೆ ಚಲೋ ಚಳುವಳಿಯೆಲ್ಲ ಮುಗಿದು ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಗಳಿಸಿಕೊಂಡ ನಂತರ ಅಗರಂ ರಂಗಯ್ಯನವರು ಸಾಧ್ವಿ ಪತ್ರಿಕೆಯ ಕೆಲಸದಲ್ಲಿ ಮಗ್ನರಾದರು. ರಾಜಕೀಯ ಜೀವನದಲ್ಲಿ ಅನೇಕ ಸಾರ್ವಜನಿಕ ಸಂಸ್ಥೆಗಳೊಡನೆ ಸಾಕಷ್ಟು ಸಂಬಂಧ ಸಂಪರ್ಕಗಳನ್ನು ಹೊಂದಿದ್ದರು. ಮೈಸೂರಿನ ಆ ಸಂಸ್ಥೆಗಳ ಹೆಸರುಗಳನ್ನು ಮತ್ತು ಅವರು ಹೊಂದಿದ್ದ ಸಂಬಂಧವನ್ನು ಇಲ್ಲಿ ಕೊಡಲಾಗಿದೆ.

೧. ಅನಾಥಾಲಯ ಮೈಸೂರು (ಸಮಿತಿ ಸದಸ್ಯ) ೨. ಸದ್ವಿದ್ಯಾ ಪಾಠಶಾಲಾ (ಕಾರ್ಯದರ್ಶಿ) ೩. ಪತ್ರಿಕೋದ್ಯೋಗಿಗಳ ಸಂಘದಲ್ಲಿ ಎಂಟು ವರ್ಷ (ಅಧ್ಯಕ್ಷಗಿರಿ) ೪. ಬ್ರಾಹ್ಮಣಧರ್ಮ ಸಹಾಯ ಸಭಾ (ಅಧ್ಯಕ್ಷತೆ) ೫. ವೇದಶಾಸ್ತ್ರಪೋಷಣ ಸಭೆ (ಸಮಿತಿಯ ಸದಸ್ಯ) ೬. ಶಂಕರಸಮಿತಿ (ಸದಸ್ಯ) ೭. ಜಗದಂಬ ಶಿಶುವಿಹಾರ (ಅಧ್ಯಕ್ಷತೆ) ೮. ಉಡುಪಿ ಶ್ರೀಕೃಷ್ಣಮಂದಿರ (ಉಪಾಧ್ಯಕ್ಷತೆ) ೯. ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನ (ಧರ್ಮದರ್ಶಿ)೧೦. ರಾಮೇಶ್ವರಸ್ವಾಮಿ ದೇವಸ್ಥಾನ (ಧರ್ಮದರ್ಶಿ).

'ಕನ್ನಡ ಪತ್ರಿಕಾರಂಗದ ಪಿತಾಮಹ' ಎಂದು ಗುರುತಿಸಲಾದ ಮೈಸೂರಿನ ವಿ.ಎಂ.ವೆಂಕಟಕೃಷ್ಣಯ್ಯನವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಪಿ.ಆರ್.ರಾಮಯ್ಯ ಬೆಂಗಳೂರಿನಲ್ಲಿ 'ತಾಯಿನಾಡು' ಪತ್ರಿಕೆಯನ್ನು ಪ್ರಾರಂಭಿಸಿದರೆ ಮತ್ತೊಬ್ಬ



ಆಪ್ತ ಶಿಷ್ಯರಾಗಿದ್ದ ಅಗರಂ ರಂಗಯ್ಯನವವರು ಮೈಸೂರಿನಲ್ಲಿ ಸಾಧ್ವಿ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡರು.

ಅಗರಂ ರಂಗಯ್ಯನವರು ಮತ್ತು ವಿ.ನಾಗರಾಜ್‌ರಾವ್ ನಡುವೆ ನಡೆದ ರೇಡಿಯೋ(ಆಕಾಶವಾಣಿ) ೧೯೭೨ ಫೆಬ್ರವರಿ ೧೮ರ ಸಂದರ್ಶನದಲ್ಲಿ ಅಗರಂ ರಂಗಯ್ಯನವರು ತಮ್ಮ ಸಾಧ್ವಿ ಪತ್ರಿಕೆಯು ಬಗ್ಗೆ ಸಾಕಷ್ಟು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಈ ಸಂದರ್ಶನದಲ್ಲಿ ಅಗರಂ ರಂಗಯ್ಯನವರು ಮೈಸೂರು ನಗರದಲ್ಲಿ ಸಾಧ್ವಿ ಎಂಬ ಪತ್ರಿಕೆಯ ಕನ್ನಡದಲ್ಲಿ ಹೊರಡಿಸಲಾದ ದಿನಪತ್ರಿಕೆಯಾಗಿದೆ. ಇದನ್ನು ವೃದ್ಧಪಿತಾಮಹ ವೆಂಕಟಕೃಷ್ಣಯ್ಯ ಎಂಬುವರು ಸ್ಥಾಪಿಸಿದರು.ಈ ಪತ್ರಿಕೆ ಪ್ರಾರಂಭದಲ್ಲಿ ವಾರಪತ್ರಿಕೆಯಾಗಿ ಪ್ರಾರಂಭವಾಗಿ ಆರಂಭದ ದಿನಗಳನ್ನು ಬಹಳ ಕಠಿಣವಾಗಿ ಕಳೆಯಿತು. ಸರ್ಕಾರ ಸುಮಾರು ಮೂರು ವರ್ಷಗಳ ಕಾಲ ಪತ್ರಿಕೆಯ ಮೇಲೆ ನಿರ್ಬಂಧ ವಿಧಿಸಿತ್ತು. ೧೯೪೨ ರಿಂದ ಇದನ್ನು ದಿನಪತ್ರಿಕೆಯಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು. ನಾನು ಪತ್ರಿಕೆಯಲ್ಲಿ ಕೆಲಸ ಮಾಡಿದ ಸವಿನೆನಪಿಗಾಗಿ ಸಾಧ್ವಿ ಪತ್ರಿಕೆಯನ್ನು ನಡೆಸಲು ಅವರು ನನಗೊಂದು ಅವಕಾಶವನ್ನು ಮಾಡಿಕೊಟ್ಟರು. ಪ್ರಾರಂಭದಲ್ಲಿ ಸಾಧ್ವಿ ಪತ್ರಿಕೆಯು ವಾರಪತ್ರಿಕೆಯಾಗಿ ೫೦೦ ಪ್ರತಿಗಳನ್ನು ನಂತರ ಸುಮಾರು ೨೦೦೦ ಪ್ರತಿಗಳನ್ನು ಅಚ್ಚು ಹಾಕಲಾಗುತ್ತಿತ್ತು. ೧೯೪೨ರ ನಂತರ ಸುಮಾರು ಆರು ಸಾವಿರದವರೆಗೂ ಹೋಗಿ ಯಾವುದೇ ನಷ್ಟವನ್ನು ಈ ಪತ್ರಿಕೆ ಇದುವರೆಗೂ ಅನುಭವಿಸಿಲ್ಲ ಎಂದು ಅತ್ಯಂತ ಸಂತೋಷದಿಂದ ತಿಳಿಸಿದರು. ಈ ಪತ್ರಿಕೆಯನ್ನು ನಡೆಸಲು ಬಂಡವಾಳವು ಅತ್ಯಲ್ಪವಾಗಿತ್ತು. ಪತ್ರಿಕೆ ನಡೆಸುವುದರಿಂದ ಬಂದ ಲಾಭವನ್ನು ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮುಂತಾದ ಸಂಸ್ಥೆಗಳಿಗೆ ಸಹಾಯ ಕೊಡುವುದರ ಮೂಲಕ ಜನಸೇವಾ ಕಾರ್ಯವನ್ನೂ ಮಾಡಿದೆ. ಈ ಪತ್ರಿಕೆಯಿಂದ ಬಂದ ವರಮಾನದಿಂದ ಅಗರಂ ರಂಗಯ್ಯನವರು ತಮ್ಮ ಗ್ರಾಮದ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮಕ್ಕೆ ಸುಮಾರು ೪೫ ಸಾವಿರ ರೂ.ಗಳನ್ನು ನೀಡಿದ್ದಾರೆ. ಗ್ರಾಮದ ಪ್ರಾಥಮಿಕ ಶಾಲೆಗೆ ಸುಮಾರು ಆರು ಸಾವಿರ ರೂಪಾಯಿಗಳನ್ನು, ಮೈಸೂರು ನಗರದ ಶಂಕರ ಮಠದ ಕಲ್ಯಾಣ ಮಂಟಪಕ್ಕೆ ರೂ.೫೦೦೦ ರೂಗಳನ್ನು,

ವಿಶ್ವವಿದ್ಯಾನಿಲಯವು ಪತ್ರಿಕೆಯ ರಜತ ಮಹೋತ್ಸವವನ್ನು ನಡೆಸಿದ ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಎರಡು ಸಾವಿರ ರೂಪಾಯಿಗಳನ್ನು ದತ್ತಿಯನ್ನು ನೀಡಲಾಯಿತು. ಹಾಗೆಯೇ ಪತ್ರಿಕೆಯಿಂದ ಬಂದ ಲಾಭವನ್ನು ಸಾರ್ವಜನಿಕ ಕಾರ್ಯಗಳಿಗೆ ಬಳಸಲಾಗಿದೆ. ಸುಮಾರು ಒಂದು ಲಕ್ಷದವರೆಗೂ ಸಹಾಯವನ್ನು ಮಾಡಲಾಗಿದೆ ಎಂದು ಅಗರಂ ರಂಗಯ್ಯನವರು ತಿಳಿಸಿದ್ದಾರೆ. ಇವೆಲ್ಲಾ ಕಾರ್ಯಗಳು ಆಗಲು ಗುರುಗಳಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರು ಮತ್ತು ಮೈಸೂರು ಜನತೆಯ ಪ್ರೀತಿ ವಿಶ್ವಾಸವೇ ಕಾರಣ ಎಂದು ಹೇಳಿದ್ದಾರೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಹೇಳುತ್ತಾ, ಸ್ವಲ್ಪ ಧಾರಾಳತನ ಇದ್ದರೆ ಪತ್ರಿಕೆಯು ಉನ್ನತಮಟ್ಟಕ್ಕೆ ಹೋಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

ಭಾಷಾ ಪತ್ರಿಕೆಗಳ ಬೆಳವಣಿಗೆಯ ಪ್ರಶ್ನೆಗೆ ಉತ್ತರಿಸುತ್ತಾ ಇಂದಿನ ಕಾಲದಲ್ಲಿ ಇದು ಅತ್ಯಂತ ಪ್ರಗತಿಪರವಾಗಿದೆ ಹಾಗೂ ಹಿಂದಿಗಿಂತ ಅದರ ವ್ಯಾಪ್ತಿ ಮತ್ತು ಪ್ರಭಾವ ಜಾಸ್ತಿಯಾಗುತ್ತಿದೆ, ಆಂಗ್ಲ ಪತ್ರಿಕೆಗಿಂತಲೂ ಭಾಷಾ ಪತ್ರಿಕೆಗಳ ಬೆಳವಣಿಗೆ, ಪ್ರಭಾವ, ವ್ಯಾಪ್ತಿ, ಅವಕಾಶ, ಪ್ರಗತಿ ಹೆಚ್ಚಾಗುತ್ತಿದೆ ಎಂದು ತಿಳಿಸಿದರು. ಸರ್ಕಾರಿ ಜಾಹೀರಾತು ಧೋರಣೆ ಹೇಗಿರಬೇಕು ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಪತ್ರಿಕೆಯು ಪ್ರಚಾರದ ಮೇಲೆ ಅವಲಂಬಿಸಿರಬೇಕೆ ಹೊರತು ಸರ್ಕಾರದ ರೀತಿ ನೀತಿಗಳು, ಅಭಿಪ್ರಾಯದ ಮೇಲೆ ಇರಬಾರದು ಎಂಬುದನ್ನು ಕೂಡ ಸ್ಪಷ್ಟಪಡಿಸಿದರು.

ಜಾಹೀರಾತಿನಿಂದ ಬರುವ ಲಾಭದಿಂದ ಕೆಲಸ ಮಾಡುವ ಸ್ಥಿತಿ ಸರಿಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಜಾಹೀರಾತು ಎಂಬುದು ಬಹಳ ಮುಖ್ಯವಾದ ಭಾಗ ಇದರಿಂದ ವರಮಾನ ಬರಬೇಕು ಮತ್ತು ಪ್ರಸಾರದಿಂದಲೂ ಕೂಡ ಬರಬೇಕು. ಎರಡೂ ಒಟ್ಟು ಸೇರಿ ಪತ್ರಿಕೆ ನಡೆಯಬೇಕು. ಯಾವುದೇ ಒಂದನ್ನು ಬಿಟ್ಟರೂ ಆಗುವುದಿಲ್ಲ. ಹಾಗಾಗಿ ಎರಡೂ ಒಟ್ಟಿಗೆ ಸೇರಿ ಪತ್ರಿಕೆ ನಡೆಯಬೇಕು. ಭಾಷಾ ಮತ್ತು ಸಣ್ಣಸಣ್ಣ ಕನ್ನಡ ಪತ್ರಿಕೆಗಳು ಮೊದಲು ಕೇವಲ ಮೈಸೂರು ಮತ್ತು ಬೆಂಗಳೂರಿನಂತಹ ನಗರಗಳಲ್ಲಿ ಮಾತ್ರ ಇದ್ದವು. ಆದರೆ ಇಂದು ಜಿಲ್ಲೆಗಳಲ್ಲೂ ಪತ್ರಿಕೆಗಳು ಪ್ರಾರಂಭವಾಗಿವೆ. ಕೆಲವು ಜಿಲ್ಲೆಗಳಲ್ಲಿ ಮಾತ್ರ ಪತ್ರಿಕೆಗಳು



ಇಂದಿಗೂ ಇಲ್ಲ. ಮೈಸೂರಿನಲ್ಲಿ ಸುಮಾರು ೧೨ ದಿನಪತ್ರಿಕೆಗಳಿವೆ ಎಂದು ತಿಳಿಸಿದರು.

ಪತ್ರಿಕೆಗಳ ಉನ್ನತಿಗಾಗಿ ಸರ್ಕಾರ ಯಾವ ರೀತಿಯಾದ ಸಹಾಯವನ್ನು ನೀಡಬಹುದು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಮೊದಲನೆಯದಾಗಿ ನ್ಯೂಸ್ ಪ್ರಿಂಟ್ ಕಾಗದ ಸಿಗುವುದು ಬಹಳ ಕಷ್ಟವಾಗಿರುವುದರಿಂದ ಮುದ್ರಣಕ್ಕೆ ಬೇಕಾಗುವ ಕಾಗದವನ್ನು ಸರ್ಕಾರ ವ್ಯವಸ್ಥೆ ಮಾಡಬೇಕು. ಜಾಹೀರಾತಿಗಾಗಿ ಉದಾರವಾದ ನೀತಿ ಇರಬೇಕು ಸ್ವತಂತ್ರವಾದಂತಹ ಏಜೆನ್ಸಿಯನ್ನು ಏರ್ಪಾಡು ಮಾಡಿ ಅವುಗಳ ಮೂಲಕ ಎಲ್ಲಾ ಪತ್ರಿಕೆಗಳು ಇರುವಂತೆ ನಿಷ್ಪಕ್ಷಪಾತವಾಗಿ ನೋಡಿಕೊಳ್ಳಬೇಕು ಎಂದು ಹೇಳಿದರು.

ವೃತ್ತ ಪತ್ರಿಕೆಯ ಅಭಾವದಿಂದ ಪತ್ರಿಕೆಗಳಿಗೆ, ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಅಭಾವದಿಂದ ಧಕ್ಕೆ ಬರುವುದಿಲ್ಲ, ಆದರೆ ಅಭಾವವನ್ನು ಸರ್ಕಾರ ಬಳಸಿಕೊಂಡರೆ ಅದಕ್ಕೆ ಧಕ್ಕೆ ಬರುತ್ತದೆ. ಪತ್ರಿಕಾ ಸ್ವಾತಂತ್ರ್ಯ ಮತ್ತು ಸಂಪಾದಕತ್ವದ ಪ್ರಶ್ನೆಗೆ ಉತ್ತರಿಸುತ್ತಾ ಹಿಂದಿನ ಕಾಲದಲ್ಲಿ ಪತ್ರಿಕೆಯ ಉದ್ದೇಶ ಕೇವಲ ಸ್ವಾತಂತ್ರ್ಯವನ್ನು ಪಡೆಯುವುದು ಮಾತ್ರವಾಗಿತ್ತು. ಈಗ ಉದ್ಯಮವಾಗಿ ನಂತರ ಉದ್ಯೋಗವಾಗಿ ಬದಲಾಗಿದೆ ಎಂದು, ಇತ್ತೀಚೆಗೆ ಹಲವು ಪತ್ರಿಕೆಗಳಲ್ಲಿ ಮಾಲೀಕರಿಗೂ ಸಂಪಾದಕರಿಗೂ ಹಲವಾರು ಭಿನ್ನಾಭಿಪ್ರಾಯಗಳು ಬಂದಿವೆ. ಸಂಪಾದಕರಿಗೆ ಮತ್ತು ಪತ್ರಿಕೋದ್ಯಮ ನಡೆಸುವವರಿಗೆ ಪ್ರಾಮಾಣಿಕತೆ ಪ್ರಧಾನವಾಗಿರಬೇಕು, ಲೋಕದ ವ್ಯವಹಾರ ಜ್ಞಾನವಿರಬೇಕು. ಹಾಗೆಯೇ ಅಲ್ಪವಾದರೂ ಸಾಹಿತ್ಯ ಜ್ಞಾನವಿರಬೇಕು ಎಂದು ಹೇಳಿದರು.

## ಮಲೆಯೂರು ಚಿಕ್ಕಲಿಂಗಪ್ಪನವರು

ಶ್ರೀಯುತರು ಚಾಮರಾಜನಗರ ಜಿಲ್ಲೆಯ ಮಲೆಯೂರು ಎಂಬ ಗ್ರಾಮದಲ್ಲಿ ಜನಿಸಿದರು. ಖ್ಯಾತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ನಿಸ್ವಾರ್ಥ ಸೇವೆಗೆ ಹೆಸರುವಾಸಿಯಾಗಿದವರು. ಚಾಮರಾಜನಗರದಲ್ಲಿ ಕಾಂಗ್ರೆಸ್ ಪ್ರಾರಂಭಿಸಲು ಕಾರಣವಾದವರಲ್ಲಿ ಇವರು ಅತ್ಯಂತ ಪ್ರಮುಖರು. ಸ್ವಾತಂತ್ರ್ಯ

ಹೋರಾಟ ಕೇವಲ ನಗರಗಳಿಗೆ ಸೀಮಿತವಾಗಿದ್ದ ಕಾಲದಲ್ಲಿ ಇವರ ಹೋರಾಟದಿಂದ ಚಳುವಳಿಯು ಗ್ರಾಮೀಣ ಮಟ್ಟಕ್ಕೂ ಹೋಗಿ, ಜನತೆಯು ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಆಯಿತು. ಇವರು ಅತ್ಯಂತ ಶ್ರೀಮಂತ ಮನೆತನದವರಾಗಿದ್ದರು ಕೂಡ ನಿಸ್ವಾರ್ಥ ಸೇವೆಯಿಂದ ದೇಶಸೇವೆಗೆ ಹೆಸರಾದವರು. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಅತ್ಯಂತ ಶಿಸ್ತಿನ ನಾಯಕರಾಗಿದ್ದರು. ಚಾಮರಾಜನಗರ ತಾಲ್ಲೂಕಿನಲ್ಲಿ ಸಾರ್ವಜನಿಕ ಜೀವನದ ಎಲ್ಲಾ ಮುಖಂಡರುಗಳೂ ದಿವಾನ್ ಸರ್ ಮಿರ್ಜಾ ಸಾಹೇಬರ ಹಿಂಬಾಲಕರಾಗಿದ್ದರು. ಮತ್ತೆ ಚಾಮರಾಜನಗರ ತಾಲ್ಲೂಕಿನಲ್ಲಿ ಕಾಂಗ್ರೆಸ್ ತಲೆಯೆತ್ತದಂತೆ ಮಾಡುತ್ತೇನೆ ಎಂದು ಕೆಲವು ನಾಯಕರು ಶಪಥ ಮಾಡಿದ್ದುಂಟು. ಇಂತಹ ಸಂದಿಗ್ಧ ರಾಜಕೀಯ ಸನ್ನಿವೇಶದಲ್ಲಿ ಮಲೆಯೂರು ಚಿಕ್ಕಲಿಂಗಪ್ಪನವರು ಸಿ. ಗೋಪಾಲ್‌ರಾವ್ ಅವರ ನಾಯಕತ್ವದಲ್ಲಿ ಯುವಕರ ಒಂದು ಗುಂಪಿನಿಂದ ಕಾಂಗ್ರೆಸ್ಸನ್ನು ಅದರ ಚಟುವಟಿಕೆಗಳನ್ನು ತಾಲ್ಲೂಕಿನಲ್ಲಿ ತರಲು ಸಾಕಷ್ಟು ಪ್ರಯತ್ನಿಸಿದರು.

ಮಲೆಯೂರು ಚಿಕ್ಕಲಿಂಗಪ್ಪನವರು ಅತ್ಯಂತ ಶಿಸ್ತು, ನಿಸ್ವಾರ್ಥ ಸೇವೆ ಮತ್ತು ಜಾತ್ಯತೀತ, ಧರ್ಮಾತೀತ ರಾಜಕೀಯಕ್ಕೆ ಹೆಸರಾದವರು. ತಾಲ್ಲೂಕಿನ ಬಡಜನರ ವಿಷಯದಲ್ಲಿ ಕರುಣಾಳುಗಳಾಗಿದ್ದರು. ಸಾಮಾಜಿಕ ಸೇವೆಗಳನ್ನು ಮಾಡುತ್ತಿದ್ದರು. ಆದ್ದರಿಂದ ಇಡೀ ರೈತಾಪಿ ವರ್ಗದ ಜನರು ಅವರನ್ನು ಅತ್ಯಂತ ಪ್ರೀತಿ–ವಿಶ್ವಾಸಗಳಿಂದ ಕಾಣುತ್ತಿದ್ದರು. ಇವರು ವೃತ್ತಿ ವಾಣಿಜ್ಯ ವ್ಯವಹಾರಗಳ ಸಂಬಂಧ ಮದರಾಸು ಪ್ರಾಂತ್ಯಕ್ಕೆ ಹೋಗಿ ಬರುವುದು ಸರ್ವೇಸಾಮಾನ್ಯವಾಗಿತ್ತು. ಹೀಗೆ ಮದ್ರಾಸ್‌ನ ಸತ್ಯಮಂಗಲಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಸ್ವಾತಂತ್ರ್ಯದ ಹೋರಾಟ ಅವರ ಗಮನವನ್ನು ಸೆಳೆಯಿತು. ಇದರಿಂದ ಹೆಚ್ಚಿಗೆ ಪ್ರಭಾವಿತರಾದರು. ಹಾಗೆಯೇ ಅಲ್ಲಿಯ ಕಾಂಗ್ರೆಸ್ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿ ಅದೇ ಮಾದರಿಯಲ್ಲಿ ಚಾಮರಾಜನಗರದಲ್ಲಿ ಕೂಡ ಹಲವು ಯುವಕರ ಗುಂಪು ಕಟ್ಟಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸ್ಥಾಪಿಸಲು ಉತ್ಸಾಹವನ್ನು ತೋರಿದರು. ಆ ಗುಂಪಿಗೆ ಸಹಾಯ ಸಹಕಾರವನ್ನು ಸಾಕಷ್ಟು ನೀಡುತ್ತಿದ್ದರು. ಚಾಮರಾಜನಗರ ತಾಲ್ಲೂಕಿನಲ್ಲಿ ಹಿಂದಿನ ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸ್‌ನ



ಉಮೇದುದಾರರಾಗಿ ನಿಂತು, ಅದರಲ್ಲಿ ಗೆದ್ದು ,ಜನರು ಮೆಚ್ಚುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದರು.ಕಾಂಗ್ರೆಸ್‌ನ ಚಳುವಳಿಗಳಲ್ಲಿ ಭಾಗವಹಿಸಿ ಹಲವಾರು ಬಾರಿ ಜೈಲುವಾಸವನ್ನು ಕಂಡಿದ್ದಾರೆ. ಈ ರೀತಿಯಲ್ಲಿ ಇಡೀ ಚಾಮರಾಜನಗರ ಜಿಲ್ಲೆಯಲ್ಲಿ ಕಾಂಗ್ರೆಸ್ ಸ್ಥಾಪನೆ ಮತ್ತು ಕಾಂಗ್ರೆಸ್ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಕಾಂಗ್ರೆಸ್ಸನ್ನು ಜಿಲ್ಲೆಯಲ್ಲಿ ಬೆಳೆಸಿದ ಕೀರ್ತಿ ನಿಸ್ವಾರ್ಥ ಸ್ವಾತಂತ್ರ್ಯದ ಹೋರಾಟಗಾರರಾದ ಮಲೆಯೂರು ಚಿಕ್ಕಲಿಂಗಪ್ಪನವರಿಗೆ ಸಲ್ಲುತ್ತದೆ.

ಹಾಗಾಗಿಯೇ ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷಗಳಾದರೂ ಇಡೀ ತಾಲ್ಲೂಕಿನ ಜನ ಇಂದಿಗೂ ಇವರನ್ನು ಸ್ಮರಿಸುತ್ತಾರೆ.ಇವರ ಮಕ್ಕಳು ಮತ್ತು ಮೊಮ್ಮಕ್ಕಳು ಬಹಳ ಸಜ್ಜನಿಕೆ, ಸ್ವಾಭಿಮಾನದವರಾಗಿದ್ದಾರೆ. ಇವರ ಮಗ ಲೇಟ್ ಶ್ರೀ ಎಂ.ಸಿ. ಬಸಪ್ಪನವರು ಕೂಡ ಜಿಲ್ಲೆಯಲ್ಲಿ ಪ್ರಬುದ್ಧ ಮತ್ತು ಜಾತ್ಯತೀತ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದವರು. ಇವರು ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್(ಕಾಂಗ್ರೆಸ್ ಓ)–ಲೋಕಲ್ ಅಥಾರಿಟಿಸ್,ಮೈಸೂರು ಕವ್ ಕೂರ್ಗ್(೧೯೭೦–೭೬) ಆಗಿದ್ದರು.

## ಸಿ.ರಂಗಸ್ವಾಮಿರವರು

ಶ್ರೀಯುತರು ಪುಟ್ಟೇಗೌಡ ಮತ್ತು ರಂಗಮ್ಮ ದಂಪತಿಯ ಮಗನಾಗಿ ೧೯೦೬ ರಲ್ಲಿ ಚಾಮರಾಜನಗರದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಚಾಮರಾಜನಗರದಲ್ಲಿ ಪೂರೈಸಿದರು. ಬಾಲ್ಯದಿಂದಲೇ ಉತ್ತಮ ಕ್ರೀಡಾಪಟುವಾಗಿದ್ದರು. ಗಾಂಧೀಜಿಯರವರ ನಾಯಕತ್ವದ ಹೋರಾಟದಿಂದ ಪ್ರೇರಿತರಾಗಿ ದೇಶಸೇವೆಗೆ ಧುಮುಕಿದರು.ಅಪ್ಪಟ ಗಾಂಧೀವಾದಿಯಾಗಿದ್ದ ಇವರು ತಮ್ಮ ಜೀವಮಾನವೆಲ್ಲಾ ಖಾದಿಧಾರಿಯಾಗಿದ್ದರು.೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಭಾಗವಹಿಸಿ ಚಾಮರಾಜನಗರವನ್ನು ಪ್ರತಿನಿಧಿಸಿದ ಪ್ರಮುಖ ಹೋರಾಟಗಾರರಲ್ಲಿ ಇವರು ಒಬ್ಬರು. ಈ ಚಳುವಳಿಯಲ್ಲಿ ದಸ್ತಗಿರಿಯಾಗಿ ಸುಮಾರು ಆರು ತಿಂಗಳು ಸೆರೆಮನೆವಾಸ ಅನುಭವಿಸಿದರು. ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ

ಭಾಗವಹಿಸಿ ತುಂಬಾ ಸಕ್ರಿಯರಾಗಿ ಹೋರಾಡಿ ೨೮ ದಿನ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಸೆರೆಮನೆವಾಸ ಅನುಭವಿಸಿದರು.ಈ ಸಂದರ್ಭದಲ್ಲಿ ಇವರ ಜೊತೆ ನಿಜಲಿಂಗಪ್ಪನವರು, ದಾಸಪ್ಪನವರು, ಯಶೋಧರ ದಾಸಪ್ಪನವರು, ಎಂ.ಎನ್.ಜೋಯಿಸರು ಇದ್ದರು.ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಇವರ ಮನೆಯಲ್ಲಿ ಎಲ್ಲರಿಗೂ ಸಿಹಿ ಹಂಚಿ ಅತ್ಯಂತ ಸಂಭ್ರಮದಿಂದ ಆಚರಣೆಯನ್ನು ಮಾಡುತ್ತಿದ್ದರು. ಶ್ರೀಯುತರು ಜೀವನ ಪರ್ಯಂತ ದೇಶಕ್ಕಾಗಿ ತಮ್ಮ ತನುಮನಧನವನ್ನು ತ್ಯಾಗ ಮಾಡಿದವರು. ಇವರಿಗೆ ೧೯೭೨ರಲ್ಲಿ ಭಾರತ ಸರ್ಕಾರ ತಾಮ್ರಪತ್ರ ನೀಡಿ ಗೌರವಿಸಿದೆ. ಇವರ ಮಕ್ಕಳು ಕೂಡ ಕನ್ನಡ ನಾಡು ನುಡಿಗಾಗಿ ದುಡಿದವರು. ಇವರ ಹಿರಿಯ ಮಗ ಸಿ.ಆರ್. ಗೋಪಾಲ್‌ರವರು ಕರ್ನಾಟಕ ಏಕೀಕರಣಕ್ಕಾಗಿ ೧೯೫೬ರಲ್ಲಿ ಹೋರಾಡಿದವರು. ಇನ್ನೊಬ್ಬ ಪುತ್ರರಾದ ಶ್ರೀನಿವಾಸಗೌಡರವರು ಪ್ರಸ್ತುತ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ರಾಜ್ಯಾಧ್ಯಕ್ಷರಾಗಿದ್ದಾರೆ.

## ಡಿ.ಜೆ. ಶಂಕರಪ್ಪನವರು

ಸಮಾಜವಾದಿಗಳು, ಸತ್ಯವಂತರು, ಗಾಂಧಿವಾದಿಗಳು, ಪ್ರಾಮಾಣಿಕರು ಮತ್ತು ಜಾತ್ಯತೀತವಾದ ತತ್ವ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಜೀವನ ನಡೆಸಿದ ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅತ್ಯಂತ ಪ್ರಮುಖರು ಶ್ರೀಯುತ ಡಿ.ಜೆ.ಶಂಕರಪ್ಪನವರು. ಇವರು ೧೯೦೬ರಂದು ಚಾಮರಾಜನಗರ ತಾಲ್ಲೂಕಿನ ದೊಡ್ಡರಾಯಪೇಟೆಯಲ್ಲಿ ಜನಿಸಿದರು. ಊರಿನಲ್ಲಿ ಮೊದಲಿನಿಂದಲೂ ಗೌಡಿಕೆ ಮಾಡಿಕೊಂಡು ಬಂದಂತಹ ಕುಟುಂಬವಾಗಿದ್ದು, ಇವರ ತಂದೆ ಜವನಪ್ಪನವರು. ವ್ಯವಸಾಯಗಾರರಾಗಿದ್ದರು. ಶ್ರೀಯುತರು ಮೈಸೂರು ಸಂಸ್ಥಾನದಲ್ಲಿ ನಡೆದ ಹೋರಾಟಗಳಲ್ಲಿ ಅದರಲ್ಲೂ ೧೯೩೮ರ ವಿದುರಾಶ್ವತ್ಥ ಚಳುವಳಿ, ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ, ೧೯೪೭ರ ಮೈಸೂರು ಚಲೋ ಚಳುವಳಿಗಳಲ್ಲಿ ಪ್ರಮುಖವಾಗಿ ಭಾಗವಹಿಸಿದ್ದರು.

ಮುನಿಸಿಪಲ್ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪಾಸ್ ಮಾಡಿ ನಂತರ ಎಸ್.ಎಸ್.ಎಲ್.ಸಿ.ವರೆಗೂ ವಿದ್ಯಾಭ್ಯಾಸ ಮಾಡಿದರು. ಅಂದಿನ ಕಾಲಕ್ಕೆ ಇವರು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು.



ಬಾಲ್ಯದಿಂದಲೇ ವರ್ತಮಾನ ಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಇಟ್ಟುಕೊಂಡಿದ್ದರು. ರೇಷ್ಮೆ ಇಲಾಖೆಯ ಕೆಲಸದ ಅವಕಾಶವನ್ನು ತೊರೆದು ತಮ್ಮ ಜೀವಮಾನವನ್ನೇ ದೇಶಕ್ಕಾಗಿ ಮುಡಿಪಾಗಿಟ್ಟವರು ಡಿ.ಜೆ.ಶಂಕರಪ್ಪನವರು ಸ್ವಾತಂತ್ರ್ಯ ಹೋರಾಟಕ್ಕೆ ಬಂದ ಘಟನೆ ಅತ್ಯಂತ ಕುತೂಹಲಕಾರಿಯಾಗಿದೆ. ಒಂದು ದಿನ ಶಾಲೆಯಲ್ಲಿ ಕಲಿಯುವಾಗ ಶಾಲೆಯ ಹೊರಗೆ ಒಬ್ಬ ಬ್ರಿಟಿಷ್(ಮಾರಿಸ್ ಇರಬಹುದು) ವ್ಯಕ್ತಿ ಕುದುರೆಯಲ್ಲಿ ಹೋಗುತ್ತಿದ್ದನು, ಅವನ ಹಿಂದೆ ಚಾಮರಾಜನಗರದವರೇ ಆದ ಸಿ.ವಿ. ರಾಮನ್‌ರವರು ನಡೆದು ಹೋಗುತ್ತಿದ್ದರು. ಇದನ್ನು ನೋಡಿ ಶಿಕ್ಷಕರಿಗೆ ಪ್ರಶ್ನೆ ಕೇಳುತ್ತಾರೆ ಏಕೆ? ಬ್ರಿಟಿಷರು ಮಾತ್ರ ಕುದುರೆ ಮೇಲೆ ನಾವು ಮಾತ್ರ ನಡೆದೆ, ಹೋಗಬೇಕು ಎಂದು ಕೇಳಿದಾಗ ಶಿಕ್ಷಕರು ಅವರ ದೇಶ ಸೂರ್ಯ ಮುಳುಗದ ದೇಶ, ಅವರು ಇಡೀ ವಿಶ್ವದಲ್ಲೇ ವಸಾಹತುವನ್ನು ಹೊಂದಿ ಬಲಾಢ್ಯರಾಗಿದ್ದಾರೆ. ಅವರು ಬೆಡಗುಳಿ ಪ್ರದೇಶದಲ್ಲಿ ಎಸ್ಟೇಟ್ ಮಾಡಲು ಬಂದಿದ್ದು ರಾಜರಿಂದ ೯೯ ವರ್ಷಕ್ಕೆ ಗುತ್ತಿಗೆ ಪಡೆದಿರುತ್ತಾರೆ ಎಂದು ಶಿಕ್ಷಕರು ಹೇಳಿದಾಗ ಬ್ರಿಟಿಷರ ಆ ದಬ್ಬಾಳಿಕೆ ಮತ್ತು ದರ್ಪವನ್ನು ಮುರಿಯಲು ಅಲ್ಲಿಂದಲೇ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹತ್ತಿಸಿಕೊಂಡರು. ನಂತರ ಗಾಂಧೀಜಿಯವರ ನಾಯಕತ್ವಕ್ಕೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಚಾಮರಾಜನಗರದಲ್ಲಿ ಕಾಂಗ್ರೆಸ್ ಸದಸ್ಯತ್ವ ಆಗದಿದ್ದ ಕಾಲದಲ್ಲೇ ನೀಲಗಿರಿಗೆ ಹೋಗಿ ಸದಸ್ಯತ್ವ ಮಾಡಿಸಿಕೊಂಡು ತಂದವರು. ಮೈಸೂರಿನ ಕಾಂಗ್ರೆಸ್ ಮುಖಂಡರಾದ ಸಾಹುಕಾರ್ ಚೆನ್ನಯ್ಯನವರ ಕಟ್ಟಾ ಬೆಂಬಲಿಗರಾಗಿದ್ದರು. ಚಾಮರಾಜನಗರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷ ರಚಿಸಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ, ಮೈಸೂರಿನಲ್ಲಿ ಒಂದು ಜವಾಬ್ದಾರಿಯುತ ಸರ್ಕಾರ ಮತ್ತು ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ನಿರ್ಣಯ ಕೈಗೊಂಡು ಅದರಂತೆ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿ ಹೋರಾಟವನ್ನು ಮಾಡಿದವರು. ಇವರ ಕಾರ್ಯದಲ್ಲಿ ಜೊತೆಗೂಡಿ ಕೆಲಸ ಮಾಡಿದವರೆಂದರೆ ಸಿ.ಗೋಪಾಲ್‌ರಾವ್, ವೆಂಕಟರಾವ್, ಕೃಷ್ಣಮೂರ್ತಿ (ಕೊಚ್ಚಿಕಿಟ್ಟು) ರಂಗಸ್ವಾಮಿ, ರಂಗಸ್ವಾಮಿ ನಾಯಕ, ಮಲೆಯೂರು ಚಿಕ್ಕಲಿಂಗಪ್ಪ, ಎಸ್. ಪುಟ್ಟನಂಜಪ್ಪ, ಯತಿರಾಜು, ಗಾಂಧಿ ಬಸವಯ್ಯ, ನಾಗೇಶರಾವ್, ಕೆಂಪಶೆಟ್ಟಿ, ನಾಯಕರೆಲ್ಲ ಸೇರಿ ಚಾಮರಾಜನಗರದ ಗುರುನಂಜಶೆಟ್ಟರ ಮಕ್ಕಳಾದ ಜಿ.ರಾಜಶೇಖರ್

ಇವರ ಮನೆಯಲ್ಲಿ ಕಾಂಗ್ರೆಸ್ ಸಭೆಗಳನ್ನು ಗುಪ್ತವಾಗಿ ನಡೆಸುತ್ತಾ ತಾಲ್ಲೂಕಿನಲ್ಲಿ ಕಾಂಗ್ರೆಸ್ ಬೆಳವಣಿಗೆ ಮತ್ತು ದೇಶದಲ್ಲಿ ಗಾಂಧೀಜಿಯವರ ಹೋರಾಟಗಳಿಗೆ, ಅವರ ಸಿದ್ಧಾಂತಗಳನ್ನು ಬಲಪಡಿಸುವುದರ ಮೂಲಕ ದೇಶದ ಸ್ವಾತಂತ್ರ್ಯದ ಹೋರಾಟಕ್ಕೆ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ.

ಡಿ.ಜೆ. ಶಂಕರಪ್ಪನವರು ಈ ಹೋರಾಟದಲ್ಲಿ ಪ್ರಾಣ ಕೊಟ್ಟಾದರೂ ಸರಿಯೇ ಹೋರಾಟ ಮಾಡಿ ಜವಾಬ್ದಾರಿ ಸರಕಾರ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸಲು, ದೇಶವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಮುಕ್ತಗೊಳಿಸಲು ಕಠಿಣವಾದ ಪರಿಶ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿದರು.

ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ತಗಡೂರಿಗೆ ಮಹಾತ್ಮ ಗಾಂಧೀಜಿ ಬಂದಿದ್ದರು. ಆ ಕಾರ್ಯಕ್ರಮಕ್ಕೆ ಚಾಮರಾಜನಗರದಿಂದ ಚಳುವಳಿಗಾರರೆಲ್ಲಾ ಹೊರಡಲು ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿದರು. ಅವರನ್ನು ಕರೆದುಕೊಂಡು ಬಂದು ಅಂದಿನ ಸಭೆಯಲ್ಲಿ ಗಾಂಧೀಜಿ ಜೊತೆಯಲ್ಲಿ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಷಯಗಳ ಬಗ್ಗೆ ಚರ್ಚಿಸಿದರು. ಈ ಸಭೆಯಲ್ಲಿ ಡಿ.ಜೆ.ಶಂಕರಪ್ಪನವರು ಕೂಡ ಉಪಸ್ಥಿತರಿದ್ದು, ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರಲು ಪ್ರೇರಣೆಯಾದದ್ದು ವಿಶ್ವಕರ್ನಾಟಕ ಪತ್ರಿಕೆ ಮತ್ತು ಗಾಂಧಿ, ಸುಭಾಷ್, ನೆಹರುರಂತಹ ಮಹಾನ್ ನಾಯಕರ ಭಾಷಣಗಳು. ೧೯೩೫ನಲ್ಲಿ ತಮಿಳುನಾಡಿನ ಕಾಂಗ್ರೆಸ್‌ನಲ್ಲಿ ಸ್ವಯಂಸೇವಕನಾಗಿ ಕಾರ್ಯವನ್ನು ನಿರ್ವಹಿಸಿದ್ದರು. ಅಂದಿನ ತಮಿಳುನಾಡಿನ ಕಾಂಗ್ರೆಸ್‌ನ ದೊಡ್ಡ ಹುರಿಯಾಳಾಗಿದ್ದ ದಾಟಿ ಶ್ರೀನಿವಾಸ್ ಅಯ್ಯರ್ ಅವರ ಪರ ತಾಳವಾಡಿ ಪೋಲಿಂಗ್ ಬೂತಿನಲ್ಲಿ ಏಜೆಂಟ್ ಆಗಿ ಕೂಡ ಕೆಲಸವನ್ನು ನಿರ್ವಹಿಸಿದ್ದರು. ಕಾಂಗ್ರೆಸ್‌ನ ಕೆಲವು ರಚನಾತ್ಮಕ ಕಾರ್ಯಗಳಲ್ಲಿ ಕೆಲವನ್ನು ಮಾತ್ರ ತಮ್ಮ ವ್ಯಾಪ್ತಿಗೆ ಸೀಮಿತ ಮಾಡಿಕೊಂಡು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ೧೯೪೨ರ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯ ಸಂದೇಶ ರಾಷ್ಟ್ರದಾದ್ಯಂತ ಹರಡಿತು. ಸರ್ಕಾರ ಹೋರಾಟಗಾರರಿಗೆ ಕಿರುಕುಳ ಕೊಡುತ್ತಿತ್ತು. ಇಂತಹ ರಾಕ್ಷಸೀ ಪ್ರವೃತ್ತಿಯಿಂದ ಭಾರತವನ್ನು ಯುದ್ಧದಲ್ಲಿ ತಳ್ಳಿದ ಬ್ರಿಟಿಷ್ ಸರ್ಕಾರದ



ಸರ್ವಾಧಿಕಾರದ ನೀತಿಯನ್ನು ವಿರೋಧಿಸಿ ಇಡೀ ಪ್ರಾಂತ್ಯದಲ್ಲಿನ ಕಾಂಗ್ರೆಸ್ ಸಂಗಡಿಗರ ಜೊತೆ ಸೇರಿ ಡಿ.ಜೆ.ಶಂಕರಪ್ಪನವರು ಪ್ರಚಾರವನ್ನು ಮಾಡಲು ಹೊರಟರು. ೧೩–೦೯–೧೯೪೧ರಲ್ಲಿ ದೊಡ್ಡರಾಯಪೇಟೆಯಲ್ಲಿ ಇವರ ಬಂಧನವಾಯಿತು. ಶಂಕರಪ್ಪನವರ ಸಂಗಡಿಗರ ಪೈಕಿ ಕೆಲವರನ್ನು ಸ್ಥಾನಬದ್ಧತೆಗೂ ಮತ್ತೆ ಕೆಲವರನ್ನು ಕೋರ್ಟ್ ವಿಚಾರಣೆಗೂ ಒಳಪಡಿಸಿ ಶಿಕ್ಷೆಯನ್ನು ಕೊಟ್ಟರು. ಇಂತಹ ಶಿಕ್ಷೆಗೆ ಒಳಪಟ್ಟವರಲ್ಲಿ ದಿವಂಗತ ಮಲೆಯೂರು ಚಿಕ್ಕಲಿಂಗಪ್ಪನವರು ಪ್ರಮುಖರು. ಆಗ ಚಿಕ್ಕಲಿಂಗಪ್ಪನವರು ಎಮ್.ಆರ್.ಎ. (ಆಗ ಶ್ರೀಮಂತರಿಗೆ ಮಾತ್ರ ಮೈಸೂರು ಸಂಸ್ಥಾನದ ಸದಸ್ಯತ್ವ ಸಿಗುತ್ತಿತ್ತು.) ಆಗಿದ್ದರು. ಡಿ.ಜೆ.ಶಂಕರಪ್ಪನವರ ಜೊತೆ ಜೈಲಿನಲ್ಲಿ ಎಸ್.ನಾಗರಾಜು ತಾಲ್ಲೂಕು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಚಾಮರಾಜನಗರ, ಯತಿರಾಜು ಚಾಮರಾಜನಗರ, ಪುಟ್ಟಸ್ವಾಮಿ ಕುದೇರು, ನಾಗೇಶ್ ಚಾಮರಾಜನಗರ, ಸಿ.ಗೋಪಾಲ್‌ರಾವ್ ತಾಲ್ಲೂಕು ಕಾಂಗ್ರೆಸ್ ಕಮಿಟಿ ಸದಸ್ಯರು, ಚಾಮರಾಜನಗರ, ಎಸ್.ವೆಂಕಟರಾವ್ ಟಿ.ಸಿ.ಸಿ.ಮೆಂಬರ್ ಚಾಮರಾಜನಗರ, ಕೆ.ವಿ.ಕೃಷ್ಣಮೂರ್ತಿ. ಟೈಲರ್ ರಂಗಸ್ವಾಮಿ, ರಂಗಸ್ವಾಮಿ ನಾಯಕ, ಪದ್ಮರಾಜ ಪಂಡಿರು ಇವರೆಲ್ಲರೂ ಬಂಧನದಲ್ಲಿದ್ದರು. ಡಿ.ಜೆ.ಶಂಕರಪ್ಪನವರು ಬೆಂಗಳೂರಿನ ಸೆಂಟ್ರಲ್ ಜೈಲ್, ಹಾಸನ ಜಿಲ್ಲೆಗಳಲ್ಲಿ ಇದ್ದು ೧೯–೦೯–೧೯೪೩ರಲ್ಲಿ ಬಿಡುಗಡೆಯಾದರು. ಬೆಂಗಳೂರು ಜೈಲಿನಿಂದ ಹಾಸನಕ್ಕೆ ವರ್ಗಾವಣೆ ಬಯಸಿ ಪತ್ರ ಬರೆದು ಹಾಸನ ಜೈಲಿಗೆ ಬಂದರು. ಹಾಗೆ ಹಾಸನ ಸೆರೆಮನೆಗೆ ಹೋಗಲು ಕಾರಣವಿದೆ. ಜೈಲಿನಲ್ಲಿ ಸಬರಮತಿ ಆಶ್ರಮದಿಂದ ಬಂದ ನಾಯಕರಿದ್ದರು. ಮತ್ತೆ ಮೈಸೂರಿನ ಪ್ರಖ್ಯಾತ ನಾಯಕರಾಗಿದ್ದ ಟಿ. ಸಿದ್ಧಲಿಂಗಯ್ಯ, ಕೆ.ಟಿ,ಭಾಷ್ಯಂ, ಹೆಚ್.ಸಿದ್ದಯ್ಯ ಇವರೆಲ್ಲಾ ಅದೇ ಜೈಲಿನಲ್ಲಿದ್ದರು. ಶಂಕರಪ್ಪನವರ ಪ್ರಕಾರ ಅಂದಿನ ಸೆರೆಮನೆಗಳು ಯಾವ ವಿಶ್ವವಿದ್ಯಾನಿಲಯಕ್ಕೂ ಕಡಿಮೆ ಇರಲಿಲ್ಲ ಯಾಕೆಂದರೆ ಎಲ್ಲಾ ನಾಯಕರು ಅಲ್ಲಿ ಚರ್ಚೆ ಮತ್ತು ಮಾರ್ಗದರ್ಶನ ಮಾಡುತ್ತಿದ್ದರು. ಇವರ ಗ್ರಾಮವಾದ ದೊಡ್ಡರಾಯನಪೇಟೆಯಲ್ಲಿ ನಾಯಕರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರಾದ ಯ.ಚ.ಲಿಂಗಪ್ಪ, ಸಿ.ಲಿಂಗಪ್ಪ, ಮಲ್ಲಿಕಾರ್ಜುನಪ್ಪ, ಪಟೇಲ್ ವೆಂಕಟಸುಬ್ಬಶೆಟ್ಟರು, ಸುಬ್ಬಶೆಟ್ಟರು, ಹುಚ್ಚಶೆಟ್ಟರು, ದಾಸಶೆಟ್ಟರು, ಡಿ.ಪುಟ್ಟಶೆಟ್ಟರು, ಚಿಟಿಗೇಗೌಡ, ನಂಜೇಗೌಡ, ಮಾದೇಗೌಡ, ಕರಗಪ್ಪನವರ ಲಿಂಗಪ್ಪ, ಮಂಡಯ್ಯನವರು

ಪ್ರಮುಖರಾಗಿದ್ದರು. ಚಾಮರಾಜನಗರದಲ್ಲಿ ನಾಯಕರಾಗಿದ್ದವರು ಸಿ.ಜಿ.ರಾಜಶೇಖರ್, ಬ್ಯಾಂಕರ್ ಬಿ.ಎಸ್.ವೆಂಕಟನಾಗಪ್ಪಶೆಟ್ಟಿ, ವೆಂಕಟಸುಬ್ಬಶೆಟ್ಟಿ (ಎಂ.ಆರ್.ಎ.) ಸಿ.ಗೋಪಾಲ್‌ರಾವ್, ಕೆ.ವಿ.ಕೃಷ್ಣಮೂರ್ತಿ, ನಾಗರಾಜು, ವಾಸುದೇವರಾವ್, ವೆಂಕಟೇಶ.

೧೯೩೮ರ ಸುಮಾರಿನಲ್ಲಿ ಪುಣಜನೂರಿನಲ್ಲಿ ೧೫೦೦ ಕ್ಕೆ ೨೫ ಎಕರೆ ಭೂಮಿ ತೆಗೆಯಲು ದೊಡ್ಡರಾಯನಪೇಟೆಯಲ್ಲಿ ಜಮೀನನ್ನು ಆಧಾರವಿಟ್ಟರು. ಏಕೆಂದರೆ ಆಗ ಮತ ಹಾಕಲು ಹಕ್ಕು ಬೇಕಿತ್ತು. ಅದಕ್ಕೆ ಇಪ್ಪತ್ತೈದು ಎಕರೆ ಭೂಮಿ ಇರಬೇಕಿತ್ತು. ಭೂಮಿಯನ್ನು ತೆಗೆದು ಮತಹಾಕುವ ಹಕ್ಕು ಪಡೆದು ಬ್ರಿಟಿಷರ ವಿರುದ ಪ್ರತಿಭಟಿಸಲು ಸಿದ್ಧರಾದರು. ೧೯೪೨ರಲ್ಲಿ ಮೈಸೂರು ಸಂಸ್ಥಾನದಲ್ಲಿ ನಾಯಕರಾದ ಟಿ. ಸಿದ್ಧಲಿಂಗಯ್ಯ, ಎಂ.ಎನ್. ಜೋಯಿಸ್, ಸಾಹುಕಾರ್ ಚೆನ್ನಯ್ಯವರು, ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಡಿ.ಜೆ.ಶಂಕರಪ್ಪನವರು ಮೈಸೂರಿನಲ್ಲಿ ನಡೆದ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹದಲ್ಲಿ ಒಂದು ದಿನ ಭಾಗವಹಿಸಿದ್ದರು. ೧೯೪೭ರಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಪ್ರಮುಖವಾಗಿ ಭಾಗವಹಿಸಿದ್ದರು.

ಡಿ.ಜಿ.ಶಂಕರಪ್ಪನವರು ಅತ್ಯಂತ ನಿಸ್ವಾರ್ಥ ಮತ್ತು ಶಿಸ್ತಿನ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಲಗ್ನವಾಗುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿ ಅದರಂತೆ ಸ್ವಾತಂತ್ರ್ಯ ಬಂದ ನಂತರವೇ ಮದುವೆಯಾದರು. ಈ ರೀತಿ ತಮ್ಮ ವೈಯಕ್ತಿಕ ಅಭಿಲಾಷೆಗಳನ್ನು, ವೈಯಕ್ತಿಕ ಆಸಕ್ತಿಗಳನ್ನು ಮರೆತು ಜೀವನದಲ್ಲಿ ಎಂತೆಂತಹ ಅವಕಾಶಗಳು ಬಂದರೂ ತಮ್ಮ ನೈತಿಕತೆಯನ್ನು, ಸ್ವಾಭಿಮಾನವನ್ನು ತತ್ವ ಸಿದ್ಧಾಂತವನ್ನು ಬಿಟ್ಟುಕೊಡದೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹ ಎಷ್ಟೋ ಚಿರಸ್ಮರಣೀಯ ಧೀಮಂತ ಹೋರಾಟಗಾರರ ಸಾಲಿಗೆ ಡಿ.ಜೆ. ಶಂಕರಪ್ಪನವರು ಸೇರುತ್ತಾರೆ.



ಡಿ.ಜೆ.ಶಂಕರಪ್ಪನವರು ಸ್ವಾತಂತ್ರ್ಯದ ನಂತರ ದೊಡ್ಡರಾಯನಪೇಟೆ ಮತ್ತು ಪುಣಜನೂರು ಗ್ರಾಮಪಂಚಾಯಿತಿಗಳಲ್ಲಿ ಛೇರ್ಮನ್ ಆಗಿ ಮತ್ತು ಸೇವಾ ಸಹಕಾರ ಸಂಘಗಳ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಚಾಮರಾಜನಗರ ತಾಲ್ಲೂಕಿನ ಭೂ ಅಭಿವೃದ್ಧಿ ಬ್ಯಾಂಕ್ ನಿರ್ದೇಶಕರಾಗಿ, ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿ ತಾಲ್ಲೂಕು ಕಾಂಗ್ರೆಸ್ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಹೀಗೆ ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿ ಕೊಂಡು, ದೇಶದ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡು ನಿಸ್ವಾರ್ಥ ಸೇವೆಯನ್ನು ಮಾಡಿದ ತಾಲ್ಲೂಕಿನ ಅತ್ಯಂತ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರರು ಡಿ.ಜೆ. ಶಂಕರಪ್ಪನವರು.

ಸಮಾಜವಾದಿ, ಜಾತ್ಯತೀತವಾದಿಯಾಗಿದ್ದ ಡಿ.ಜೆ.ಶಂಕರಪ್ಪನವರು ೧೯೩೮ರಲ್ಲಿ ತಮ್ಮ ಗ್ರಾಮವಾದ ದೊಡ್ಡರಾಯನಪೇಟೆಯಲ್ಲಿ ಗ್ರಾಮದ ಎಲ್ಲಾ ವರ್ಗದ ಜನರಿಗೂ ಮನೆಯಲ್ಲಿ ಸೇರಲು, ದೇಶದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತಿದ್ದರು. ಇವರದು ಮೊದಲಿನಿಂದಲೂ ಗ್ರಾಮದಲ್ಲಿ ಗೌಡಿಕೆ ಮಾಡಿಕೊಂಡು ಬಂದಿದ್ದ ಮನೆತನವಾಗಿತ್ತು. ಇವರದು ೧೨ ಕಂಬದ ದೊಡ್ಡ ಹಜಾರವಿದ್ದ ಮನೆಯಾಗಿತ್ತು. ಆದರೆ ಅದನ್ನು ಸಹಿಸದ ಕೆಲವು ವ್ಯಕ್ತಿಗಳು ಇವರ ತಾಯಿಯನ್ನು ಗ್ರಾಮದಿಂದ ಹೊರ ಹಾಕಿದರು. ನಂತರ ಶಂಕರಪ್ಪನವರು ತನ್ನ ತಾಯಿ ಜೊತೆ ಚಾಮರಾಜನಗರ ಟೌನ್‌ನಲ್ಲಿ ನೆಲಸಿ ಅಲ್ಲಿಂದಲೇ ಹೋರಾಟವನ್ನು ಮುಂದುವರೆಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಇವರು ದೊಡ್ಡರಾಯನಪೇಟೆಗೆ ಬಂದು ನೋಡಿದಾಗ ಅಲ್ಲಿ ಮನೆಯ ಎಲ್ಲಾ ಬಾಗಿಲುಗಳು, ಛಾವಣಿಯನ್ನೆಲ್ಲಾ ಊರಿನವರು ಕಿತ್ತುಹಾಕ್ಕಿದ್ದರು. ನಂತರ ಅದನ್ನು ಸ್ವಲ್ಪ ರಿಪೇರಿ ಮಾಡಿಸಿ, ಪುಣಜನೂರಿನಲ್ಲೇ ಹೋಗಿ ನೆಲೆಸಿದರು. ತಮ್ಮ ಕೊನೆಯ ದಿನಗಳವರೆಗೂ ಹೋರಾಟವನ್ನು ಬಿಡದ ಶಂಕರಪ್ಪನವರು ರೇಷ್ಮೆಯನ್ನು ಸರ್ಕಾರ ಆಮದು ಮಾಡಿಕೊಳ್ಳುವುದರ ಮೂಲಕ ಸ್ಥಳೀಯ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ಸರ್ಕಾರದ ವಿರುದ್ಧ ಪತ್ರ ಚಳುವಳಿಯನ್ನು ಮಾಡಿದರು. ೧೯೮೯ರ ನವೆಂಬರ್ ೧೭ ರಂದು ಮರಣ ಹೊಂದಿದರು. ಡಿ.ಜೆ.ಶಂಕರಪ್ಪನವರ ಮಗ ದೊರೆಸ್ವಾಮಿರವರು ಕ್ಷೇತ್ರಕಾರ್ಯಕ್ಕೆ

ದಿನಾಂಕ ೧೩.೧೨.೨೦೨೧ ರಂದು ಹೋದಾಗ ಇವರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿದರು.

**ಕೆ.ವಿ.ಕೃಷ್ಣಮೂರ್ತಿ(ಕೊಚ್ಚಿ ಕಿಟ್ಟಪ್ಪ)**

ಚಾಮರಾಜನಗರದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾರಂಭದ ದಿನಗಳಿಂದ ಕೊನೆಯ ಹೋರಾಟದವರೆಗೂ ಪ್ರಮುಖ ಪಾತ್ರವಹಿಸಿದ ಇನ್ನೊಬ್ಬ ಸ್ವಾತಂತ್ರ್ಯ ಪ್ರೇಮಿ ಶ್ರೀಯುತ ಕೆ.ವಿ.ಕೃಷ್ಣಮೂರ್ತಿರವರು. ಇವರ ಮೂಲ ತಮಿಳುನಾಡಿರಬಹುದು, ಆದರೆ ಬೆಳೆದದ್ದು ಚಾಮರಾಜನಗರದಲ್ಲೇ. ಕೃಷಿ ಇವರ ಆದಾಯದ ಮೂಲವಾಗಿತ್ತು. ಇವರ ಕುಟುಂಬದಲ್ಲಿ ಒಂದೇ ವರ್ಷ ಮನೆಯಲ್ಲಿ ಪ್ಲೇಗ್‌ನಿಂದ ಮೂರು ಸಾವುಗಳಾಗಿ ಇಡೀ ವಂಶಕ್ಕೆ ಒಬ್ಬರೇ ಉಳಿದ ಕಾರಣ ಇವರನ್ನು ಶಿಕ್ಷಣಕ್ಕೆ ಹೊರಗಡೆ ಕಳುಹಿಸಲಿಲ್ಲ. ಹಾಗಾಗಿ ವಿದ್ಯಾಭ್ಯಾಸ ಅಷ್ಟು ಮುಂದುವರೆಯಲಿಲ್ಲ. (ಆಗ ಎಲ್.ಎಸ್. ಅಥವಾ ಲೋವರ್ ಸೆಕೆಂಡರಿ ಪಬ್ಲಿಕ್ ಪರೀಕ್ಷೆಗೆ ಪಕ್ಕದ ನಂಜನಗೂಡಿಗೆ ಹೋಗ ಬೇಕಿತ್ತು.)

ಹೀಗಾಗಿ ಶ್ರೀಯುತರು ಅನುಭವಗಳೇ ಪಾಠಗಳೆಂದು ಜಗತ್ತಿನ ವಿಶ್ವವಿದ್ಯಾನಿಲಯದಲ್ಲಿ ಕಲಿತು ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಅಪಾರ ಧೈರ್ಯಶಾಲಿ ಮತ್ತು ವಿವೇಕಶಾಲಿಯಾಗಿದ್ದರು. ಸ್ವ ಅಧ್ಯಯನದಿಂದ ಇಂಗ್ಲಿಷ್‌ನಲ್ಲಿ ಪರಿಣಿತಿಯನ್ನು ಪಡೆದಿದ್ದರು. ೧೯೨೯–೩೦ ರ ಹೊತ್ತಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಆಸಕ್ತಿ ತಳೆದು ಹೋರಾಟದಲ್ಲಿ ಧುಮುಕಿದರು. ಅಂದು ನಡೆಯುತ್ತಿದ್ದ ಹಿಂದಿ ಪ್ರಸಾರ ಸಭೆಯ ವಿದ್ಯಾರ್ಥಿಯಾಗಿ ನೆಹರೂ ಅವರನ್ನು ಭೇಟಿ ಮಾಡಲು ಶಾಲೆಯ ವಿದ್ಯಾರ್ಥಿಗಳ ಸಂಗಡ ನಂಜನಗೂಡಿಗೆ ಹೋಗಿದ್ದರು. ನಗರದ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ದಸ್ತಗಿರಿಯಾದರು. ೧೯೪೨ರ ಚಳುವಳಿಯಲ್ಲಿ ಬಂಧನಕೊಳ್ಳಗಾದ ಕೆಲವೇ ಹೋರಾಟಗಾರಲ್ಲಿ ಇವರು ಪ್ರಮುಖರು. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಸುಮಾರು ಒಂಬತ್ತು ತಿಂಗಳು ಸೆರೆಮನೆ ವಾಸ ಅನುಭವಿಸಿದರು. ಸೆರಮನೆಯಲ್ಲಿದ್ದಾಗ ಹೆಚ್.ಎಸ್. ದೊರೆಸ್ವಾಮಿ, ಕನಕಪುರದ ಎಸ್. ಕರಿಯಪ್ಪನವರು, ನಿಜಲಿಂಗಪ್ಪನವರು, ಶಿವಮೊಗ್ಗದ ಎಸ್.ವಿ. ರಾಮರಾಯರು ಮತ್ತು ಭೂಪಾಲಮ್, ತುಮಕೂರಿನ ಎಂ.ವಿ.ರಾಮರಾಯರು ಮತ್ತು ಅನೇಕರ ಸ್ನೇಹ ಇವರಿಗಾಯಿತು. ಈಸೂರಿನ ಹೋರಾಟಗಾರರನ್ನು ಗಲ್ಲಿಗೆ ಏರಿಸಿದಾಗ ಇವರು ಸೆರಮನೆಯಲ್ಲೇ ಇದ್ದರು. ಇದೇ ಸಮಯದಲ್ಲಿ ಇಡೀ ದಿನ ಸಾವಿಗಾಗಿ ಕಾದ ಹೋರಾಟಗಾರರ ಮನಸ್ಥಿತಿಯ ಬಗ್ಗೆ ತುಂಬಾ ದಿನ ತಮ್ಮ ಕುಟುಂಬದವರ ಬಳಿ ದುಃಖ ಹಂಚಿಕೊಳ್ಳುತ್ತಿದ್ದರು. ಪ್ರಜಾಪ್ರತಿನಿಧಿ ಸಭೆಗೆ ಚಾಮರಾಜನಗರ (ಅರ್ಬನ್)ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ೧೯೪೭ ರ ಮೈಸೂರು ಚಲೋ ಚಳುವಳಿಯ ಸಂದರ್ಭದಲ್ಲಿ ಇವರು ಮತ್ತು ಇವರ ಧರ್ಮಪತ್ನಿ ಇಬ್ಬರೂ ದಸ್ತಗಿರಿಯಾದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಜಮೀನು ಮಂಜೂರಾದ ಸಂದರ್ಭದಲ್ಲಿ ಅದನು ನಿರಾಕರಿಸಿ ಅರ್ಜಿ ಕೂಡ ಹಾಕಲಿಲ್ಲ. ದೇಶಕ್ಕಾಗಿ ಇಡೀ ಜೀವಮಾನವೆಲ್ಲಾ ನಿಸ್ವಾರ್ಥ ಸೇವೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಇಡೀ ಚಾಮರಾಜನಗರದಲ್ಲಿ ಹೆಸರಾದವರು ಕೆ.ವಿ.ಕೃಷ್ಣಮೂರ್ತಿರವರು. ಇವರು ನಗರದಲ್ಲಿ ಕೊಚ್ಚಿಕಿಟ್ಟಪ್ಪ ಎಂದೇ ಚಿರಪರಿಚಿತರಾಗಿದ್ದರು. ಇವರ ಬಗ್ಗೆ ಮಾಹಿತಿಯನ್ನು ಶ್ರೀಯುತರ ಮಗನಾದ ಕೆ.ವೆಂಕಟರಾಜು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದಿನಾಂಕ ೧೧.೧೨.೨೦೨೧ ರಂದು ನೀಡಿದರು.



**ಸಿ. ಗೋಪಾಲ್‌ರಾವ್**

ಇವರು ೧೯೧೩ ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಜನಿಸಿದರು.ಇವರು ತಮ್ಮ ಮೂರನೇ ವಯಸ್ಸಿನಲ್ಲಿ ತಂದೆ ಮತ್ತು ತಾಯಿಯನ್ನು ಕಳೆದುಕೊಳ್ಳುತ್ತಾರೆ. ನಂತರ ಬೀದಿ ಪಾಲಾಗಿ ಹೊಟ್ಟೆ ಪಾಡಿಗಾಗಿ ಎಲ್ಲ ರೀತಿಯ ಕೆಲಸ ಕಾರ್ಯಗಳನ್ನು ಮಾಡಿ ಜೀವನ ನಿರ್ವಹಣೆಗಾಗಿ ಒಂದು ಸಣ್ಣ ಬೀಡಿ ಅಂಗಡಿ ಹಾಕಿಕೊಂಡು ಆ ಅಂಗಡಿಯಲ್ಲಿ ಪತ್ರಿಕೆಗಳು, ಸಣ್ಣಪುಟ್ಟ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಇಂತಹ ಕಷ್ಟದ ದಿನಗಳಿಂದ ಯಾವುದೇ ಕೆಲಸಕ್ಕೂ ಹಿಂದೆಮುಂದೆ ನೋಡದೆ ಮುನ್ನುಗ್ಗುವಂತಹ ಸ್ವಭಾವವನ್ನು ರೂಡಿಸಿಕೊಂಡಿದ್ದರು. ಬಾಲ್ಯದ ದಿನಗಳಲ್ಲಿ ತುಂಟರ ಒಂದು ತಂಡವನ್ನು ಕಟ್ಟಿಕೊಂಡು ಯಾವುದೇ ಉತ್ಸವ, ಸಂತೆ, ಜಾತ್ರೆಗಳಲ್ಲಿ ಗುಂಪುಗೂಡಿ ಹಾಜರಿದ್ದು ತನ್ನ ಪ್ರಾಧಾನ್ಯವನ್ನು ತೋರಿಸುವಕೆಲಸವನ್ನು ಮಾಡುತ್ತಿದ್ದರು. ೧೯೨೬–೨೭ರಿಂದ ಮೈಸೂರು

ಸಂಸ್ಥಾನದಲ್ಲಿ ಪ್ರಮುಖರಾಗಿದ್ದ ರಂಗರಾಮಯ್ಯ, ಸಂಪಿಗೆ ವೆಂಕಟಪತಯ್ಯ, ತಗಡೂರು ರಾಮಚಂದ್ರರಾಯರು, ಎಂ.ಎನ್. ಜೋಯಿಸರು, ಸೂರ್ಯನಾರಾಯಣ ಪಂಡಿತರು, ಅಗರಂ ರಂಗಯ್ಯನವರು ಮುಂತಾದವರ ರಾಷ್ಟ್ರೀಯ ಚಟುವಟಿಕೆಗಳಿಂದ ಹೆಚ್ಚು ಆಕರ್ಷಿತರಾದರು. ಅದರಲ್ಲೂ ಪ್ರಮುಖವಾಗಿ ತಗಡೂರು ರಾಮಚಂದ್ರರಾಯರ ಸ್ವಾತಂತ್ರ್ಯದ ಚಟುವಟಿಕೆಗಳಿಂದ ಹೆಚ್ಚು ಆಕರ್ಷಿತರಾದರು. ೧೯೩೫ರ ಕಾಲಘಟ್ಟದಲ್ಲಿ ಗಾಂಧೀಜಿಯವರ ಹರಿಜನ ಪತ್ರಿಕೆ ಮತ್ತು ಹಿಂದೂ ಸ್ವರಾಜ್ ಎಂಬ ಎಂಬ ಕಿರುಹೊತ್ತಿಗೆಯನ್ನು ಓದಿ ವಿಶೇಷವಾಗಿ ಪ್ರಭಾವಿತರಾಗಿದ್ದರು.

೧೯೩೭ರಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಮುಖ ಮುಖಂಡರಾಗಿದ್ದಂತಹ ಟಿ.ಮರಿಯಪ್ಪ, ಎಂ.ಎನ್.ಜೋಯಿಸ್, ದಾಸಪ್ಪ. ಹೆಚ್.ಸಿ.ಯಶೋಧರ ದಾಸಪ್ಪ, ಟಿ.ಸಿದ್ಧಲಿಂಗಯ್ಯ, ಕೆ.ಟಿ.ಭಾಷ್ಯಂರವರು ಸಂಚಾರವನ್ನು ಕೈಗೊಂಡು ಇಲ್ಲಿ ಕಾಂಗ್ರೆಸ್ಸಿನ ಶಾಖೆಯನ್ನು ಆರಂಭಿಸಿದರು. ಬಿ.ನಾರಾಯಣ್‌ರವರು ಕಾರ್ಯಕ್ರಮದ ಅಧ್ಯಕ್ಷರಾಗಿದ್ದು, ಕಾರ್ಯದರ್ಶಿಯಾಗಿ ಸಿ.ಗೋಪಾಲ್‌ರಾವ್‌ರವರು ಆಯ್ಕೆಯಾದರು. ಕ್ರಿ.ಶ.೧೯೪೮ರವರೆಗೂ ಕಾರ್ಯದರ್ಶಿಯಾಗಿದ್ದರು. ಇದೇ ಊರಿನ ಇನ್ನಿತರ ಪ್ರಮುಖ ಕಾಂಗ್ರೆಸ್ ಮುಖಂಡರೆಂದರೆ ಗುಂಡಪ್ಪನವರು, ಹೆಚ್.ಕೆ.ಕುಮಾರಸ್ವಾಮಿ, ಕೆ.ವಿ.ಕೃಷ್ಣಮೂರ್ತಿ, ಯತಿರಾಜಯ್ಯ, ಎಸ್.ವೆಂಕಟರಾವ್, ಡಿ.ಶಂಕರಪ್ಪ, ಅನೇಕ ಸ್ವಾತಂತ್ರ್ಯ ಹೋರಾಟಗಾರರು ಕೂಡ ಇದ್ದರು. ಒಂದು ಕಡೆ ಜಾತಿಯ ಭಾವನೆಯಿದ್ದರೆ, ಮತ್ತೊಂದು ಕಡೆ ಗ್ರಾಮದ ಅನೇಕ ಮುಖಂಡರು ಸರ್ ಮಿರ್ಜಾ ಇಸ್ಮಾಯಿಲ್ ಅನುಯಾಯಿಗಳಾಗಿದ್ದರು. ಗ್ರಾಮದ ಮುಖಂಡರುಗಳಿಂದ ನಮಗೆ ಗ್ರಾಮಗಳಲ್ಲಿ ಪ್ರವೇಶ ಸಿಗದಂತಹ ಸಂದರ್ಭಗಳು ಎದುರಾಗುತ್ತಿದ್ದವು. ಕೆಲವು ಮುಖಂಡರು ಕಾಂಗ್ರೆಸ್ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸುತ್ತಿದ್ದರು. ಆದರೂ ಆರು ತಿಂಗಳ ಅವಧಿಯಲ್ಲಿ ಸುಮಾರು ೧೦೦೦ ಕಾಂಗ್ರೆಸ್ ಸದಸ್ಯರನ್ನು ತಾಲ್ಲೂಕಿನಲ್ಲಿ ಸಂಘಟಿಸಿಸಲಾಯಿತು. ಶಿವಪುರ ಧ್ವಜ ಸತ್ಯಾಗ್ರಹ, ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ, ವಿದುರಾಶ್ವತ್ಥ ದುರಂತ, ಕಾಂಗ್ರೆಸ್ ಚಳುವಳಿಗಳಲ್ಲಿ ಅವರೆಲ್ಲ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಹೋರಾಟಗಳಲ್ಲಿ ಚಾಮರಾಜನಗರ ತಾಲ್ಲೂಕಿನ ಅನೇಕ ಚಳುವಳಿಗಾರರು ಕೂಡ ಪಾಲ್ಗೊಂಡು ಶಿಕ್ಷೆಯನ್ನು ಅನುಭವಿಸಿದ್ದಾರೆ.



೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳಿವಳಿ ಅಥವಾ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಬಲವಾಗಿ ಆಯಿತು. ಚಳುವಳಿಯ ಸಂಬಂಧ ಉತ್ತರದಲ್ಲಿ ಗಾಂಧೀಜಿಯವರ ಬಂಧನ ಆದ ಕೂಡಲೇ ಇಲ್ಲಿನ ಕಾಂಗ್ರೆಸ್ ಸಂಘಟಕರೆಲ್ಲಾ ಸಭೆ ಸೇರಿ ಚರ್ಚೆ ಮಾಡಿ ೧೮ ದಿನಗಳವರೆಗೆ ಸತತವಾಗಿ ಎಲ್ಲರೂ ಕೂಡ ಹಂತವಾಗಿ ಯಾವ ರೀತಿ ಬಂಧನವಾಗಬೇಕು ಎಂದು ನಿಶ್ಚಯಿಸಿದರು. ಅಂದು ಸಭೆಯಲ್ಲಿ ಆದ ನಿರ್ಧಾರಂತೆ ಪ್ರತಿಯೊಬ್ಬರು ಸಂಜೆ ಒಬ್ಬೊಬ್ಬ ರಾಗಿ ಬಂಧನ ಆಗುತ್ತಿದ್ದರು. ಸಂಜೆ ಆಗುವಂತಹ ಸಭೆಗಳಿಗೆ ಭಾರಿ ಜನಸಮೂಹ ಬರುತ್ತಿದ್ದರು.ಆದರೆ ಪೋಲಿಸರು ಇವರಲ್ಲಿ ಒಬ್ಬರನ್ನು ಮಾತ್ರ ಹಿಡಿಯುತ್ತಿದ್ದರು. ೦೯.೦೮.೧೯೪೨ ರಂದು ಸಂಜೆ ಕಾಂಗ್ರೆಸ್ ಮುಖಂಡರಾದ ಅಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದಂತಹ ಮಲೆಯೂರಿನ ಚಿಕ್ಕಲಿಂಗಪ್ಪನವರು ಬಸ್‌ನಿಲ್ದಾಣದ ಬಳಿಯ ಮೈದಾನದಲ್ಲಿ ಬೃಹತ್ ಭಾಷಣವನ್ನು ಮಾಡಿ ಬಂಧಿತರಾದರು. ಇದೇ ಸಮಯದಲ್ಲಿ ಸಿ.ಗೋಪಾಲ್‌ರವರು ಭೂಗತರಾಗಿ ಚಳುವಳಿಗಳಿಗೆ ನಿರ್ದೇಶನಗಳನ್ನು ನೀಡುತ್ತಿದ್ದರು. ಇಂತಹ ಸಂದರ್ಭಲ್ಲಿ ಕೊಳ್ಳೆಗಾಲದಲ್ಲಿ ಪ್ರಭು ಎಂಬುವರ ಆಶ್ರಯ ಇವರಿಗೆಲ್ಲಾ ಸಿಕ್ಕಿತು. ಅದೇ ಹೋರಾಟದ ಸಂದರ್ಭದಲ್ಲಿ ಸಿ. ಗೋಪಾಲರಾವ್‌ರವರು ೧೮–೦೮–೧೯೪೨ ರಂದು ರಾತ್ರಿ ೧೦ ಗಂಟೆಗೆ ಅವರ ಊರಿನಲ್ಲಿ ಪೊಲೀಸರ ಕಣ್ಣು ತಪ್ಪಿಸಿ ಬಂದು ಭಾರಿ ಜನಸಮೂಹದ ನಡುವೆ ಭಾಷಣವನ್ನು ಮಾಡಬೇಕಾಯಿತು. ಈ ಸಭೆಯ ನಂತರ ಪೋಲಿಸರು ಸಿ.ಗೋಪಾಲ್‌ರಾವ್‌ರವರನ್ನು ಬಂಧಿಸಲು ಪ್ರಯತ್ನಪಟ್ಟರು. ಆಗ ಜನಸಮೂಹದ ಒತ್ತಾಯದ ಮೇರೆಗೆ ಮೆರವಣಿಗೆ ನಡೆಸಿ ನಂತರ ಬಂಧಿಸಲು ಒತ್ತಾಯಪಡಿಸಿದರು. ಬೆಳಗಿನ ೫ ಘಂಟೆವರೆಗೆ ಮೆರವಣಿಗೆ ನಡೆಯಿತು. ಆ ಮೆರವಣಿಗೆಯಲ್ಲಿ ನನಗೆ ಹಾಕಿದ ಹೂವಿನ ಹಾರಗಳು ಸುಮಾರು ಎರಡು ಗಾಡಿಯಷ್ಟು ಆಗಿತ್ತು ಎಂದು ತಮ್ಮ ನೆನಪುಗಳನ್ನು ಸಿ. ಗೋಪಾಲ್‌ರಾವ್‌ರವರು ಸ್ಮರಿಸಿದ್ದಾರೆ. ೧೮–೧೦–೧೯೪೩ರವರೆಗೂ ಸಿ. ಗೋಪಾಲ್‌ರಾವ್‌ರವರು ಡೆಟಿನ್ಯೂ (ಸ್ಥಾನಬದ್ಧತೆ) ಆಗಿ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇರಬೇಕಾಯಿತು. ಇವರ ಬಂಧನದ ನಂತರ ಕಾಂಗ್ರೆಸ್ ಸ್ವಯಂಸೇವಕರಿಂದ ಈ ಊರಿನಲ್ಲಿ ಸಾಕಷ್ಟು ಚಳುವಳಿಗಳು ಮುಂದುವರೆದವು. ಆದರೆ ಯಾವುದೇ ರೀತಿಯ

ವಿಧ್ವಂಸಕ ಕೃತ್ಯಗಳನ್ನು ಅವರು ನಡೆಸಲಿಲ್ಲ. ೧೯೪೭ರ ಮೈಸೂರು ಚಲೋ ಚಳುವಳಿ ಸಂದರ್ಭದಲ್ಲಿ ಇವರು ಸುಮಾರು ಒಂದು ತಿಂಗಳು ಜೈಲಿನಲ್ಲಿದ್ದರು. ಸಿ. ಗೋಪಾಲ್‌ರಾವ್ ಅವರು ಹೇಳುವ ಪ್ರಕಾರ ಚಾಮರಾಜನಗರದಿಂದ ಸಾಕಷ್ಟು ಚಳುವಳಿಗಾರರು ಕೂಡ ಪಾಲ್ಗೊಂಡಿದ್ದರು. ಅವರುಗಳಲ್ಲಿ ಪ್ರಮುಖರೆಂದರೆ ಕೆ.ವಿ.ಕೃಷ್ಣಮೂರ್ತಿ, ಎಸ್.ವೆಂಕಟರಾವ್, ಸಿ.ರಂಗಸ್ವಾಮಿ, ರಂಗಸ್ವಾಮಿ ನಾಯಕ, ಸಿ.ಎಸ್.ಪದ್ಮರಾಜ ಪಂಡಿತ, ನಾಗೇಶರಾವ್, ಎಸ್.ನಾಗರಾಜ್, ಕೆ.ಎಮ್.ಪುಟ್ಟಸ್ವಾಮಿ, ಯತಿರಾಜಯ್ಯ ಮತ್ತು ಸಿ.ಎಸ್.ಬಸವರಾಜು. ಇವರುಗಳ ಪೈಕಿ ಪದ್ಮರಾಜ ಪಂಡಿತರು ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ ಮತ್ತು ೧೯೪೭ರ ಮೈಸೂರು ಚಲೋ ಚಳುವಳಿ ಈ ಎರಡರಲ್ಲೂ ಶಿಕ್ಷೆಗೆ ಒಳಗಾಗಿದ್ದರು. ಇವರ ಜೊತೆಯಲ್ಲಿ ಪುಣಜನೂರಿನ ಡಿ.ಜೆ.ಶಂಕರಪ್ಪ ಮತ್ತು ಕುದೇರುವಿನ ಪುಟ್ಟಸ್ವಾಮಿ ಇವರುಗಳು ೧೯೪೨ ನಡೆದ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಶಿಕ್ಷೆಯನ್ನು ಅನುಭವಿಸಿದ ಪ್ರಮುಖರು.

ಮತ್ತೆ ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಚಾಮರಾಜನಗರದಿಂದ ಸಾಕಷ್ಟು ಜನ ಬಂಧನಕ್ಕೊಳಗಾಗಿದ್ದರು ಸುಮಾರು. ೮೦–೮೫ ಜನ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರುಗಳಲ್ಲಿ ಪ್ರಮುಖರೆಂದರೆ ಎಂ.ಮಾದಯ್ಯ, ಎನ್.ರಂಗಸ್ವಾಮಿ, ರಾಮು, ಸಿ.ಎಸ್.ವರದರಾಜು, ಆರ್.ಮಹದೇವಯ್ಯ, ಚಂದ್ರಶೆಟ್ಟಿ, ಎಸ್.ವೆಂಕಟಸುಬ್ಬಶೆಟ್ಟಿ, ಸಿದ್ದನಾಯ್ಕ, ಮಹಾದೇವ, ಡಿ.ಬಸವಯ್ಯ, ಬಿ.ಎಸ್.ಸುಬ್ಬರಾವ್, ಗಜಲಕ್ಷ್ಮಿಬಾಯಿ, ಸುಬ್ಬರಾವ್, ಕೆ.ವಿ.ಕೃಷ್ಣಪ್ಪ, ಎಂ.ಶ್ರೀನಿವಾಸಮೂರ್ತಿ, ಸಿ.ಕೆ.ಗಜೇಂದ್ರ, ಕೆಂಪಶೆಟ್ಟಿ, ತಮ್ಮಯ್ಯ, ರಾಮಸ್ವಾಮಿ, ಕೆ.ಎಮ್.ತೋಟಯ್ಯ, ಸಿ.ಎಸ್.ಕೃಷ್ಣ, ಮಾಧು, ಸಿ.ಎನ್.ತಂಬಿಶೆಟ್ಟಿ, ಚಿಕ್ಕನಂಜಯ್ಯ, ಸಿ.ಎಸ್.ರೇಣುಕಾರಾಧ್ಯ, ವಿ.ವೆಂಕಟಶೆಟ್ಟಿ, ಟಿ.ದಾಸಶೆಟ್ಟಿ, ತಿರುಮಲನಾಥಜಿ, ಲಲಿತಾ, ಜಿ ನಾಗರಾಜು, ವಿ.ಬಾಲಕೃಷ್ಣ, ಸಿ.ಪಿ.ಮಹಾದೇವನ್, ಎಸ್.ನಾರಾಯಣಸ್ವಾಮಿ, ಎನ್.ವೆಂಕಟಸುಬ್ಬಶೆಟ್ಟಿ, ಸುಮಿತ್ರಾಬಾಯಿ ಸತ್ಯನಾರಾಯಣರಾವ್, ಬಸವಶೆಟ್ಟಿ, ಸಿ.ಕೆ.ಲಕ್ಷ್ಮಣಶೆಟ್ಟಿ, ಸಿ.ವೆಂಕಟಸುಬ್ಬಶೆಟ್ಟಿ, ಪಿ.ಆರ್.ನಾಗರಾಜಶೆಟ್ಟಿ, ಭದ್ರಕಾಳಮ್ಮ ಸೋಮಣ್ಣ, ಸಿದ್ದಯ್ಯ,



ಎಂ.ರಾಮೇಗೌಡ, ಆರ್.ಲಿಂಗಣ್ಣ, ಬಸವಣ್ಣ, ಕೆ.ಎಂ.ಪುಟ್ಟಸ್ವಾಮಿ, ಎಸ್.ಜಿ.ವೆಂಕಟಶೆಟ್ಟಿ, ನಂಜುಂಡೇಗೌಡ ಜಿ.ಎಸ್.ನಾರಾಯಣಶೆಟ್ಟಿ, ಸಿ.ಎಸ್.ವಿಷಕಂಠಯ್ಯ, ಪರಶಿವಮೂರ್ತಿ, ಸಿ.ಕೆ.ಧರ್ಮಾಚೆಟ್ಟಪ್ಪ, ಎಸ್.ವೆಂಕಟಸುಬ್ಬಶೆಟ್ಟಿ, ಪಿ. ಪರಶುರಾಮ್, ಜಿ.ಆರ್.ರಂಗಶೆಟ್ಟಿ ಮತ್ತು ಜವರಶೆಟ್ಟಿ, ಇವರೆಲ್ಲ ೧೯೪೭ ರಲ್ಲಿ ಸುಮಾರು ಒಂದು ತಿಂಗಳ ಕಾಲ ಬಂಧನಕ್ಕೊಳಗಾಗಿದ್ದರು.

೧೯೪೭ರಲ್ಲಿ ಬಂಧನಕೊಳ್ಳಗಾದ ಮತ್ತಿತರರು ಎಂದರೆ ದೊಡ್ಡರಾಯಪೇಟೆ ಜಿ.ಸುಬ್ಬಪ್ಪ, ಎಸ್.ಎಲ್.ಮಹಾದೇವಯ್ಯ, ಕಾಳನಹುಂಡಿಯ ಕೆ.ಸಿ.ಪುಟ್ಟಸುಬ್ಬಯ್ಯ ಕುದೇರುವಿನ ಕೆ.ಎಸ್.ಕುಮಾರಸ್ವಾಮಿ, ಮಾದಾಪುರದ ಎಸ್.ಪುಟ್ಟನಂಜಪ್ಪ, ಮಲೆಯೂರಿನ ಪಣ್ಯದ ಸಿದ್ದಪ್ಪ, ಎಂ.ಚಿಕ್ಕಲಿಂಗಪ್ಪ ಮತ್ತು ಕರಿಯನಕಟ್ಟೆಯ ಕೆ.ಪಿ.ನಾಗಣ್ಣ. ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ತಾಲ್ಲೂಕಿನಲ್ಲಿ ಸುಮಾರು ೮೦ ರಿಂದ ೮೫ ಜನ ಕಾರಾಗೃಹ ವಾಸವನ್ನು ಅನುಭವಿಸಿದರು.

## ಎಸ್.ನಾಗರಾಜ್

ಚಾಮರಾಜನಗರದಲ್ಲಿ ಜನನ. ನಗರದ ಅತ್ಯಂತ ಉತ್ಸಾಹಿ, ಸಾಹಸಿ ತರುಣ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಅಪಾರ ಧೈರ್ಯಶಾಲಿಯಾಗಿದ್ದರು. ಇವರ ತಂದೆಯವರು ಖಾದಿದಾರಿಗಳಾಗಿದ್ದರು. ಹೋರಾಟಗಾರರ ಯುವ ಮುಂದಾಳುವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಜೊತೆಗೆ ಹವ್ಯಾಸಿ ನಾಟಕ ಪ್ರಿಯರು ಆಗಿದ್ದರು. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ ಮತ್ತು ೧೯೪೭ ರ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು.

## ಎಂ.ನಾಗೇಶರಾವ್

ಇವರು ಆ ಕಾಲದ ಅನೇಕರಿಗಿಂತ ಸ್ವಲ್ಪ ಹೆಚ್ಚು ವಿದ್ಯಾಭ್ಯಾಸ ಮಾಡಿಕೊಂಡವರಾಗಿದ್ದರು. ಮೈಸೂರಿನ ಶಾರದಾ ವಿಲಾಸ ಹೈಸ್ಕೂಲ್‌ನಲ್ಲಿ ಎಸ್.ಎಸ್.ಎಲ್.ಸಿ. ವರೆಗೂ ಕಲಿತಿದ್ದರು. ಮೈಸೂರು ಮತ್ತು ಚಾಮರಾಜನಗರದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ

ಪಾತ್ರವಹಿಸಿದ್ದವರು. ಎಸ್.ನಾಗರಾಜ್, ಕುಮಾರಸ್ವಾಮಿ, ಪದ್ಮರಾಜ ಪಂಡಿತ್ ಮುಂತಾದ ಯುವ ಹೋರಾಟಗಾರರ ಜೊತೆ ಇದ್ದವರು.

## ಸಿ.ಪಿ.ಪದ್ಮರಾಜ ಪಂಡಿತ್

ಮೂಲತಃ ಚಾಮರಾಜನಗರದ ಮಲೆಯೂರು ಗ್ರಾಮದವರು. ಜೈನ ಮತಸ್ಥರು. ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿಯನ್ನು ಕಳೆದುಕೊಂಡರು. ಇವರಿಗೆ ಸೇರಿದ ಆಸ್ತಿಯನ್ನು ಯಾರ್‍ಯಾರೋ ಕಬಳಿಸಿದಾಗ ಹೊಟ್ಟೆಪಾಡಿಗಾಗಿ ಸೈಕಲ್ ಶಾಪ್, ಬಟ್ಟೆ ಅಂಗಡಿ, ಕಾರು ಬಾಡಿಗೆ ವ್ಯವಹಾರ ಮುಂತಾದ ವೃತ್ತಿಗಳನ್ನು ನಿರ್ವಹಿಸಿದರು. ಹೋರಾಟದ ಸಂದರ್ಭದಲ್ಲಿ ಸಿ.ಗೋಪಾಲರಾಯರ ಪರಿಚಯವಾಗಿ ಇವರ ಜೊತೆ ಹೋರಾಟದಲ್ಲಿ ನೆರಳಿನಂತೆ ಇದ್ದರು. ತುಂಬಾ ತಿಳುವಳಿಕಸ್ಥರು ಮತ್ತು ಧೈರ್ಯಶಾಲಿಗಳಾಗಿದ್ದರು. ಸ್ವಾತಂತ್ರ್ಯದ ನಂತರ ಜೀವನ ಅರಸಿ ಕಾರ್ಕಳಕ್ಕೆ ಹೋದರು.

## ಸಿ.ಜಿ.ರಾಜಶೇಖರ್

ಶ್ರೀಯುತರು ೦೫ ಸೆಪ್ಟೆಂಬರ್ ೧೯೧೬ ರಲ್ಲಿ ಚಾಮರಾಜನಗರದಲ್ಲಿ ಜನಿಸಿದರು. ಇವರ ತಂದೆ ಗುರುನಂಜಶೆಟ್ಟರು, ತಾಯಿ ರಾಚಮ್ಮನವರು. ೮ನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡರು. ಅತ್ಯಂತ ಕಿರಿಯ ಪ್ರಾಯದಲ್ಲೇ ಅಪಾರ ಹೊಲ, ಮನೆ, ಆಸ್ತಿ ಹೊಂದಿದ್ದ ಇವರಿಗೆ ಜನ ಬೆಂಬಲ ಅನಿವಾರ್ಯವಾಯಿತು. ಚಾಮರಾಜನಗರದ ಅಂಗಡಿ ಬೀದಿಯಲ್ಲಿ ವರ್ತಕ ವರ್ಧಿನಿ ಬ್ಯಾಂಕ್ ನಡೆಸುತ್ತಿದ್ದರು. ಇವರ ಬಳಿ ಯಾವಾಗಲೂ ತರುಣರ ಒಂದು ತಂಡ ಇರುತ್ತಿತ್ತು. ಈ ತಂಡ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿತ್ತು. ಸ್ವಾತಂತ್ರ್ಯ ಹೋರಾಟಗಾರಿಗೆ ನೈತಿಕ ಬೆಂಬಲ, ಆಶ್ರಯ, ವಸತಿ, ಊಟ ಮತ್ತು ಆರ್ಥಿಕವಾಗಿ ಎಲ್ಲಾ ರೀತಿಯ ಬೆಂಬಲ ನೀಡಿ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಚಾಮರಾಜನಗರದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಅಭೂತ ಪೂರ್ವವಾದ ಕೊಡುಗೆ ನೀಡಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಇಂದಿಗೂ ಚಾಮರಾಜನಗರದ ಟೌನ್‌ನಲ್ಲಿ, ಗುರುನಂಜಶೆಟ್ಟರ ಛತ್ರವಿದ್ದು, ಹೋರಾಟದ ಚಟುವಟಿಕೆಗಳಿಗೆ ತಾಣ ಮತ್ತು ಆಶ್ರಯದ ಕೇಂದ್ರವಾಗಿತ್ತು.



ತರುಣರಾದ ಎಸ್.ನಾಗರಾಜ್‌ರವರು ಮತ್ತು ಅವರ ತಮ್ಮ ವಿಷಕಂಠಯ್ಯನವರು(ಬೆಸ್ತ ವರ್ಗಕ್ಕೆ ಸೇರಿದ ಉತ್ಸಾಹಿ ತರುಣರು), ಸಿ.ಸಿ.ರಂಗಸ್ವಾಮಿ, ವೆಂಕಟರಾವ್, ಈ ಮೇಲಿನ ಸ್ವಾತಂತ್ರ್ಯ ಹೋರಾಟಗಾರರೆಲ್ಲಾ ಸಿ.ಜಿ.ರಾಜಶೇಖರ್‌ರವರ ಮನೆಯ ಮುಂದೆ ಒಂದು ಕೊಠಡಿಯಲ್ಲಿ ಬಾಡಿಗೆ ಹಿಡಿದು ಅಲ್ಲಿಯೇ ಇರುತ್ತಿದ್ದರು. ತರುಣರೆಲ್ಲರೂ ಜಾತಿ, ಮತ, ಭೇದವಿಲ್ಲದೇ ಸಿ.ಜಿ. ರಾಜಶೇಖರ್ ಅವರಿಗೆ ಅತಿಯಾದ ಪ್ರೀತಿ ಮತ್ತು ಗೌರವವನ್ನು ನೀಡುತ್ತಿದ್ದರು. ಹಾಗಾಗಿ ಈ ನೇತೃತ್ವ ಎಂಬುದು ಇವರಿಗೆ ತಾನಾಗಿಯೇ ಪ್ರಾಪ್ತಿಯಾಯಿತು. ಇವರ ಮನೆಯೇ ಸ್ವಾತಂತ್ರ್ಯ ಹೋರಾಟದ ಕೇಂದ್ರಬಿಂದು ಆಗಿತ್ತೆಂದು ಹೇಳಬಹುದು.

## ಶ್ರೀ ಬಿ.ಎಲ್. ನಂಜುಂಡಶೆಟ್ಟರು

ಶ್ರೀಯುತರು ಬಾಚಹಳ್ಳಿ ಲಕ್ಷ್ಮಣಶೆಟ್ಟರ ಮಗನಾಗಿ ೨೨–೧೨–೧೯೨೪ ರಂದು ಹರದನಹಳ್ಳಿಯಲ್ಲಿ ಜನಿಸಿದರು. ಚಾಮರಾಜನಗರ ಟೌನ್‌ನಲ್ಲಿರುವ ಚಿಕ್ಕ ಅಂಗಡಿಬೀದಿಯಲ್ಲಿರುವ ಬಣಜಗೇರಿ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಪೂರೈಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಏಳನೇ ತರಗತಿವರೆಗೆ ಪೂರೈಸಿದರು. ಪ್ರೌಢಶಾಲೆಯ ಶಿಕ್ಷಣವನ್ನು ನಂಜನಗೂಡು ಟೌನ್‌ನಲ್ಲಿ ಮುಗಿಸಿದರು. ಉನ್ನತ ಶಿಕ್ಷಣಕ್ಕಾಗಿ ಮೈಸೂರಿನ ಮಹಾರಾಜ ಕಾಲೇಜಿಗೆ ಹೋಗಿ ಅಲ್ಲಿ ಬಿ.ಎ. ಪದವಿಯನ್ನು ಪೂರೈಸಿದರು. ಅಲ್ಲಿಂದ ಕಾನೂನಿನ ಬಿ.ಎಲ್. ತರಗತಿಗೆ ಶಾರದ ಕಾನೂನು ಕಾಲೇಜಿಗೆ ಸೇರಿದರು. ಪ್ರೌಢಶಾಲೆಯಲ್ಲಿದ್ದಾಗಲೇ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು. ನಂಜನಗೂಡು ಟೌನ್‌ನಲ್ಲಿರುವ ಸುತ್ತಮುತ್ತಲ ಹಳ್ಳಿಗಳಲ್ಲಿ ಹೋಗಿ ಕ್ವಿಟ್ ಇಂಡಿಯಾ ಚಳುವಳಿಯ ವಿಷಯ ತಿಳಿಸಿ ಪ್ರತಿಯೊಬ್ಬ ಭಾರತೀಯರು ಭಾಗವಹಿಸಬೇಕೆಂದು ಭಾಷಣಗಳನ್ನು ಮಾಡಿದರು. ಆಗ ಸರ್ವರ ಸಹಕಾರವು ಸಿಕ್ಕಿತು. ಬ್ರಿಟಿಷರ ವಿರುದ್ಧ ಘೋಷಣೆ ಕೂಗುತ್ತಾ, ವಾಹನಗಳನ್ನೆಲ್ಲಾ ಅಡ್ಡಗಟ್ಟಿ, ಟೆಲಿಗ್ರಾಂ ತಂತಿಗಳನ್ನು ಕಿತ್ತು ಹಾಕಿದರು. ಈ ಹೋರಾಟಗಳಿಗೆ ಸಾರ್ವಜನಿಕರು ಬೆಂಬಲ ನೀಡಿದರು, ಹಾಗಾಗಿ ಸತ್ಯಾಗ್ರಹವು ಯಶಸ್ವಿಯಾಗಿ ನಡೆಯಿತು ಎಂದು ಬಿ.ಎಲ್. ನಂಜುಂಡಶೆಟ್ಟರು

ಬರೆದುಕೊಂಡಿದ್ದಾರೆ. ಇವರ ತಂದೆಯವರು ಮತ್ತು ಇವರ ಸಹೋದರುಗಳಾದ ಎನ್.ರಾಜಶೆಟ್ಟರು, ಎನ್.ನಾರಾಯಣಶೆಟ್ಟರು ಎಲ್ಲರೂ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಇದೇ ಸಮಯದಲ್ಲಿ ಮಲೆಯೂರು ಚಿಕ್ಕಲಿಂಗಪ್ಪನವರು, ಮಾದಾಪುರದ ಪುಟ್ಟನಂಜಪ್ಪನವರು, ಹೆಚ್.ಕೆ.ಕುಮಾರಸ್ವಾಮಿರವರು, ಸಿ.ರಂಗಸ್ವಾಮಿರವರು. ಸಿ.ವಿ.ವೆಂಕಟರಾಯರು, ಯತಿರಾಜುರವರು, ಕೊಚ್ಚಿ ಕೃಷ್ಣಮೂರ್ತಿರವರು, ಸಿ.ಗೋಪಾಲರವರು, ಪರಶುರಾಮುರವರು, ಬಾಲಕೃಷ್ಣರವರು, ಸಿ.ಎನ್.ವಿಷಕಂಠಯ್ಯನವರು, ದೊಡ್ಡರಾಯ ಪೇಟೆಯ ವೆಂಕಟಶೆಟ್ಟರು, ಡಿ.ಜೆ.ಶಂಕರಪ್ಪನವರು, ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ೧೪.೯.೧೯೪೨ರಂದು ಇವರನ್ನೆಲ್ಲಾ ಬಂಧಿಸಿ ಮೈಸೂರು ಪೋಲಿಸ್ ಕಛೇರಿಗೆ (ಹ್ಯಾಮಿಲ್ಟನ್ ಕಟ್ಟಡ) ಕರೆದುಕೊಂಡು ಹೋದರು, ರಾತ್ರಿ ಇಲ್ಲೇ ಇರಿಸಿದ್ದರು. ಹೇಳಿಕೆ ಮುಗಿದ ಮೇಲೆ ಇವರನ್ನೆಲ್ಲಾ ಕೇಂದ್ರ ಬಂದೀಖಾನೆಗೆ ಕಳುಹಿಸಿದರು. ಕಾರಾಗೃಹದಲ್ಲಿ ಭಾರತದ ಹಲವಾರು ಕಡೆಗಳಿಂದ ಸತ್ಯಾಗ್ರಹಿಗಳು ಬಂದಿದ್ದರು. ಬಿ.ಎಲ್. ನಂಜುಂಡಶೆಟ್ಟರು ಅವರನ್ನೆಲ್ಲಾ ಭೇಟಿ ಮಾಡಿದರು ವಿದ್ಯಾರ್ಥಿ ಮುಖಂಡರಾದ ಹೆಚ್.ವೈ.ಶಾರದಾಪ್ರಸಾದ್, ಪವಮಾನ ತೀರ್ಥ, ಹೆನ್ರಿ ದೇವದಾಸ, ಅನಂತನಾರಾಯಣ, ಎಂ.ಕೃಷ್ಣಪ್ಪನವರು ಭಾಷಣಗಳನ್ನು ಮಾಡುತ್ತಿದ್ದರು. ಸೆರಮನೆಯಲ್ಲಿ ಅವರಿಗೆ ಸಾಕಷ್ಟು ಮಾರ್ಗದರ್ಶನ ದೊರೆಯಿತು. ನಂತರ ೫.೧೧.೧೯೪೨ ರಲ್ಲಿ ಜೈಲಿನಿಂದ ಬಿಡುಗಡೆಯಾದರು.

ಮೈಸೂರು ಚಲೋ ಚಳುವಳಿಯಲ್ಲಿ ಇವರು ೧೨.೯.೧೯೪೭ರಲ್ಲಿ ಭಾಗವಹಿಸಿದರು. ಚಾಮರಾಜನಗರ ತಾಲ್ಲೂಕಿನ ಹಲವು ಸ್ವಾತಂತ್ರ್ಯ ಹೋರಾಟಗಾರರು ಈ ಹೋರಾಟದಲ್ಲಿ ಬಂಧಿತರಾದರು. ಅವರನ್ನೆಲ್ಲಾ ಮೈಸೂರು ಕೇಂದ್ರ ಬಂದೀಖಾನೆಯಲ್ಲಿ ಇರಿಸಿದರು. ೧೩.೧೧.೧೯೪೭ ರಲ್ಲಿ ಇವರನ್ನು ಬಿಡುಗಡೆ ಮಾಡಿದರು. ಆ ದಿನಗಳಲ್ಲಿ ತಮ್ಮ ತನುಮನಧನವನ್ನೆಲ್ಲಾ ದೇಶಕ್ಕಾಗಿ ಅರ್ಪಿಸಿ ಕೈಲಾದಷ್ಟು ದೇಶ ಸೇವೆ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ಚಂಗಲರಾಯರೆಡ್ಡಿರವರು ಮುಖ್ಯಮಂತ್ರಿಯಾಗಿದ್ದಾಗ ಕಾಂಗ್ರೆಸ್‌ನ ಮುಖಂಡರಾದ ಸಾಹುಕಾರ್ ಚೆನ್ನಯ್ಯನವರು, ಮುಖ್ಯಮಂತ್ರಿಗಳು,



ಕೆ.ಟಿ.ಭಾಷ್ಯಂರವರು, ಟಿ.ಮರಿಯಪ್ಪನವರು, ಜೆನ್ನಿನರಾಮಯ್ಯನವರು ಮತ್ತು ಆಲೂರು ರಂಗರಾಮಯ್ಯನವರು, ಎಸ್. ನಾರಾಯಣರವರು, ಇನ್ನಿತರ ಮುಖಂಡರನ್ನು ಬರಮಾಡಿಕೊಂಡು ತಮ್ಮ ಮನೆಯಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

೧೯೪೭ ರಿಂದ ೧೯೬೩ರವರೆಗೆ ನಂಜುಂಡಶೆಟ್ಟರು ಚಾಮರಾಜನಗರ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯಾಗಿಯೂ, ಶ್ರೀ ಕೆ.ಎಸ್. ಕುಮಾರಸ್ವಾಮಿಯವರು ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀ ಮಾದಾಪುರ ಎಸ್.ಪುಟ್ಟನಂಜಪ್ಪನವರು ಅಧ್ಯಕ್ಷರಾಗಿಯೂ ಅತ್ಯಂತ ಜವಾಬ್ದಾರಿಯಿಂದ ಪಕ್ಷದ ಕೆಲಸ ಮತ್ತು ಸಾರ್ವಜನಿಕ ಕೆಲಸಗಳನ್ನು ಮಾಡಿಕೊಂಡಿದ್ದರು. ೧೩.೧೨.೨೦೨೧ ರಂದು ಹರದನಹಳ್ಳಿಗೆ ನಾನು ಕ್ಷೇತ್ರಕಾರ್ಯಕ್ಕೆ ಭೇಟಿ ನೀಡಿದಾಗ ಇವರ ಮಗನಾದ ವಾಸುದೇವಮೂರ್ತಿ ಮತ್ತು ಅವರ ಸಹೋದರರು ಹೆಚ್ಚಿನ ಮಾಹಿತಿಯನ್ನು ನೀಡಿ ಸಹಕರಿಸಿದರು.

## ಹೆಚ್.ಕೆ. ಕುಮಾರಸ್ವಾಮಿ

ಚಾಮರಾಜನಗರದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತೊಂದು ದೊಡ್ಡ ಹೆಸರು ಹೆಚ್.ಕೆ.ಕುಮಾರಸ್ವಾಮಿರವರು. ಇವರು ಉತ್ತಮ ವಾಗ್ಮಿಗಳು, ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಉತ್ತಮವಾಗಿ ಬರೆಯಬಲ್ಲವರಾಗಿದ್ದರು. ಇವರು ಸ್ವಯಂ ನಿರ್ಮಿತ ಮನುಷ್ಯರಾಗಿದ್ದರು. ಹೋರಾಟದ ದಿನಗಳಲ್ಲಿ ಪ್ರತಿನಿತ್ಯ ಯುವಕರ ಗುಂಪುಗಳನ್ನು ಸೇರಿಸಿಕೊಂಡು ನಗರದ ಬೀದಿ ಬೀದಿಗಳಲ್ಲಿ ಪ್ರಭಾತಪೇರಿ ನಡೆಸುತ್ತಿದ್ದರು. ಇವರ ಪೂರ್ವಜರು ಬಹುಶಃ ಹೆಚ್.ಡಿ.ಕೋಟೆಯವರಿರಬೇಕು. ಬಾಲ್ಯದಲ್ಲಿ ಚಾಮರಾಜನಗರಕ್ಕೆ ಬಂದಿರಬೇಕು. ತಂದೆ ಹೆಚ್.ಕೆ.ಕೃಷ್ಣಪ್ಪ, ತಾಯಿ ಮಹಾಲಕ್ಷ್ಮಿ. ತಂದೆಯವರು ಚಾಮರಾಜೇಶ್ವರ ದೇವಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಕುಮಾರಸ್ವಾಮಿರವರದು ಬಡತನದ ಕುಟುಂಬವಾಗಿತ್ತು. ಸಣ್ಣಪುಟ್ಟ ಕೆಲಸ ಮಾಡಿ ಮನೆಗೆ ನೆರವಾಗುತ್ತಿದ್ದರು. ಹೋರಾಟಗಾರ ಸಿ.ಗೋಪಾಲರಾವ್ ಜೊತೆ ಸೇರಿ ಲೆಕ್ಕ ಬರೆಯುವ ಕೆಲಸ ಮಾಡುತ್ತಿದ್ದರು. ಸಣ್ಣ ವಯಸ್ಸಿನಲ್ಲೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಗರಡಿ ಮನೆಯಲ್ಲಿ ಕಸರತ್ತು ಮಾಡುವ

ಹವ್ಯಾಸ ಬೆಳೆಸಿಕೊಂಡಿದ್ದರು. ೧೯೪೨ ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಮತ್ತು ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ೧೯೪೭ ರ ಹೊತ್ತಿಗೆ ಮೈಸೂರಿನಲ್ಲೆ ಇಂಟರ್‌ಮೀಡಿಯೆಟ್ ಓದಲು ಹೋಗಿ ಅದ್ಭುತ ಭಾಷಣಕಾರ ಹೆಚ್.ವೈ.ಶಾರದಾಪ್ರಸಾದರು ಮತ್ತು ಕೃಷ್ಣಪ್ಪನವರ ಸ್ನೇಹ ಗಿಟ್ಟಿಸಿಕೊಂಡರು. ವಿದ್ಯಾರ್ಥಿ ನಾಯಕರಾಗಿ ಬೆಳೆದರು. ಈ ಮೂವರು ಅಂದಿಗೆ ಸಂಸ್ಥಾನದ ಯುವಕಣ್ಮಣಿಗಳಾಗಿದ್ದರು. ಇವರುಗಳನ್ನು ಹಿಡಿಯಲು ಪೋಲಿಸರು ತಿಣಕಾಡಬೇಕಾಯಿತು. ೧೯೪೨ ರ ಚಳುವಳಿಯಲ್ಲಿ ಈಸೂರಿನಲ್ಲಿ ದಸ್ತಗಿರಿಯಾದರು. ಈ ವೇಳೆಗಾಗಲೇ ಪತ್ರಿಕೆಗಳ ನಂಟು ಬೆಳೆದು ಸಾಧ್ವಿ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಕನ್ನಡದ ಉತ್ತಮ ವಾಗ್ಮಿಯಾಗಿ ಗುರುತಿಸಿಕೊಂಡಿದ್ದರು. ಕೃಷ್ಣಮೂರ್ತಿರವರ ಜೊತೆ ಸೇರಿ ಸೆರಮನೆಯಲ್ಲೆ 'ಗೋಕುಲ' ಎಂಬ ಪತ್ರಿಕೆ ತಂದರು. ೧೯೪೭ ರ ಮೈಸೂರು ಚಲೋ ಚಳುವಳಿಯಲ್ಲಿ ಮೈಸೂರಿನಲ್ಲೆ ದಸ್ತಗಿರಿಯಾದರು.

## ಎಸ್ ಪ್ರಭುವಯ್ಯ

ಶ್ರೀಯುತರಾದ ಎಸ್. ಪ್ರಭುವಯ್ಯನವರು ೧೯೦೩ರಲ್ಲಿ ಇಂದಿನ ಕೊಳ್ಳೆಗಾಲ ತಾಲೂಕಿನಲ್ಲಿ ಜನಿಸಿದರು. ಅಂದಿನ ಕೊಳ್ಳೆಗಾಲ ಮೈಸೂರು ಜಿಲ್ಲೆಯಲ್ಲಿ ಇದ್ದರೂ ಕೂಡ ಏಕೀಕರಣದ ಪೂರ್ವದಲ್ಲಿ ಕೊಯಮತ್ತೂರು ಜಿಲ್ಲೆಯ ಭಾಗವಾಗಿತ್ತು, ಅದು ಬ್ರಿಟಿಷರ ಅಧೀನದ ಪ್ರಾಂತ್ಯದಲ್ಲಿತ್ತು. ಆದ್ದರಿಂದ ಕೊಳ್ಳೆಗಾಲದಲ್ಲಿ ನಡೆದ ಹೋರಾಟ ನೇರವಾಗಿ ಬ್ರಿಟಿಷರ ವಿರುದ್ಧವಾಗಿತ್ತು ಎಂಬುದು ಬಹಳ ವಿಶೇಷವಾಗಿದೆ.

ಎಸ್.ಪ್ರಭುವಯ್ಯನವರು ಕ್ರಿ.ಶ.೧೯೩೦ರ ಸುಮಾರಿನಲ್ಲಿ ಹೊರಡಿಸುತ್ತಿದ್ದ 'ತಾಯಿನಾಡು' ಮತ್ತು 'ತಮಿಳು ದಿನಮಣಿ' ಎಂಬ ಪತ್ರಿಕೆಗಳನ್ನು ಓದುವುದರ ಮೂಲಕ ಸ್ವಾತಂತ್ರ್ಯದ ಹೋರಾಟಕ್ಕೆ ಆಕರ್ಷಿತರಾದರು. ಅಂದಿನಿಂದಲೂ ಕೂಡ ಇವರು ಖಾದಿ ಬಟ್ಟೆಯನ್ನೇ ತೊಡುತ್ತಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ತಮ್ಮ ಊರಿನ ವಕೀಲರಾದ ಶ್ರೀನಿವಾಸ ಅಯ್ಯಂಗಾರ್ ಹಾಗೂ ಗೋಪಾಲಸ್ವಾಮಿ ಅಯ್ಯರ್, ಎಂ.ಎಸ್.ನಂಜುಂಡಯ್ಯ, ಸಿ.ಎ.ಸುಬ್ರಹ್ಮಣ್ಯ



ಇವರೆಲ್ಲರು ಕಾಂಗ್ರೆಸ್‌ನಲ್ಲಿ ಪ್ರಮುಖ ಮುಖಂಡರಾಗಿದ್ದರು. ಕೊಯಮತ್ತೂರಿನಿಂದ ಕೊಳ್ಳೆಗಾಲಕ್ಕೆ ಆಗಾಗ ಮದ್ರಾಸ್‌ನ ಕಾಂಗ್ರೆಸ್ ನಾಯಕರು ಬಂದು ಭಾಷಣಗಳನ್ನು ಪ್ರಚಾರಗಳನ್ನು ಮಾಡುತ್ತಿದ್ದರು ಎಂದು ಅವರು ತಿಳಿಸುತ್ತಾರೆ. ಪ್ರಚಾರಕ್ಕೆ ಭಾಷಣಕ್ಕಾಗಿ ಬರುತ್ತಿದ್ದಂತಹ ಪ್ರಮುಖ ನಾಯಕರುಗಳೆಂದರೆ ಕಾಮರಾಜ ನಾಡಾರ್, ಗೋಬಿಚೆಟ್ಟಿಪಾಳಯಂನ ಸ್ವಾಮಿಗೌಂಡರ್, ಕೊಗಲೂರಿನ ಸುಬ್ಬಣ್ಣಗೌಡ, ಪಲ್ಲಕಿಯ ಪಳನಿಸ್ವಾಮಿ. ಇವರ ಭಾಷಣಗಳು ಕೊಳ್ಳೆಗಾಲದಲ್ಲಿ ಪ್ರಖ್ಯಾತವಾಗಿದ್ದವು. ೧೯೩೭ರಲ್ಲಿ ಚುನಾವಣಾ ಪ್ರಚಾರಕ್ಕೂ ಕೂಡ ಅನೇಕ ನಾಯಕರು ಬಂದಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್‌ನಿಂದ ಎಸ್. ಪ್ರಭುಸ್ವಾಮಿಯವರು ಆಯ್ಕೆಯಾದರು. ಕ್ರಿ.ಶ. ೧೯೪೧ರ ಸಂದರ್ಭದಲ್ಲಿ ಇಡೀ ತಾಲ್ಲೂಕಿನಿಂದ ವೈಯಕ್ತಿಕ ಸತ್ಯಾಗ್ರಹ ಮಾಡಿದವನು ತಾನೊಬ್ಬನೇ ಎಂದು ಎಸ್.ಪ್ರಭುವಯ್ಯನವರು ತಿಳಿಸುತ್ತಾರೆ. ವೈಯಕ್ತಿಕ ಸತ್ಯಾಗ್ರಹ ಮಾಡುತ್ತಾ, ವಿರೋಧಿ ಪ್ರಚಾರ ಮಾಡುತ್ತಾ ತಮಿಳುನಾಡಿನ ಮುಖ್ಯ ಪಟ್ಟಣಗಳ ಮುಖಾಂತರ ಹೋಗುತ್ತಿರುವಾಗ ಮದ್ರಾಸ್‌ನಲ್ಲಿ ಎಗ್‌ಮೋರಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ೦೨.೦೫.೧೯೪೧ರಂದು ಆರು ವಾರ ಕಠಿಣ ಶಿಕ್ಷೆಯನ್ನು ವಿಧಿಸಿದರು. ಸುಮಾರು ದಿನಗಳವರೆಗೆ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು.

೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ತಾಲ್ಲೂಕಿನಲ್ಲಿ ಶಿಕ್ಷೆಗೆ ಗುರಿಯಾದವನು ನಾನೊಬ್ಬನೇ ಎಂದು ಅವರು ತಿಳಿಸುತ್ತಾರೆ. ಅಕ್ಟೋಬರ್ ೨ ಗಾಂಧಿ ಜಯಂತಿಯಂದು ಇಡೀ ಊರಿನ ನೂರಾರು ಜನರು ಭಜನೆಯನ್ನು ಮಾಡಿಕೊಂಡು ಮೆರವಣಿಗೆ ಹೊರಟಿದ್ದರು. ಅಂತಹ ಸಂದರ್ಭದಲ್ಲಿ ಪೋಸ್ಟ್ ಆಫೀಸಿನ ಬಳಿ ಪೋಲಿಸರು ನನ್ನನ್ನು ತಡೆದು ಬಂಧಿಸಿದರು, ಆನಂತರ ಮೂರು-ನಾಲ್ಕು ಜನರನ್ನು ಬಂಧಿಸಿದರು. ಆದರೆ ಹುಡುಗರು ಕ್ಷಮೆ ಕೇಳಿದೊಡನೆ ಅವರನ್ನು ಬಿಡುಗಡೆ ಮಾಡುತ್ತಿದ್ದರು.

ಎಸ್.ಪ್ರಭುವಯ್ಯನವರನ್ನು ಅಕ್ಟೋಬರ್ ೧೫ರ ರವರೆಗೆ ಕೊಳ್ಳೆಗಾಲದ ಲಾಕಪ್‌ನಲ್ಲಿ ಇಟ್ಟಿದ್ದರು. ಮುಂದೆ ಕೊಳ್ಳೆಗಾಲ ಸಬ್‌ಡಿವಿಷನ್ ಮ್ಯಾಜಿಸ್ಟ್ರೇಟರು ಡಿಫೆನ್ಸ್ ಆಫ್ ಇಂಡಿಯಾ ರೂಲ್ ೫೬(೪) ರಂತೆ ೬ ತಿಂಗಳ ಶಿಕ್ಷೆಯನ್ನು

ವಿಧಿಸಿದರು. ೧೩.೧೦.೧೯೪೨ ರಿಂದ ೨೩.೦೩.೧೯೪೩ ರ ವರೆಗೆ ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು.

೧೯೫೬ರಲ್ಲಿ ಎಸ್.ಪ್ರಭುವಯ್ಯವರನ್ನು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ನೇಮಿಸಿದರು. ಇದಲ್ಲದೆ ಕೊಯಮತ್ತೂರು ಡಿ.ಸಿ.ಸಿ. ಕಾರ್ಯಸಮಿತಿ ಸದಸ್ಯರಾಗಿಯೂ, ಮದ್ರಾಸ್ ಪಿ.ಸಿ.ಸಿ. ಸದಸ್ಯರಾಗಿಯೂ ಕೆಲಸವನ್ನು ನಿರ್ವಹಿಸಿದರು. ೧೯೪೭ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಮತ್ತು ಅರಮನೆ ಸತ್ಯಾಗ್ರಹದಲ್ಲಿ ೧೧.೧೦.೧೯೪೭ರಲ್ಲಿ ಪಾಲ್ಗೊಂಡು ಎರಡು ದಿನ ಶಿಕ್ಷೆಗೆ ಒಳಗಾಗಿದ್ದರು. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಸ್ವಾತಂತ್ರ್ಯದ ಹೋರಾಟಕ್ಕಾಗಿ ಶಿಕ್ಷೆ ಅನುಭವಿಸಿದವರಲ್ಲಿ ಇವರು ಪ್ರಮುಖರು.

## ಎಸ್. ಗಾಂಧಿ ಪುಟ್ಟನಂಜಪ್ಪ

ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅತ್ಯಂತ ಪ್ರಮುಖರು, ಗಾಂಧೀವಾದಿಗಳು,ಆದರ್ಶವಾದಿಗಳು,ಶಿಸ್ತು ಮತ್ತು ಸಂಯಮಕ್ಕೆ ಹೆಸರಾದವರು ಗಾಂಧಿ ಪುಟ್ಟನಂಜಪ್ಪ. ಇಡೀ ಚಾಮರಾಜನಗರದಲ್ಲಿ ಇವರನ್ನು 'ಚಾಮರಾಜನಗರದ ಗಾಂಧಿ' ಎಂದೇ ಕರೆಯುತ್ತಿದ್ದರು. ಊರಿನ ಜನ ಹೇಳುವ ಹಾಗೆ ಇವರು ತಮ್ಮ ಕೊನೆ ದಿನದವರೆಗೂ ಗಾಂಧಿ ಟೋಪಿಯನ್ನು ಧರಿಸುವುದನ್ನು ಬಿಡಲಿಲ್ಲ. ೧೯೩೦ರ ನಂತರ ಮೈಸೂರು ಸಂಸ್ಥಾನದಲ್ಲಿ ಯಾವುದೇ ರೀತಿಯ ಸ್ವಾತಂತ್ರ್ಯದ ಹೋರಾಟಗಳಿರಲಿ, ಚಳುವಳಿಗಳಾಗಿರಲಿ ಭಾಗವಹಿಸುತ್ತಿದ್ದರು. ಅಲ್ಲದೆ ಅಂದು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸದಸ್ಯತ್ವನ್ನು ಪಡೆಯುವುದು ಬಹಳಷ್ಟು ಕಠಿಣವಾದ ಕೆಲಸವಾಗಿತ್ತು. ಇಂತಹ ಸಂದರ್ಭದಲ್ಲಿ ೧೯೨೫ರಲ್ಲಿ ಅಖಿಲ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯತ್ವವನ್ನು ಹೊಂದಲು ದೊಡ್ಡರಾಯಪೇಟೆ ಡಿ.ಜೆ.ಶಂಕರಪ್ಪನವರನ್ನು ನೀಲಗಿರಿಗೆ (ಮದ್ರಾಸ್) ಕಳುಹಿಸಿ ಅಲ್ಲಿಂದ ಒಂದು ಬುಕ್ಕನ್ನು ತರಿಸಿ ಗಾಂಧಿ ಎಸ್.ಪುಟ್ಟನಂಜಪ್ಪನವರು ಮತ್ತು ಡಿ.ಜೆ.ಶಂಕರಪ್ಪನವರು ಇಬ್ಬರೂ ಸೇರಿ ಒಬ್ಬರನ್ನೊಬ್ಬರು ಸದಸ್ಯತ್ವ ಮಾಡಿಕೊಂಡು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಆಫೀಸಿಗೆ ಸದಸ್ಯತ್ವವನ್ನು ಕಳುಹಿಸಿಕೊಟ್ಟಿದ್ದರು. ನಂತರ ಮೈಸೂರು ಸಂಸ್ಥಾನದಲ್ಲಿ ಮತ್ತು ಚಾಮರಾಜನಗರದಲ್ಲಿ ಕಾಂಗ್ರೆಸ್ ಜನ್ಮತಾಳುವವರೆಗೂ ಇದೇ ರೀತಿಯಾದ ಹೋರಾಟಗಳನ್ನು ಮುಂದುವರಿಸಿಕೊಂಡು ಬಂದರು. ನಂತರ ಚಾಮರಾಜನಗರ ತಾಲ್ಲೂಕಿನ ಕಾಂಗ್ರೆಸ್ ಅಧ್ಯಕ್ಷರಾಗಿ ಎಸ್.ಗಾಂಧಿ ಪುಟ್ಟನಂಜಪ್ಪನವರು ಅವಿರೋಧವಾಗಿ ಚುನಾಯಿತರಾದರು. ೧೯೬೨ರವರೆಗೂ ಆ ಸ್ಥಾನಕ್ಕೆ ಯಾವುದೇ ಸೂಕ್ತ ವ್ಯಕ್ತಿ ಇಲ್ಲದೆ ಇರುವ ಕಾರಣ ಎಸ್.ಗಾಂಧಿ ಪುಟ್ಟನಂಜಪ್ಪನವರನ್ನೇ ಚುನಾಯಿಸಿಕೊಂಡು ಬರಲಾಯಿತು. ಆದರೆ ನಿಸ್ವಾರ್ಥತೆ, ಪ್ರಾಮಾಣಿಕತೆ ಮತ್ತು ಶಿಸ್ತಿಗೆ ಹೆಸರಾದ ಗಾಂಧಿ ಎಸ್. ಪುಟ್ಟನಂಜಪ್ಪನವರು ಸ್ವಯಂ ಇಚ್ಛೆಯಿಂದ ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಟ್ಟು ಮುಂದಿನ ಪೀಳಿಗೆಗೆ ಮಾದರಿ ಆದರು.



೧೯೪೬–೪೭ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉಮೇದುದಾರರಾಗಿ ಸ್ಪರ್ಧಿಸಿ ಜಯಗಳಿಸಿದರು. ಈ ಹುದ್ದೆಯಲ್ಲಿ ೧೯೬೨ ರವರೆಗೂ ಇದ್ದು ಸುಮಾರು ಏಳು ವರ್ಷಗಳ ಕಾಲ ಗಾಂಧಿತತ್ವ ಮತ್ತು ಅವರ ಆದರ್ಶಗಳ ಕಾರ್ಯವನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದರು. ೧೯೫೪ ರಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಗೆ ಚುನಾಯಿತ ಸದಸ್ಯರಾಗಿ ಆರಿಸಿ ಬಂದು ೧೯೫೯ ರವರೆಗೂ ಸುಮಾರು ಐದು ವರ್ಷಗಳ ಕಾಲ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಚಾಮರಾಜನಗರ ಜಿಲ್ಲೆಯ ಪ್ರತಿನಿಧಿಯಾಗಿದ್ದರು. ತಾಲ್ಲೂಕಿನ ಅಡ್ವೈಸರಿ ಬೋರ್ಡು ಹಾಗೂ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯಲ್ಲಿಯೂ ಸೇವೆ ಸಲ್ಲಿಸಿರುತ್ತಾರೆ. ಸ್ವಾತಂತ್ರ್ಯಪೂರ್ವ ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಸುಮಾರು ೬–೭ ವರ್ಷಗಳ ಕಾಲ ಕಾರ್ಯವನ್ನು ನಿರ್ವಹಿಸಿರುತ್ತಾರೆ.

ಶ್ರೀಯುತ ಗಾಂಧಿ ಎಸ್.ಪುಟ್ಟನಂಜಪ್ಪನವರು ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ನಡೆದ ಕೆಲವು ಹೋರಾಟಗಳ ಸ್ಮರಣೀಯ ಘಟನಾವಳಿಗಳನ್ನು ವಿವರಿಸುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಅಂದು ಕ್ರಿಶ್ಚಿಯನ್ ಪಾದ್ರಿಗಳ ಹಾವಳಿ ತೀವ್ರವಾಗಿತ್ತು. ಅವರುಗಳಿಗೆ ಸರ್ಕಾರದ ಯಾವುದೇ ಭೀತಿ ಇರಲಿಲ್ಲ. ಹಾಗಾಗಿ ಜನತೆಗೆ ಹಣದ ಆಮಿಷ ಇನ್ನಿತರ ಸೌಕರ್ಯಗಳನ್ನು ಒದಗಿಸುವುದರ ಮೂಲಕ ಆಕರ್ಷಿಸಿ ಸ್ಥಳೀಯರನ್ನು ಮತಾಂತರ ಮಾಡುತ್ತಿದ್ದರು. ಇಂತಹ

ಒಂದು ಘಟನೆ ಚಾಮರಾಜನಗರ ತಾಲ್ಲೂಕಿನ ಉಗನೇ ಎಂಬ ಗ್ರಾಮದಲ್ಲಿ ನಡೆಯಿತು. ಈ ಗ್ರಾಮದಲ್ಲಿ ಕ್ರಿಶ್ಚಿಯನ್ ಆಗಿ ಪರಿವರ್ತನೆ ಹೊಂದಿದಂತಹ ಸ್ಥಳೀಯರನ್ನು ಮನವೊಲಿಸಿ ಮತ್ತೆ ನಂಜನಗೂಡಿಗೆ ಕರೆತಂದು ಸಬ್ಡಿವಿಷನ್ ಸಾಹೇಬರ ಮೇಲ್ವಿಚಾರಣೆಯಲ್ಲಿ, ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಹಾಗೂ ಕೆ.ಶೇಷಾದ್ರಿ ಅಯ್ಯಂಗಾರ್ ಖ್ಯಾತ ವಕೀಲರು ಮತ್ತು ಗಾಂಧಿವಾದಿಗಳು ಇವರ ಪೌರೋಹಿತ್ಯದಲ್ಲಿ ಉಗನೇ ಗ್ರಾಮದ ಹರಿಜನ ಸಹೋದರರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರಲಾಯಿತು. ಇಂತಹ ಕಾರ್ಯಕ್ರಮದ ತಂಡದಲ್ಲಿ ಶ್ರೀಯುತ ಗಾಂಧಿ ಪುಟ್ಟನಂಜಪ್ಪನವರು ಕೂಡ ಭಾಗವಹಿಸಿದ್ದರು.

ಚಾಮರಾಜನಗರ ತಾಲ್ಲೂಕು ಭೋಗಾಪುರ ಗ್ರಾಮದಲ್ಲಿ ಒಂದು ಘಟನೆ ನಡೆಯಿತು. ಈ ಗ್ರಾಮದಲ್ಲಿ ಕ್ರೈಸ್ತರಿಗೂ ಮತ್ತು ಹರಿಜನರಿಗೂ ಬಾವಿ ನೀರು ತೆಗೆದುಕೊಳ್ಳುವ ವಿಚಾರದಲ್ಲಿ ಜಗಳವಾಗಿ, ಕ್ರಿಶ್ಚಿಯನ್ನರು ಹರಿಜನರಿಗೆ ತುಂಬಾ ಕಿರುಕುಳವನ್ನು ಕೊಟ್ಟು ಬಾವಿಯನ್ನು ಹರಿಜನರಿಗೆ ಬಂದ್ ಮಾಡಿದರು. ಈ ವಿಚಾರವನ್ನು ಹರಿಜನರೆಲ್ಲ ಸೇರಿ ತಗಡೂರು ರಾಮಚಂದ್ರರಾಯರಿಗೆ ತಿಳಿಸಿದರು. ಕೂಡಲೇ ಈ ಘಟನೆಗೆ ಸ್ಪಂದಿಸಿದ ತಗಡೂರು ರಾಮಚಂದ್ರರಾಯರು ಅಸಿಸ್ಟೆಂಟ್ ಪೋಲಿಸ್ ಸೂಪರಿಂಟೆಂಡೆಂಟ್‌ರ ಸಹಾಯದೊಂದಿಗೆ ಭೋಗಾಪುರಕ್ಕೆ ಬಂದು ಹರಿಜನರಿಗೆ ನ್ಯಾಯವನ್ನು ದೊರಕಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸ್ವತಃ ಗಾಂಧಿ ಪುಟ್ಟನಂಜಪ್ಪನವರು ಭಾಗವಹಿಸಿದ್ದರು.

ಇವರ ಕಾಲದಲ್ಲೇ ನಡೆದ ಮತ್ತೊಂದು ಘಟನೆ ಅತ್ಯಂತ ಸ್ವಾರಸ್ಯಕರವಾಗಿದೆ. ಘಟನೆಯಲ್ಲಿ ದಿವಂಗತ ಗಾಂಧಿ ಪುಟ್ಟನಂಜಪ್ಪನವರು ವಹಿಸಿದ ಪಾತ್ರ ಅತ್ಯಂತ ಶ್ಲಾಘನೀಯ ಮತ್ತು ಇಂದಿನ ಪೀಳಿಗೆಗೆ ಮಾದರಿಯಾಗಿದೆ.ಚಾಮರಾಜನಗರ ತಾಲ್ಲೂಕು ಹಂಡರಕಳ್ಳಿ ಗ್ರಾಮ ಪಂಚಾಯಿತಿಯಿಂದ ಹರಿಜನರಿಗೆ ಸುಮಾರು ಒಂಬತ್ತು ಸೈಟುಗಳನ್ನು ವಾಸಕ್ಕೆ ಕೊಟ್ಟು ಅಲ್ಲಿ ಅವರುಗಳಿಗೆ ಮನೆಗಳನ್ನು ನಿರ್ಮಿಸಲು ಅವಕಾಶ ಕೊಟ್ಟಿದ್ದರು. ಆದರೆ ಕ್ರಿಶ್ಚಿಯನ್ನರ ಪಿತೂರಿಯಿಂದ ಸೈಟುಗಳನ್ನು ಮಹಾರಾಜರ ಹುಜೂರ್ ಸೆಕ್ರೆಟರಿ ತಂಬುಚೆಟ್ಟಿ ಅವರು ಆದೇಶವನ್ನು ಹೊರಡಿಸಿ ಶೆಡ್ಡುಗಳನ್ನು ಕೀಳಿಸಿ ಕ್ರಿಶ್ಚಿಯನ್ನರಿಗೆ ಕೊಡುವ ಪ್ರಯತ್ನ ಮಾಡಿದರು. ಆಗ ಖ್ಯಾತ ಗಾಂಧಿವಾದಿಗಳು ಮತ್ತು ವಕೀಲರಾಗಿದ್ದ ಕೆ.ಶೇಷಾದ್ರಿ ಅಯ್ಯಂಗಾರ್ ಅವರ ಮುಖಾಂತರ ಆದೇಶವನ್ನು ಸ್ಟೇ ಮಾಡಿಸಿ, ಸ್ಥಳವನ್ನು ಪರಿಶೀಲಿಸಿ ತಗಡೂರು ರಾಮಚಂದ್ರರಾಯರು ಮತ್ತು ಗಾಂಧಿ ಪುಟ್ಟನಂಜಪ್ಪನವರು ಸ್ಥಳ ಪರಿಶೀಲನೆ ಮಾಡಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯ ಮಾಡಿ ಧರಣಿ ನಡೆಸಿ ಹರಿಜನರಿಗೆ ಪಂಚಾಯಿತಿಯಿಂದ ಕೊಟ್ಟಿದ್ದ ನಿವೇಶನಗಳನ್ನು ಖಾಯಂ ಮಾಡಿಸಿದರು. ಈ ಹೋರಾಟದ ಪ್ರತಿಫಲವಾಗಿ ಅನ್ಯಾಯವಾಗಿದ್ದ ಹರಿಜನರಿಗೆ ಗ್ರಾಮದಲ್ಲಿ ನಿವೇಶನಗಳನ್ನು ಕೊಡಿಸಲಾಯಿತು. ಮತ್ತೆ ರೋಮನ್ ಕ್ರಿಶ್ಚಿಯನ್ನರಿಗೂ ಅವರು ಕೇಳಿದ್ದ ನಿವೇಶನಕ್ಕಿಂತ ಜಾಸ್ತಿಯಾಗಿ ೪ ನಿವೇಶನಗಳನ್ನು ಪಕ್ಕದ ಜಮೀನಿನವರಿಂದ ವಶಪಡಿಸಿಕೊಂಡು ವಿತರಿಸಿ ಇಡೀ ಗ್ರಾಮದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡುವಲ್ಲಿ ಗಾಂಧಿ ಪುಟ್ಟನಂಜಪ್ಪನವರ ಪಾತ್ರ ಅತ್ಯಂತ ಶ್ಲಾಘನೀಯವಾಗಿತ್ತು. ಇಂತಹ ಹಲವಾರು ಹೋರಾಟಗಳನ್ನು ಮಾಡುವುದರ ಮೂಲಕ ಚಾಮರಾಜನಗರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವರು ದಿವಂಗತ ಗಾಂಧಿ ಎಸ್.ಪುಟ್ಟನಂಜಪ್ಪನವರು.



ಆನೆಯ ಮೇಲೆ ಮಹಾತ್ಮರ ಮೆರವಣಿಗೆ (೧೭.೮.೧೯೪೭ ಸಾಧ್ವಿ ಪತ್ರಿಕೆ)– ೧೭.೮.೧೯೪೭ ರಂದು ಚಾಮರಾಜನಗರ ಕಾಂಗ್ರೆಸ್ ಸಮಿತಿಯವರು ಸ್ವಾತಂತ್ರ್ಯೋತ್ಸವವನ್ನು ವೈಭವದಿಂದ ನೆರವೇರಿಸಿದರು. ಶ್ರೀ ಎಸ್. ಪುಟ್ಟನಂಜಪ್ಪನವರಿಂದ ಧ್ವಜಾರೋಹಣವಾಯಿತು. ಬೆಳಿಗ್ಗೆ ವಿದ್ಯಾರ್ಥಿಗಳಿಂದ ಧ್ವಜಾರೋಹಣ ಜರುಗಿತು, ಮಧ್ಯಾಹ್ನ ಮೆರವಣಿಗೆ ಮತ್ತು ಭಾಷಣಗಳು ನಡೆದವು.

ಪೌರಸಭೆಯಿಂದ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಶ್ರೀ ಎಸ್.ವೆಂಕಟಸುಬ್ಬ ಶೆಟ್ಟರು ರಾಷ್ಟ್ರ ಧ್ವಜವನ್ನು, ಅಮಲ್ದಾರರು ಮೈಸೂರು ಧ್ವಜವನ್ನು ಹಾರಿಸಿದರು. ಅನಂತರ ಆನೆಯ ಮೇಲೆ ಬೆಳ್ಳಿ ಪಲ್ಲಕ್ಕಿಯಲ್ಲಿ ಮಹಾತ್ಮ ಗಾಂಧೀಜಿಯವರ, ಪಂಡಿತ್ ನೆಹರೂರವರ ಮತ್ತು ಶ್ರೀಮನ್ಮಹರಾಜರವರ ಭಾವಚಿತ್ರಗಳ ಮೆರವಣಿಗೆ, ಬಹಿರಂಗ ಸಭೆ, ಬಹುಮಾನ ವಿನಿಯೋಗಿಸಲಾಯಿತು. ನಗರದ ಬಡಬಗ್ಗರಿಗೆ ಉಚಿತವಾಗಿ ಅನ್ನದಾನ ಮಾಡಲಾಯಿತು.

ಗಾಂಧಿ ಎಸ್. ಪುಟ್ಟನಂಜಪ್ಪನವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಇಡೀ ಜೀವಮಾನವನ್ನು ಮುಡಿಪಾಗಿಟ್ಟಿದ್ದರು. ಕೊನೆಗೆ ಸ್ವಾತಂತ್ರ್ಯದ ದಿನವೇ ತಮ್ಮ ಪ್ರಾಣವನ್ನು ಬಿಟ್ಟದ್ದು ಮಾತ್ರ ಕಾಕತಾಳಿಯವೇ ಸರಿ.

**ಐ.ಎನ್.ಎ. ರಾಮರಾವ್**

ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸಲು ಹೋರಾಡಿದ ಪ್ರಖ್ಯಾತ ಸ್ವಾತಂತ್ರ್ಯದ ವೀರರಲ್ಲಿ ನಮ್ಮ ಕನ್ನಡ ನಾಡಿನ ವೀರರತ್ನ, ಹೆಮ್ಮೆಯ ಪುತ್ರ ರಾಮರಾವ್ ಅತ್ಯಂತ ಪ್ರಮುಖರು. ಶ್ರೀಯುತರು ಐ.ಎನ್.ಎ. ರಾಮರಾವ್ ಎಂದೇ ಪ್ರಸಿದ್ಧರಾಗಿದ್ದಾರೆ. ೨೫.೦೩.೧೯೨೫ರಲ್ಲಿ ಲಕ್ಷ್ಮೀನಾರಾಯಣಪ್ಪ ಮತ್ತು ಸೀತಮ್ಮನವರ ಎರಡನೇ ಪುತ್ರರಾಗಿ ಇಂದಿನ ತಮಿಳುನಾಡಿನ ಪೆರಿಯಾರ್ ಜಿಲ್ಲೆಯ ಗಟ್ಟವಾಡಿಯಲ್ಲಿ ಜನಿಸಿದರು.ಇವರು ಯಾವುದೇ ಸೌಕರ್ಯಗಳಿಲ್ಲದ, ಸೌಲಭ್ಯಗಳಿಲ್ಲದ ಒಂದು ಪುಟ್ಟ ಹಳ್ಳಿಯಲ್ಲಿ ತಂದೆಯವರ ಪಾಲನೆಯಲ್ಲಿ ಬೆಳೆದರು. ಇವರ ಬಾಲ್ಯದ ಶಿಕ್ಷಣ ತೆರಕಣಾಂಬಿ ಮತ್ತು ಚಾಮರಾಜನಗರದಲ್ಲಿ ಆಯಿತು. ಇವರನ್ನು ಇಡೀ ತಾಲ್ಲೂಕಿನ ಜನತೆ ಪ್ರೀತಿಯಿಂದ 'ರಾಮು' ಎಂದೇ ಕರೆಯುತ್ತಿದ್ದರು.

ಶ್ರೀಯುತರು ದೇಶದ ಅಂದಿನ ಸ್ಥಿತಿಗತಿಯನ್ನು ನೋಡಿ ಸ್ವಾತಂತ್ರ್ಯದ ಹೋರಾಟಕ್ಕೆ ಧುಮುಕಿದರು. ದೇಶವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಹೊರತರಲು ಸ್ವಾತಂತ್ರ್ಯದ ಹೋರಾಟಕ್ಕೆ ಒಲವು ತೋರಿದರು.ಈ ಹಿನ್ನಲೆಯಿಂದಾಗಿ ಚಿಕ್ಕವಯಸ್ಸಿನಿಂದಲೇ ಬಹಳ ಶಿಸ್ತಿನ ಜೀವನಕ್ಕೆ ಮಾರುಹೋಗಿ ದೇಶಸೇವೆಗೆ ಹೆಚ್ಚಿನ ಒಲವನ್ನು ವ್ಯಕ್ತಪಡಿಸಿದರು. ೧೯೩೮ ನೇ ಸಾಲಿನಲ್ಲಿ ಮೈಸೂರು ಸರ್ಕಾರದ ವತಿಯಿಂದ ನಡೆಸುತ್ತಿದ್ದ ಬಾಯ್ಸ್ ಬೆಟಾಲಿಯನ್ ಸೇರಿದರು.೧೯೪೧ರಲ್ಲಿ ಆಗಿನ ಮೈಸೂರು ಸಂಸ್ಥಾನದಲ್ಲಿ ಸೈನ್ಯಕ್ಕೆ ಸೇರಿಕೊಂಡು ಸುಮಾರು ಆರು ತಿಂಗಳು ಕಾಲ್ದಳ ಸೈನಿಕನಾಗಿ ನಂತರ ನಾಲ್ಕು ತಿಂಗಳು ರಾಜ್ಯದ ಸೈನಿಕ ದಳದ ಒಂದನೇ ಬೆಟಾಲಿಯನ್ ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿದರು. ೧೯೪೧ರಲ್ಲಿ ಮಲೇಶಿಯಾಕ್ಕೆ (ಸಿಂಗಪೂರ್) ಹೋಗಿ ಅಲ್ಲಿ ಭಾರತ ರಾಷ್ಟ್ರೀಯ ಸೈನ್ಯ ಸೇರಿಕೊಂಡು ಅಲ್ಲಿಯೇ ತರಬೇತಿಯನ್ನು ಪಡೆದು, ೧೯೪೨ರಲ್ಲಿ ಐ.ಎನ್.ಎ. ಸೈನ್ಯ ಸೇರಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದಾರೆ. ಇವರಿಗೆ ಅಲ್ಲಿ ಗೂಢಾಚಾರ್ಯ ಕಾರ್ಯಕ್ಕೆ ನಿಯೋಜಿಸಿ ಈ ಬಗ್ಗೆ ಹೆಚ್ಚಿನ ಶಿಕ್ಷಣಕ್ಕಾಗಿ ಜಪಾನ್‌ಗೆ ಕಳುಹಿಸಲಾಯಿತು.ಶಿಕ್ಷಣ ಪಡೆದ ಶ್ರೀಯುತರು ೧೯೪೪ರಲ್ಲಿ ಬರ್ಮಾ ಮೂಲಕ ಭಾರತ ಪ್ರವೇಶಿಸಿ ಇಂದಿನ ಬಾಂಗ್ಲಾದಲ್ಲಿ ಅಬ್ದುಲ್ ರೆಹಮಾನ್ ಎಂಬ ಹೆಸರಿನಿಂದ ಸಮರ್ಥ ಗೂಢಚಾರಿಯಾಗಿ ಕೆಲಸ ನಿರ್ವಹಿಸಿದರು. ೧೯೪೨ರಲ್ಲಿ ಕ್ರಾಂತಿಕಾರಿ ಬದಲಾವಣೆಯಾದಾಗ ಆಗಿನ ಮಹಾ ನೇತಾರರಾದ ಶ್ರೀ ರಾಸ್ ಬಿಹಾರಿ ಬೋಸ್ ಹಾಗೂ ಜನರಲ್ ಮೋಹನ್‌ಸಿಂಗ್ ಕಟ್ಟಿದ ಐ.ಎನ್.ಎ.ಗೆ ಸೇರಿಕೊಂಡರು. ೧೯೪೩ರಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸರು ಯೂರೋಪಿನಿಂದ ಸಿಂಗಾಪುರಕ್ಕೆ ಮರಳಿ ಬಂದು ಭಾರತದ ರಾಷ್ಟ್ರೀಯ ಸೈನ್ಯದ ಪೂರ್ಣ ಜವಾಬ್ದಾರಿ ವಹಿಸಿಕೊಂಡರು. ಅನಂತರ ರಾಮರಾವ್ ಅವರನ್ನು 'ವಿಚಕ್ಷಣ ದಳ'ದಲ್ಲಿ ಸೇರಿಸಿ ಅವರನ್ನು ಇಂಫಾಲ್‌ಗೆ ಕಳುಹಿಸಲಾಯಿತು.

೧೯೪೩–೪೪ರ ಮಧ್ಯೆ ಮಣಿಪುರ, ಬರ್ಮಾ ಮುಂತಾದ ಸ್ಥಳಗಳಲ್ಲಿ ಬ್ರಿಟಿಷರ ಸೈನ್ಯದೊಂದಿಗೆ ಅಪ್ರತಿಮವಾಗಿ ಹೋರಾಡಿದ ಶ್ರೀಯುತರಿಗೆ ಈ ಯುದ್ಧದ ಸಮಯದಲ್ಲಿ ದೇಹದ ಹಲವು ಭಾಗಗಳಲ್ಲಿ ಗಾಯಗಳಾದವು. ಎಡಗೈ ಹೆಬ್ಬೆರಳನ್ನು ಕಳೆದುಕೊಂಡರು. ಬಲಗೈನ ಉಂಗುರದ ಬೆರಳುಗಳಿಗೆ ಮತ್ತು ಕಿರು ಬೆರಳಿಗೆ ತುಂಬಾ ಪೆಟ್ಟುಬಿದ್ದಿತ್ತು. ಬಲಭುಜಕ್ಕೆ ಮತ್ತು ಬಲಗಾಲಿಗೆ ಗುಂಡು ಬಿದ್ದು ಗಂಭೀರ ಗಾಯಗಳಾದವು.ಆದರೆ ಯಾವುದೇ ಪ್ರಾಣಾಪಾಯವಾಗದೆ ಅಲ್ಲಿಂದ ಹೊರಬಂದರು. ಗುಂಡಿನ ಏಟಿನಿಂದ ಗಾಯಗೊಂಡು ಪ್ರಜ್ಞೆ ತಪ್ಪಿದ್ದಾಗ ೨೫.೦೪.೧೯೪೪ರಂದು ಇವರನ್ನು ಬಂಧಿಸಿ ಇಂಫಾಲಾದ ಮಿಲಿಟರಿ ಆಸ್ಪತ್ರೆಗೆ ಸೇರಿಸಲಾಯಿತು. ಸ್ವಲ್ಪ ದಿನಗಳ ನಂತರ ಇವರನ್ನು ಆಲಿಪುರ ಮಿಲಿಟರಿ ಆಸ್ಪತ್ರೆಗೆ ಸೇರಿಸಲಾಯಿತು. ಎರಡು ತಿಂಗಳ ನಂತರ ಇವರನ್ನು ಜೈಸೂರ ಕೈದಿಗಳ ಶಿಬಿರಕ್ಕೆ ಕಳುಹಿಸಿಕೊಟ್ಟರು. ಅನಂತರ ಇವರನ್ನು ದೆಹಲಿಯ ಕೆಂಪುಕೋಟೆಗೆ ಕರೆದೊಯ್ದು ವಿಚಾರಣೆಗೆ ಗುರಿಪಡಿಸಿದರು. ವಿಚಾರಣೆ ನಂತರ ಹಲವು ಸೇನಾನಿಗಳನ್ನು ಗಲ್ಲಿಗೇರಿಸಿದರು. ಆ ಪಟ್ಟಿಯಲ್ಲಿ ಶ್ರೀ ರಾಮರಾಯರು ೨೩ ನೇಯವರಾಗಿದ್ದರು.

ನೇತಾಜಿ ಸುಭಾಷ್‌ಚಂದ್ರ ಬೋಸರ ಮರಣದ ನಂತರ ಭಾರತದ ರಾಷ್ಟ್ರೀಯ ಸೈನ್ಯ ವಿಸರ್ಜನೆಯಾದ ಮೇಲೆ ಸೈನ್ಯದ ಶಿಬಿರದಿಂದ ಮತ್ತು ಐ.ಎನ್.ಎ. ಯಿಂದ ೧೭.೦೪.೧೯೪೬ ರಂದು ಬಿಡುಗಡೆ ಮಾಡುವ ಸಂದರ್ಭದಲ್ಲಿ ಅಪಾಯಕಾರಿಗಳ ಪಟ್ಟಿಯಲ್ಲಿ ಇವರ ಹೆಸರನ್ನು ಸೇರಿಸಲಾಗಿತ್ತು.

ಐ.ಎನ್.ಎ. ವಿಸರ್ಜನೆಯಾದ ನಂತರ ಮತ್ತೆ ಮೈಸೂರು ಸಂಸ್ಥಾನಕ್ಕೆ ಹಿಂದಿರುಗಿದರು. ಆಗ ಖಾನಿವಾಸರ ಮುಂದಾಳತ್ವದಲ್ಲಿ ಕಾಂಗ್ರೆಸ್ ಸೇವಾದಳವನ್ನು ನಡೆಸುತ್ತಿತ್ತು. ಮೈಸೂರಿಗೆ ಬಂದು ಕಾಂಗ್ರೆಸ್ ಸೇವಾದಳಕ್ಕೆ ಸೇರಿಕೊಂಡರು. ೧೯೪೭ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಎರಡು ತಿಂಗಳುಗಳ ಕಾಲ ಈ ಹೋರಾಟದಲ್ಲಿ ಜೈಲುವಾಸವನ್ನು ಅನುಭವಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯದ ನಂತರ ಕಾನಕಾನಹಳ್ಳಿ ಅಥವಾ ಕನಕಪುರದಲ್ಲಿ ನಡೆದ ಕಾಂಗ್ರೆಸ್ ಸೇವಾದಳದ ಶಿಬಿರದಲ್ಲಿ ರಾಜ್ಯದ ಗಣ್ಯ ನಾಯಕರಾದ ಎನ್.ಎಸ್.ಹರ್ಡಿಕರ್, ಟಿ.ಸಿದ್ಧಲಿಂಗಯ್ಯ, ಕೆ.ಹನುಮಂತಯ್ಯ, ಎ.ಜಿ.ರಾಮಚಂದ್ರರಾವ್‌ರವರ ಪರಿಚಯವಾಗಿ ಮಹಾನ್ ಹೋರಾಟಗಾರರ ಪರಿಚಯ ಇವರಿಗಾಯಿತು. ಮತ್ತೆ ರಾಮರಾಯರ ಶಿಸ್ತು, ಕಾರ್ಯಪ್ರಗತಿ, ದೇಶಪ್ರೇಮ, ಕಾರ್ಯದಕ್ಷತೆ ಇವನ್ನೆಲ್ಲಾ ಕಂಡು ರಾಮರಾಯರನ್ನು ಕಾಂಗ್ರೆಸ್ ಸೇವಾದಳದ ದಳಪತಿಯನ್ನಾಗಿ ನೇಮಿಸಲಾಯಿತು.

ನಂತರ ಕರ್ನಾಟಕದಲ್ಲಿ ನಾ.ಸು. ಹರ್ಡೀಕರ್ ನೇತೃತ್ವದಲ್ಲಿ ಪಕ್ಷಾತೀತ, ಜಾತ್ಯತೀತವಾಗಿ ೧೯೩೦ರಲ್ಲಿ ಸ್ಥಾಪನೆಯಾದ 'ಭಾರತ ಸೇವಾದಳ' ಸಂಸ್ಥೆಯಲ್ಲಿ ಉನ್ನತ ಪದವಿಯೂ ದಳಪತಿ ಹುದ್ದೆಯನ್ನು ಪಡೆದು ಅಧಿಕಾರ ವಹಿಸಿಕೊಂಡು ಸಂಸ್ಥೆಯ ಉನ್ನತ ಬೆಳವಣಿಗೆಗೆ ಹಗಲಿರುಳು ಶ್ರಮಿಸಿದರು.

ಐ.ಎನ್.ಎ. ರಾಮರಾಯರು ಚಾಮರಾಜನಗರ ತಾಲ್ಲೂಕಿನ ಅತ್ಯಂತ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಸ್ಫೂರ್ತಿಯನ್ನು ಮತ್ತು ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶ್ರೀಯುತರು



ದೇಶಕ್ಕಾಗಿ ದುಡಿದ ಮಹಾನ್ ನೇತಾರರಾಗಿದ್ದಾರೆ. ಇವರ ಹೋರಾಟವನ್ನು ಅಂದಿನ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ಪಂಡಿತ ಜವಾಹರಲಾಲ್ ನೆಹರುರವರು ಅತ್ಯಂತ ಹೆಮ್ಮೆಯಿಂದ ಪ್ರಶಂಸಿಸಿದ್ದಾರೆ. ಯಾವುದೇ ಫಲಾಪೇಕ್ಷೆ ಇಲ್ಲದೆ ದೇಶಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಇವರನ್ನು ಚಾಮರಾಜನಗರ ಜಿಲ್ಲೆಯವರು ಎಂದು ಹೇಳಲು ಹೆಮ್ಮೆಯಾಗುತ್ತದೆ.

## ಸೂರ್ಯನಾರಾಯಣ ಪಂಡಿತರು

ಸೂರ್ಯನಾರಾಯಣ ಪಂಡಿತರು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಅಗರದವರು. ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ರಾಷ್ಟ್ರೀಯ ಮುಖಂಡರ ಸಂಪರ್ಕಕ್ಕೆ ಬಂದು ಅವರ ಭಾಷಣಗಳಿಂದ ಪ್ರಭಾವಿತರಾಗಿ ವಿದ್ಯಾಭ್ಯಾಸವನ್ನು ಬಿಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಬೆಂಗಳೂರಿನಿಂದ ಮೈಸೂರು ಸಂಸ್ಥಾನಕ್ಕೆ ಬಂದಾಗ ಇಲ್ಲಿ ಈಗಾಗಲೇ ಮೈಸೂರು ಕಾಂಗ್ರೆಸ್‌ನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ತಗಡೂರು ರಾಮಚಂದ್ರರಾವ್, ಅಗರಂ ರಂಗಯ್ಯನವರು, ಎಂ.ಎನ್. ಜೋಯಿಸ್ ಮುಂತಾದವರ ಜೊತೆ ಸ್ವರಾಜ್ಯ ಹೋರಾಟದಲ್ಲಿ ಜೊತೆಗೂಡಿದರು. ೧೯೩೧ರಲ್ಲಿ ನಡೆಯುತ್ತಿದ್ದ ಕಾನೂನುಭಂಗ ಚಳುವಳಿ, ಗೋಕರ್ಣದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಅಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದರು. ೧೯೩೭ರಲ್ಲಿ ದೊಡ್ಡಬಳ್ಳಾಪುರದಲ್ಲಿ ಸೂರ್ಯನಾರಾಯಣ ಪಂಡಿತರು ಮೊದಲ ಬಾರಿ ದಸ್ತಗಿರಿಯಾದರು. ಆನಂತರ ಮುಂದೆ ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ, ಟೌನ್‌ಹಾಲ್ ಸತ್ಯಾಗ್ರಹ, ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ ಇವುಗಳಲ್ಲಿ ಪಾಲ್ಗೊಂಡು ಹಲವಾರು ಬಾರಿ ಸೆರೆಮನೆ ಶಿಕ್ಷೆಯನ್ನು ಅನುಭವಿಸಿದ್ದಾರೆ. ಈ ರೀತಿ ಹಲವು ವರ್ಷಗಳು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡು ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಚಾಮರಾಜನಗರ ಜಿಲ್ಲೆಯ ಪ್ರಮುಖರಾಗಿದ್ದಾರೆ.

## ಪಿ.ಮಹಾದೇವಪ್ಪ

ಪಿ. ಮಹಾದೇವಪ್ಪನವರು ಆಲೂರಿನಲ್ಲಿ ಜನಿಸಿದರು. ಇವರ ತಂದೆ ಆಲೂರು ಪಿ.ಪುಟ್ಟಮಾದಪ್ಪನವರು. ಇವರ ಮೂಲವೃತ್ತಿ ವ್ಯವಸಾಯ. ಪಿ.ಮಹಾದೇವಪ್ಪನವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪ್ರಮುಖವಾಗಿ ೧೯೪೭ರಲ್ಲಿ ಮೈಸೂರು ಚಲೋ ಚಳುವಳಿಯಲ್ಲಿ ಪ್ರಮುಖವಾಗಿ ಭಾಗವಹಿಸಿದ್ದರು. ಈ ಚಳುವಳಿಯ ಸಂದರ್ಭದಲ್ಲಿ ಮುಖಂಡರಾದ ಗೋಪಾಲರಾಯರನ್ನು ಪೋಲಿಸರು ಬಂಧಿಸಿದರು. ಇವರೆಲ್ಲರನ್ನು ಕೂಡ ಮೈಸೂರು ಜೈಲಿಗೆ ಕೊಂಡೊಯ್ದರು. ಇವರು ಮೈಸೂರು ಜೈಲಿನಲ್ಲಿದ್ದಾಗ ಮೈಸೂರು ಸಂಸ್ಥಾನದಲ್ಲಿದ್ದ ಪ್ರಭಾವಿ ಸ್ವಾತಂತ್ರ ಹೋರಾಟಗಾರರಾಗಿದ್ದ ಎಂ.ಎನ್.ಜೋಯಿಸ್. ಎಸ್.ಪುಟ್ಟನಂಜಪ್ಪ, ಹೆಚ್.ಎಂ.ಚನ್ನಬಸಪ್ಪ, ಎಚ್.ಸಿ.ದಾಸಪ್ಪ ಮೊದಲಾದವರಿಂದ ಹೋರಾಟದ ಧೈರ್ಯ ಸ್ಫೂರ್ತಿ ಪಡೆದುದನ್ನು ನೆನೆದು ಹೆಮ್ಮೆಪಡುತ್ತಿದ್ದರು. ಇವರು ತಮ್ಮ ೩೫ನೇ ವಯಸ್ಸಿನಲ್ಲಿ ಮರಣಹೊಂದಿದರು.

## ಜೆ. ಸಿದ್ಧನಾಯಕ

ಇವರು ಜವರನಾಯಕ ಮತ್ತು ಗುಬ್ಬಮ್ಮ ದಂಪತಿಗೆ ಚಾಮರಾಜನಗರದಲ್ಲಿ ಜನಿಸಿದರು. ೧೯೪೭ರಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಕೆಲಕಾಲ ಮೈಸೂರು ಜೈಲಿನಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ತಮ್ಮ ಹಳೆಯ ವೃತ್ತಿಯಾದ ವ್ಯವಸಾಯದಲ್ಲಿ ತೊಡಗಿಸಿಕೊಂಡು ಜೀವನವನ್ನು ನಡೆಸಿದರು.

## ಎಸ್. ನಾರಾಯಣಸ್ವಾಮಿ

ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದವರು.೧೯೪೭ ರಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದಾಗ ಇವರಿಗೆ ಸ್ವಾತಂತ್ರ್ಯ ಹೋರಾಟದ ಬಿಸಿ ತಟ್ಟಿ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಮೈಸೂರು ಜೈಲಿನಲ್ಲಿ ಎಚ್.ಸಿ ದಾಸಪ್ಪ, ಎಸ್.ಎಂ.ಚನ್ನಬಸಪ್ಪ, ಎಸ್.ನಿಜಲಿಂಗಪ್ಪ, ಹೆಜ್ಜಿಗೆ ಲಿಂಗಣ್ಣ ಮೊದಲಾದ ಗಣ್ಯರ ಸಹಯೋಗ ಲಭಿಸಿತು.



## ಜಿ.ವಿ.ಲಿಂಗಯ್ಯ (ವೀರಪ್ಪ ದೇವರು)

ಶ್ರೀಯುತರು ೨೨.೯.೧೯೨೦ ರಂದು ಜನಿಸಿದರು. ಇವರ ಬಾಲ್ಯ ಶಿಕ್ಷಣ ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ವರೆಗೂ ಮುಗಿಸಿ ನಂತರ ಉನ್ನತ ಶಿಕ್ಷಣಕ್ಕಾಗಿ ಮದ್ರಾಸ್‌ನ ಕುಂಭಕೋಣಂಗೆ ಹೋಗಿ ಅಲ್ಲಿ ಹೋಮಿಯೋಪತಿ ವೈದ್ಯದಲ್ಲಿ ಎ.ಎಂ.ಐ.ಹೆಚ್. ಡಿಪ್ಲೋಮಾವನ್ನು ಪಡೆದರು. ವಿದ್ಯಾರ್ಥಿಯಾಗಿದ್ದಾಗಲೇ ಹೋರಾಟದಲ್ಲಿ ಭಾಗಿಯಾಗುತ್ತಾರೆ. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿ ಸೆರಮನೆವಾಸ ಅನುಭವಿಸಿದರು. ನಂತರ ಇವರ ಹೋರಾಟದ ಕಾರ್ಯಕ್ಷೇತ್ರವನ್ನು ಚಿತ್ರದುರ್ಗಕ್ಕೆ ವರ್ಗಾಯಿಸಿಕೊಂಡರು. ೧೯೪೪ ರಲ್ಲಿ ಚಿತ್ರದುರ್ಗದ ಹೋರಾಟದಲ್ಲಿ ಭಾಗವಹಿಸಿ ಅಲ್ಲಿ ದಸ್ತಗಿರಿಯಾದರು. ನಂತರ ಬೆಂಗಳೂರಿನಲ್ಲೂ ಸೆರೆಮನೆ ವಾಸ ಅನುಭವಿಸಿದರು. ೧೯೪೭ ಸೆಪ್ಟೆಂಬರ್ ೨೯ ರಂದು ಹೊಸದುರ್ಗ ಟೌನ್‌ನಲ್ಲಿ ನಡೆದ ಗೋಲಿಬಾರ್‌ನಲ್ಲಿ ಹಲವು ಜನರ ಸಾವು ಸಂಭವಿಸಿ ಮತ್ತೆ ಹಲವು ಜನರು ಗಾಯಗೊಂಡರು. ಅಂತಿಮವಾಗಿ ಮಹಾರಾಜರೇ ನೋಡಿ ಮೆಚ್ಚುವಂತೆ ಹೋರಾಟ ಮಾಡಿದರು.

ಸ್ವಾತಂತ್ರ್ಯಾನಂತರ ಇವರು ಸಾಮಾಜಿಕ ಕಾರ್ಯಕರ್ತರಾಗಿ ತಮ್ಮ ಸೇವೆಯನ್ನು ಮುಂದುವರೆಸಿದರು. ಹೊಸದುರ್ಗ ಪುರಸಭಾ ಸದಸ್ಯರಾಗಿ, ಕೆಲವು ವರ್ಷ ಹೋಮಿಯೋಪತಿ ವೈದ್ಯರಾಗಿ ಸೇವೆ ಮಾಡಿದರು. ಹೀಗೆ ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ಟೌನ್‌ನಲ್ಲಿ ೧೯೫೨ ರ ವರೆಗೆ ಸೇವೆ ಸಲ್ಲಿಸಿರುತ್ತಾರೆ. ೧೯೫೨ರ ನಂತರ ತಮ್ಮ ಹುಟ್ಟೂರಾದ ಚಾಮರಾಜನಗರದ ಜ್ಯೋತಿಗೌಡನಪುರದಲ್ಲಿ ಪುನರ್‌ವಸತಿ ಕಲ್ಪಿಸಿಕೊಂಡು, ತಾಲ್ಲೂಕಿನ ಸಹಕಾರ ಸಂಘಗಳಲ್ಲಿ ಮತ್ತು ಜ್ಯೋತಿಗೌಡನಪುರದ ಪಂಚಾಯಿತಿಯಲ್ಲಿ ನಿರಂತರ ಸೇವೆಸಲ್ಲಿಸಿದ್ದಾರೆ. ಸಾಮಾಜಿಕ ಕಾರ್ಯಗಳಲ್ಲದೆ, ನಾಟಕ ರಚನೆ, ರಂಗಭೂಮಿ ಕಲಾವಿದನಾಗಿಯೂ ಸೇವೆ ಸಲ್ಲಿಸಿದ್ದಾರೆ.ಗ್ರಾಮಾಂತರ ಪ್ರದೇಶಗಳಲ್ಲಿ ನಾಟಕಗಳ ಶಿಕ್ಷಕರಾಗಿ, ಕೀರ್ತನಕಾರರಾಗಿ ಸೇವೆ ಸಲ್ಲಿಸಿದ್ದಾರೆ. 'ಜ್ಯೋತಿಲಿಂಗ' ಎಂಬ ಕಾವ್ಯನಾಮದಿಂದ ಭಕ್ತಿಗೀತೆಗಳನ್ನು ರಚಿಸಿ ಇಡೀ ತಾಲ್ಲೂಕಿನ ಗ್ರಾಮ ವಾಸಿಗಳಲ್ಲಿ ಅತ್ಯಂತ ಚಿರಪರಿಚಿತರಾಗಿದ್ದಾರೆ. ಇಷ್ಟೆಲ್ಲಾ ಸೇವೆ ಸಲ್ಲಿಸಿದ ಇವರು ವಯೋಸಹಜ

ಕಾಯಿಲೆಯಿಂದ ಬಳಲಿದರು. ಅಂಗವಿಕಲರಾದರೂ ಮೈಸೂರು ಬಾನುಲಿ ಕೇಂದ್ರದಲ್ಲಿ ಕೀರ್ತನಕಾರರಾಗಿ, ಕಥಾಕಾಲಕ್ಷೇಪ ಮಾಡಿ ನಂತರ ದೈವಾಧೀನರಾದರು.

## ಯು.ಎಂ. ಮಾದಪ್ಪ

ಶ್ರೀಮಾನ್ ಯು.ಎಂ. ಮಾದಪ್ಪನವರು ಚಾಮರಾಜನಗರ ಜಿಲ್ಲೆಯ ಉಡಿಗಾಲ ಗ್ರಾಮದವರು. ಇವರು ಬಾಲ್ಯದಲ್ಲಿ ಮಹಾರಾಜ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು, ಸ್ವಾತಂತ್ರ್ಯ ಹೋರಾಟಗಾರರು, ಸ್ವಾಭಿಮಾನಿಗಳು, ರಾಜಕಾರಣಿಗಳು, ಚಾಮರಾಜನಗರ ವಿಧಾನಸಭೆಯ ಕ್ಷೇತ್ರದಿಂದ ಕರ್ನಾಟಕದ ಶಾಸನ ಸಭೆಯ ಮೊದಲ ಮತ್ತು ಎರಡನೆಯ ಅವಧಿಯ ಮೊದಲ ಶಾಸಕರಾಗಿದ್ದಾರೆ. ಇವರು ವಿದ್ಯಾಭ್ಯಾಸದ ಸಂದರ್ಭದಲ್ಲೆ ಸ್ವಾತಂತ್ರ್ಯದ ಕಿಚ್ಚು ಹೊತ್ತಿ ಚಳುವಳಿಗೆ ಧುಮುಕಿದರು. ಕಾಲೇಜಿನಲ್ಲೇ 'ವಿದ್ಯಾರ್ಥಿ ಕಾಂಗ್ರೆಸ್' ಎಂಬ ಸಂಘಟನೆಯಲ್ಲಿ ಖಜಾಂಚಿಯಾಗಿ ಹೋರಾಟದಲ್ಲಿ ಭಾಗವಹಿಸಿದರು.ಆ ವಿದ್ಯಾರ್ಥಿ ಕಾಂಗ್ರೆಸ್‌ಗೆ ೨೫ ಪೈಸೆ ಕೊಟ್ಟು ಸದಸ್ಯರಾದರು. ವಿದ್ಯಾರ್ಥಿಯಾಗಿದ್ದಾಗ ಮಹಾನ್ ಭಾಷಣಕಾರರಾಗಿದ್ದ ಹೆಚ್.ವೈ.ಶಾರದಾಪ್ರಸಾದ್‌ರ ಭಾಷಣದಿಂದ ಪ್ರೇರೇಪಿತರಾದರು. ಕಾಲೇಜಿನಲ್ಲಿದ್ದಾಗ ಕೇಳಿದ ಕುವೆಂಪುರವರ ಅಮೋಘವಾದ ಪಾಠವನ್ನು ಸ್ಮರಿಸಿದ್ದಾರೆ. ಇವರು ೧೯೪೨ ರಲ್ಲಿ ನಡೆದ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ಸ್ವಾತಂತ್ರ್ಯಾನಂತರ ಒಬ್ಬ ಉತ್ತಮ ಸಜ್ಜನ ರಾಜಕಾರಣಿಯಾಗಿ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಇವರು ಚಿಕ್ಕವಯಸ್ಸಿನಲ್ಲಿದ್ದಾಗ, ಗಾಂಧೀಜಿಯವರು ಬದನವಾಳು ಮೂಲಕ ತೆರಕಣಾಂಬಿಗೆ ಗಾಂಧೀಜಿ ಬಂದದನ್ನು ನೋಡಿದೆ ಎಂದು ಹೇಳಿದ್ದಾರೆ.

## ಲಲಿತಾ ಜಿ. ಟ್ಯಾಗೆಟ್

ಶ್ರೀಯುತರು ೧೯೩೨ ಅಕ್ಟೋಬರ್ ೧೦ ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆಯು ಮೂಲತಃ ಪಶ್ಚಿಮ ಬಂಗಾಳದವರಾಗಿದ್ದು ರೈಲ್ವೆ ಅಧಿಕಾರಿಯಾಗಿದ್ದರು. ತಾಯಿ ಹೆಡ್‌ಮಾಸ್ಟರ್ ಆಗಿ ಕಾರ್ಯ



ನಿರ್ವಹಿಸುತ್ತಿದ್ದರು. ತಾಯಿಗೆ ಚಾಮರಾಜನಗರಕ್ಕೆ ವರ್ಗಾವಣೆಯಾದಾಗ ಇಲ್ಲಿ ಬಂದು ನೆಲೆಸಿದರು. ನಂತರ ಮುನ್ಸಿಪಲ್ ಶಾಲೆಯಲ್ಲಿ ಹೈಸ್ಕೂಲ್‌ವರೆಗೆ ಶಿಕ್ಷಣ ಪೂರೈಸಿ ಬಾಲ್ಯದಲ್ಲೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸ್ವಾತಂತ್ರ್ಯ ಬಂದ ಮೇಲೆ ಸೋಷಿಯಲ್ ಎಜುಕೇಷನ್ ಇನ್ ಆರ್ಗನೈಜೇಷನ್‌ನಲ್ಲಿ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಯಾಗಿ ಸುಮಾರು ೩೦ ವರ್ಷ ವೃತ್ತಿ ನಿರ್ವಹಿಸಿ ಪ್ರಸ್ತುತ ತಮ್ಮ ನಿವೃತ್ತ ಜೀವನವನ್ನು ಚಾಮರಾಜನಗರದ ಬೆಸ್ತಗೇರಿಯಲ್ಲಿ ನಡೆಸುತ್ತಿದ್ದಾರೆ.

## ಸ್ವಾತಂತ್ರ್ಯ ಹೋರಾಟದ ನೆನಪುಗಳು

ಶ್ರೀಯುತ ಲಲಿತಾ ಜಿ. ಟ್ಯಾಗೆಟ್‌ರನ್ನು ಚಾಮರಾಜನಗರದಲ್ಲಿರುವ ಅವರ ಮನೆಯಲ್ಲೆ ೧೩.೧೨.೨೦೨೧ ರಂದು ಭೇಟಿ ಮಾಡಿ ಸಂದರ್ಶನ ಮಾಡಿದಾಗ ಹಲವಾರು ವಿಚಾರಗಳನ್ನು ಕುತೂಹಲಕಾರಿ ಮಾಹಿತಿಗಳನ್ನು ನನ್ನೊಂದಿಗೆ (ಡಾ. ಸುಂದ್ರೇಶ.ಎನ್) ಹಂಚಿಕೊಂಡರು. ಸ್ವಾತಂತ್ರ್ಯ ಹೋರಾಟದ ತಮ್ಮ ನೆನಪುಗಳನ್ನು ಹೇಳಿ ಎಂದಾಗ ಈ ಇಳಿವಯಸ್ಸಿನಲ್ಲೂ ಅದೇ ಉತ್ಸಾಹದಿಂದ ಮತ್ತು ಅತ್ಯಂತ ಕ್ರಿಯಾಶೀಲರಾಗಿ ಉತ್ತರಿಸಿದರು. ಇವರು "೧೯೪೭ರ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಚಳುವಳಿ ಬಗ್ಗೆ ಹೇಳುತ್ತಾ ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದೆವು. ಆ ದಿನಗಳು ಹೋರಾಟದ ದಿನಗಳಾಗಿದ್ದವು. ಒಂದು ದಿನ ಶಾಲೆಯಲ್ಲಿ ಇಂಗ್ಲಿಷ್ ತರಗತಿಯಲ್ಲಿ ಕುಳಿತಿದ್ದಾಗ ನಾನು ತರಗತಿಯಿಂದ ಹೊರಬಂದು ಸ್ವಾತಂತ್ರ್ಯ ಬೇಕು ಎಂದು ಕೂಗುತ್ತಾ ಎಲ್ಲರೂ ಹೊರಬರುವಂತೆ ಕೂಗು ಹಾಕಿದೆ. ನನ್ನ ಕೂಗಿಗೆ ಎಲ್ಲರೂ ತರಗತಿಯಿಂದ ಹೊರಬಂದು ಶಾಲೆಯಿಂದಲೇ ಚಳುವಳಿ ಪ್ರಾರಂಭ ಮಾಡಿದೆವು. ನಂತರ ಚಾಮರಾಜನಗರದ ಪ್ರಮುಖ ಬೀದಿಗಳಿಗೆ ಮೆರವಣಿಗೆ ಹೊರಟವು. ಆಗ ಜನರು ಕೂಡ ನಮ್ಮೊಂದಿಗೆ ಭಾಗವಹಿಸಿದರು. ನಾವೆಲ್ಲಾ ಮಾರಿಗುಡಿ ಬಳಿ ಹೋಗಿ ಹೋರಾಟದ ಚರ್ಚೆ ಮಾಡುತ್ತಿದ್ದೆವು. ಆಗ ಅಲ್ಲಿ ನಮಗೆ ಮಲೆಯೂರು ಚಿಕ್ಕಲಿಂಗಪ್ಪನವರು, ಪುಟ್ಟನಂಜಪ್ಪನವರು, ಸಿ.ಗೋಪಾಲರಾವ್‌ರವರು, ಡಿ.ಜೆ.ಶಂಕರಪ್ಪನವರು ಅದ್ಭುತ ಭಾಷಣಗಳನ್ನು ಮಾಡಿ ನಮ್ಮಲ್ಲಿ ಸ್ಫೂರ್ತಿಯನ್ನು, ಹೋರಾಟದ ಕಿಚ್ಚನ್ನೂ ಹತ್ತಿಸುತ್ತಿದ್ದರು.

ವಿದ್ಯಾರ್ಥಿಗಳೆಲ್ಲಾ ಸೇರಿ ಧ್ವಜಾರೋಹಣ ಮಾಡುತ್ತಿದ್ದವು. ಆ ದಿನಗಳಲ್ಲಿ ಧ್ವಜಾರೋಹಣ ಮಾಡುವುದು ಅತ್ಯಂತ ಖುಷಿ, ಹೆಮ್ಮೆ ಮತ್ತು ಉತ್ಸಾಹವನ್ನು ಕೊಡುತ್ತಿದ್ದ ಕೆಲಸವಾಗಿತ್ತು. ಧ್ವಜಾರೋಹಣ ಮಾಡುವಾಗ ಎರಡು ಬಾರಿ ದಸ್ತಗಿರಿಯಾಗಿದ್ದೆ" ಎಂದು ತಿಳಿಸಿದರು.

೧೯೪೭ ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಲು ನಾವು ನಿರ್ಧರಿಸಿದೆವು. ಅದರಂತೆ ನಾವೆಲ್ಲಾ ಕಾಲ್ನಡಿಗೆಯಲ್ಲೇ ಹೋಗಲು ನಿರ್ಧರಿಸಿ ಬದನಗುಪ್ಪೆ ಮಾರ್ಗವಾಗಿ ಹೋಗುವಾಗ ನರಸಾಂಬುಧಿ ರೈಲ್ವೆ ನಿಲ್ದಾಣದ ಬಳಿ ಪೋಲಿಸರು ಬಂದರು. ಆಗ ನಾನು ಎಲ್ಲರೂ ತಪ್ಪಿಸಿಕೊಳ್ಳಿ ಎಂದು ಜೋರಾಗಿ ಕೂಗಿ ಮರ ಬಳ್ಳಿಗಳಲ್ಲಿ ಬಚ್ಚಿಟ್ಟುಕೊಳ್ಳಲು ಹೇಳಿದೆ. ಆಗ ಕೆಲವರು ಓಡಿದರು, ಕೆಲವರು ಬಂಧನವಾದರು. ನಂತರ ನಮ್ಮನ್ನು ಮೈಸೂರು ಜೈಲಿಗೆ ಕರೆದುಕೊಂಡು ಬಂದರು. ಜೈಲಿನಲ್ಲಿ ನಮಗೆಲ್ಲಾ ಹಿಂಸೆ ನೀಡುತ್ತಿದ್ದರು. ಬಿಡುಗಡೆಯಾದ ಮೇಲೆ ಮತ್ತೆ ಚಾಮುಂಡಿಪುರಂನ ಪಾರ್ಕಿನಲ್ಲಿ ಸಭೆ ಸೇರಿ ಚಳುವಳಿ ಮಾಡಿದೆವು. ಒಮ್ಮೆ ನನ್ನನ್ನು ಅರೆಸ್ಟ್ ಮಾಡಿದಾಗ ನಾನು ಪೋಲಿಸ್ ಠಾಣೆ ಮೇಲೆ ಅವಿತುಕೊಂಡು ಪೋಲಿಸರಿಗೆ ಸುಮಾರು ಹೊತ್ತು ಯಾಮಾರಿಸಿದೆನು. ಕೆಲವೊಮ್ಮೆ ಪೋಲಿಸರು ನಮ್ಮನ್ನು ಅರೆಸ್ಟ್ ಮಾಡಿಕೊಂಡು ಬಂದು ದೂರದ ಸ್ಥಳಗಳಿಗೆ ಒಬ್ಬಬ್ಬೊರನ್ನೆ ಬಿಟ್ಟು ಹೋಗುತ್ತಿದ್ದರು. ನಾವೆಲ್ಲಾ ಮತ್ತೆ ಬಂದು ಸೇರುತ್ತಿದ್ದೆವು. ಆಗ ನಮಗೆ ಊರಿನ ಜನರು 'ಗಾಂಧಿ ಮಕ್ಕಳು' ಎಂದು ಕರೆದು ಪ್ರೀತಿಯಿಂದ ಕಾಫಿ, ನೀರು ಕೊಟ್ಟು ಸತ್ಕರಿಸುತ್ತಿದ್ದರು.

ಒಮ್ಮೆ ಪೋಲಿಸರು ನಮ್ಮನ್ನು ಅರೆಸ್ಟ್ ಮಾಡಿದಾಗ ಅವರೇ ಸೂಚನೆ ನೀಡಿ ಹೊರಡಲು ಅವಕಾಶ ಮಾಡಿಕೊಡುತ್ತಿದ್ದರು. ಪೋಲಿಸರಿಗೂ ಕೂಡ ಒಂದು ಜವಾಬ್ದಾರಿ ಸರ್ಕಾರ ಬೇಕಿತ್ತು. ಕೆಲವೊಮ್ಮೆ ಅವರು ನಮಗೆ ಸಹಕಾರ ನೀಡಿದ್ದಾರೆ. ನೇರವಾಗಿ ಬಿಡದೇ ಅವರೇ ಓಡಿಹೋಗುವಂತೆ ಪರೋಕ್ಷವಾಗಿ ಸೂಚನೆ ಕೊಡುತ್ತಿದ್ದರು. ಹಿಂದಿ ಪ್ರಚಾರ ಸಭೆಯಲ್ಲಿ ನಮಗೆ ಶಿಕ್ಷಣದ ಜೊತೆ ಸ್ವಾತಂತ್ರ್ಯದ ಹೋರಾಟವನ್ನೂ ಕಲಿಸುತ್ತಿದ್ದರು. ಯಾವ ರೀತಿ ಚಳುವಳಿ ನಡೆಸಬೇಕು, ಯಾವ ಮಾರ್ಗಗಳಿಂದ ತಪ್ಪಿಸಿಕೊಳ್ಳಬೇಕು ಎಂದೆಲ್ಲಾ ಮಾಹಿತಿ ನೀಡುತ್ತಿದ್ದರು.



ಮೈಸೂರು ಜೈಲಿನಲ್ಲಿದ್ದಾಗ ನನ್ನ ಜೊತೆ ಶಾಂತಮ್ಮ, ಶಾರದಮ್ಮ ಮತ್ತು ಯಶೋಧರ ದಾಸಪ್ಪರಂತಹ ಸ್ತ್ರೀ ಹೋರಾಟಗಾರರು ಇದ್ದರು. ಸೆರೆಮನೆಯು ಉತ್ತಮ ಮಾರ್ಗದರ್ಶನ ಸಿಗುವ ಅದ್ಭುತ ಸ್ಥಳವಾಗಿತ್ತು ಎಂದು ಈ ಸಂದರ್ಭದಲ್ಲಿ ನೆನಪು ಮಾಡಿಕೊಂಡರು.

## ಸಿ. ಆರ್. ರಂಗಶೆಟ್ಟರು

ಶ್ರೀಯುತರನ್ನು ಮೈಸೂರಿನ ದೇವಾಂಬ ಅಗ್ರಹಾರದಲ್ಲಿ ೧೩.೧೨.೨೦೨೧ ರಂದು ಭೇಟಿ ಮಾಡಿ ಹೋರಾಟದ ನೆನಪುಗಳನ್ನು ಕೇಳಿದಾಗ ಹಲವಾರು ವಿಚಾರಗಳ ಬಗ್ಗೆ ನನ್ನೊಂದಿಗೆ (ಡಾ.ಸುಂದ್ರೇಶ ಎನ್) ಹಂಚಿಕೊಂಡರು. ಶ್ರೀಯುತರು ಚಾಮರಾಜನಗರದ ಟೌನ್‌ನಲ್ಲಿ ೨೦.೧೦.೧೯೨೬ ರಲ್ಲಿ ಎಸ್. ರಂಗಶೆಟ್ಟಿ ಮತ್ತು ಪುಟ್ಟಮ್ಮ ದಂಪತಿಗೆ ಮಗನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣದಿಂದ ಎಸ್.ಎಸ್.ಎಲ್.ಸಿ.ವರೆಗೂ ಚಾಮರಾಜನಗರದಲ್ಲೇ ಶಿಕ್ಷಣ ಪಡೆದರು. ಬಾಲ್ಯದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸಿ.ಆರ್.ರಂಗಶೆಟ್ಟರು ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು. ರಂಗಶೆಟ್ಟರು ಅವರ ಸ್ವಾತಂತ್ರ್ಯ ಹೋರಾಟ ಕುರಿತು ಹೇಳಿದ್ದು ಹೀಗೆ: ಮಹಾರಾಜರು ತಂಬುಚೆಟ್ಟಿ ಮತ್ತು ಆರ್ಕಾಟ್‌ರ ಮಾತು ಕೇಳಿ ನಮಗೆ ಸ್ವಾತಂತ್ರ್ಯ ಕೊಡಲು ನಿರಾಕರಿಸಿದರು. ಆಗ ಕಾಂಗ್ರೆಸ್ ಜೊತೆ ಸೇರಿ ಊರೆಲ್ಲಾ ಮೆರವಣಿಗೆ ನಡೆಸಿ, ಮಾರಿಗುಡಿ ಬಳಿ ಬಂದು ಸಭೆ ಸೇರಿ, ಊರಿನ ಪ್ರಮುಖರೆಲ್ಲಾ ಸೇರಿ ಭಾಷಣಗಳನ್ನು ಮಾಡುತ್ತಿದ್ದರು. ನಂತರ ಇಂಗ್ಲಿಷರಿಗೆ ಧಿಕ್ಕಾರ ಕೂಗುತ್ತಿದೆವು. ಚಿಕ್ಕ ಅಂಗಡಿ ಬಳಿ ಇದ್ದ ದೊಡ್ಡ ಅರಸನಕೆರೆ ಮುಖಾಂತರ ನಂಜನಗೂಡಿನವರೆಗೂ ನಡೆದು ಕವಲಂದೆ ಬಳಿ ಬಂಧನಕೊಳ್ಳಗಾದೆವು. ನಂತರ ನಮ್ಮನ್ನೆಲ್ಲಾ ನ್ಯಾಯಾಧೀಶರ ಮುಂದೆ ನಿಲ್ಲಿಸಿದರು. ನ್ಯಾಯಾಧೀಶರು ಶಿಕ್ಷೆ ನೀಡಿ ಸೆರಮನೆಗೆ ಕಳುಹಿಸಿದರು. ಸುಮಾರು ೪೩ ದಿನ ಸೆರಮನೆಯಲ್ಲಿದ್ದೆವು. ಆಗ ಖೈದಿಗಳಿಗೆ ಊಟವನ್ನು ತೂಕ ನೋಡಿ ಕೊಡುತ್ತಿದ್ದರು. ಊಟ ಸರಿಯಿಲ್ಲ ಎಂದು ನಾವೆಲ್ಲಾ ಜೈಲಿನಲ್ಲೆ ಪಿಕೆಟಿಂಗ್ ಮಾಡಿದೆವು. ಒಂದು ದಿನ ಉಪವಾಸ ಮಾಡಿದೆವು. ಜೈಲಿನಲ್ಲಿದ್ದಾಗ ಒಬ್ಬ ಮುಸ್ಲಿಂ ಅಧಿಕಾರಿಯು ನಮಗೆಲ್ಲಾ ಭಗವದ್ಗೀತೆ, ಕುರಾನ್, ಬೈಬಲನ್ನು

ಹೇಳಿಕೊಡುತ್ತಿದ್ದರು. ಅಂದು ಸೆರೆಮನೆಯು ಒಂದು ವಿಶ್ವದ್ಯಾನಿಲಯವಾಗಿತ್ತು. ಅಲ್ಲಿ ಎಲ್ಲಾ ರೀತಿಯ ಶಿಕ್ಷಣ ನಮಗೆ ಸಿಗುತ್ತಿತ್ತು.

ಮಲೆಯೂರು ಚಿಕ್ಕಲಿಂಗಪ್ಪನವರು, ಪುಟ್ಟನಂಜಪ್ಪನವರು, ಸಿ.ಗೋಪಾಲರಾವ್‌ರವರು, ಡಿ.ಜೆ.ಶಂಕರಪ್ಪನವರು ಭಾಷಣಗಳನ್ನು ಮಾಡಿ ನಮ್ಮಲ್ಲಿ ಸ್ಫೂರ್ತಿಯನ್ನು ತುಂಬುತ್ತಿದ್ದರು. ಮಾರ್ಗದರ್ಶಕರಾಗಿದ್ದರು. ಬ್ರಿಟಿಷರ ವಿರುದ್ಧ ಯಾವ ರೀತಿಯಲ್ಲಿ ಹೋರಾಟ ಮಾಡಬೇಕು, ಅದರ ರೂಪುರೇಷಗಳೇನು, ಹೇಗೆ ತಪ್ಪಿಸಿಕೊಳ್ಳಬೇಕು ಎಂದು ತಿಳಿಸುತ್ತಿದ್ದರು. ಆ ದಿನಗಳಲ್ಲಿ ನಮ್ಮ ಜೊತೆ ಎಂ.ಮಾದಯ್ಯ, ಸಿ.ಪಿ.ಮಹದೇವನ್, ಎಸ್.ಎಂ. ಮಹಾದೇವಪ್ಪ, ಲಲಿತಾ ಜೀ. ಟ್ಯಾಗೆಟ್ ಇವರೆಲ್ಲಾ ನನ್ನ ಸಹಪಾಠಿಗಳಾಗಿದ್ದರು. ವಿದ್ಯಾರ್ಥಿಗಳೆಲ್ಲಾ ಗುಂಪು ಸೇರಿ ಮಾರಿಗುಡಿ ಬಳಿ ಸೇರಿ ಚಳುವಳಿ ಬಗ್ಗೆ ಚರ್ಚಿಸಿ ಊರಿನಲ್ಲೆಲ್ಲಾ ಮೆರವಣಿಗೆ, ಘೋಷಣೆ ಮೂಲಕ ಪ್ರಚಾರ ಮಾಡುತ್ತಿದ್ದೆವು. ಜನಗಳಿಗೆ ಈ ಮೂಲಕ ಮನವರಿಕೆ ಮಾಡುತ್ತಿದ್ದೆವು. ಸಿ.ಜಿ.ರಾಜಶೇಖರ್‌ರವರು ಎಲ್ಲಾ ಹೋರಾಟಗಾರರಿಗೆ ಅನ್ನದಾನ, ಆಶ್ರಯ, ಕಾಫಿ, ನೀರಿನ ವ್ಯವಸ್ಥೆ ಮಾಡುವುದರ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ತುಂಬಾ ಪ್ರಮುಖ ಪಾತ್ರವಹಿಸಿದ್ದಾರೆ. ಹೋರಾಟದ ಸಮಯದಲ್ಲಿ ನಂಜನಗೂಡಿಗೆ ಹೋದಾಗಲೆಲ್ಲಾ ಮಹಾದೇವಪ್ಪನವರು ಹೋರಾಟಗಾರರಿಗೆ ನೆರವು ನೀಡುತ್ತಿದ್ದರು. ಮೈಸೂರಿಗೆ ಬಂದಾಗ ನಮಗೆ ಸಾಹುಕಾರ್ ಚೆನ್ನಯ್ಯನವರು, ಟಿ.ಸಿದ್ದಲಿಂಗಯ್ಯನವರು, ಟಿ.ಮರಿಯಪ್ಪ, ಪ್ರಭುಸ್ವಾಮಿ, ಪಾಲಹಳ್ಳಿ ಸೀತಾರಾಮಯ್ಯನವರ ಸಂಪರ್ಕ ಬೆಳೆಯಿತು. ನಮ್ಮ ಜಿಲ್ಲೆಯಲ್ಲಿ ಹೋರಾಟ ಮಾಡಲು ಇದರಿಂದ ಸಹಕಾರಿಯಾಯಿತು.

ಶ್ರೀಯುತರು ೨೦೧೬ ರಲ್ಲಿ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಾರರ ಸನ್ಮಾನ ಸಮಾರಂಭದಲ್ಲಿ ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರ ಪ್ರತಿನಿಧಿಯಾಗಿ ಸನ್ಮಾನ ಸ್ವೀಕರಿಸಿದರು.

❑

## ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹೆಮ್ಮೆಯ ವೀರಪುತ್ರರು ಚಾಮರಾಜನಗರ ತಾಲ್ಲೂಕು

| | |
|---|---|
| ಪಿ. ವೆಂಕಟಸುಬ್ಬಶೆಟ್ಟಿ | ಆರ್. ಲಿಂಗಣ್ಣ |
| ಕೆಂಪಶೆಟ್ಟಿ | ಎಸ್. ವೆಂಕಟಸುಬ್ಬಶೆಟ್ಟಿ |
| ರಂಗಸ್ವಾಮಿ | ಟಿ. ವೆಂಕಟಶೆಟ್ಟಿ |
| ಎಸ್. ಚಂದ್ರಶೆಟ್ಟಿ | ಕೆ. ಸಿ. ಪುಟ್ಟಸುಬ್ಬಯ್ಯ |
| ಎಂ. ಎಲ್. ಪುಟ್ಟಮಾದಯ್ಯ | ಎಸ್. ಎ. ಜಯಮ್ಮ |
| ಎಂ. ಶ್ರೀನಿವಾಸಮೂರ್ತಿ | ಕೆ. ಎಂ. ತೋಟಪ್ಪ |
| ಸಿ. ಎನ್. ಪುಟ್ಟಣ್ಣ | ಚಿಕ್ಕರಂಗಮ್ಮ |
| ಪುಟ್ಟನಂಜಮ್ಮ | ವರಮಹಾಲಕ್ಷ್ಮಿ |
| ಎಂ. ನಾಗೇಶ್ವರರಾವ್ | ಸಿದ್ದಲಿಂಗಮ್ಮ |
| ಮಾಧು | ಎಸ್. ಎಲ್. ಮಹಾದೇವಯ್ಯ |
| ಡಿ. ಬಸವಯ್ಯ | ಎಚ್. ಮಾದಯ್ಯ |
| ಜಿ. ಎಸ್. ನಾರಾಯಣಶೆಟ್ಟಿ | ನೀಲಮ್ಮ |
| ತಮ್ಮಯ್ಯ | ಸಿ. ಕೆ. ಮಹಾದೇವಶೆಟ್ಟಿ |
| ಸಿ. ಆರ್. ಲಕ್ಷಣಶೆಟ್ಟಿ | ನೀಲಮ್ಮ ಆಲೂರು |
| ವಿ. ನಂಜುಂಡಶೆಟ್ಟಿ | ಗಜಲಕ್ಷ್ಮೀಬಾಯಿ |
| ಲಲಿತಾ ಜಿ. ಟ್ಯಾಗೆಟ್ | ನಂಜುಂಡಶೆಟ್ಟರು |
| ಕುದೇರು ಪುಟ್ಟಸ್ವಾಮಿ | ಕಮಲಮ್ಮ |
| ಸಿ.ಎನ್. ವಿಷಕಂಠಯ್ಯ | ಶ್ರೀ ಬಾಲಕೃಷ್ಣ |
| ಶ್ರೀ ಪರಶುರಾಮ | ಎಂ. ಮಾದಯ್ಯ |
| ಎಸ್. ಎಂ. ಮಹಾದೇವಪ್ಪ | ಸಿ. ಪಿ. ಮಹಾದೇವನ್ |

## ಗ್ರಂಥಋಣ


೧. ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಳು – ೧೯೯೪

೨. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು – (ಪ್ರಥಮ, ದ್ವೀತಿಯ, ತೃತಿಯ) ಸಂಪುಟಗಳು–ಸೂರ್ಯನಾಥ ಕಾಮತ್

೩. ಕರ್ನಾಟಕ ಕೈಪಿಡಿ

೪. ಮೈಸೂರು ದರ್ಶನ – ಭಾಗ ಒಂದು

೫. ಮೈಸೂರು ತಾಲ್ಲೂಕು ಗ್ಯಾಜೆಟಿಯರ್

೬. ಫೋಟೋ ನೆರವು – ವೆಂಕಟರಾಜು. ಕೆ (ಕೆ.ವಿ. ಕೃಷ್ಣಮೂರ್ತಿರವರ ಮಗ) ಕ್ಷೇತ್ರಕಾರ್ಯ

೭. ಫೋಟೋ ನೆರವು – ದೊರೆಸ್ವಾಮಿ ಪುಣಜನೂರು (ಡಿ.ಜೆ. ಶಂಕರಪ್ಪನವರ ಮಗ) ಕ್ಷೇತ್ರಕಾರ್ಯ

೮. ಸಂದರ್ಶನ – ಲಲಿತಾ ಜಿ. ಟ್ಯಾಗೆಟ್(ಸ್ವಾತಂತ್ರ್ಯ ಹೋರಾಟಗಾರರು)

೯. ಆಕಾಶವಾಣಿ ರೇಡಿಯೋ ಸಂದರ್ಶನದ ಮಾಹಿತಿ (ಅಗರಂ ರಂಗಯ್ಯ)

೧೦. ಮಾಹಿತಿ ನೆರವು – ನಂಜುಂಡಶೆಟ್ಟರ ಮಗ ವಾಸುದೇವಮೂರ್ತಿ (ಕ್ಷೇತ್ರಕಾರ್ಯ)

೧೧. ಸಂದರ್ಶನ – ಸಿ. ಆರ್. ರಂಗಶೆಟ್ಟರು (ಸ್ವಾತಂತ್ರ್ಯ ಹೋರಾಟಗಾರರು) ಮಾಹಿತಿ ನೆರವು – (ಮಂಜುನಾಥ್ ಮತ್ತು ಮನೋನ್ಮಣಿ)


೧೨. ಗೋಲ್ ಪುಸ್ತಕ – ಸಂಪಾದಕರು ಕೆ. ವೆಂಕಟರಾಜು

೧೩. ಚಾಮರಾಜನಗರ ಜಿಲ್ಲಾ ಗ್ಯಾಜೆಟಿಯರ್


೧೪. ಹೊನ್ನು ಹೊಳೆ – ೨೦೦೭ – ಚಾಮರಾಜನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಪುಟ.


## ಅನುಬಂಧ

### ಛಾಯಾಚಿತ್ರಗಳು







ಚಿತ್ರ. ೧. ಅಗರಂ ರಂಗಯ್ಯ

ಚಿತ್ರ. ೨. ಸಿ. ಗೋಪಾಲರಾವ್

ಚಿತ್ರ. ೩. ಡಿ.ಜೆ. ಶಂಕರಪ್ಪ

ಚಿತ್ರ. ೪. ಗಾಂಧಿ ಎಸ್.ಪುಟ್ಟನಂಜಪ್ಪ





ಚಿತ್ರ.. ೫. ಕೆ. ವಿ. ಕೃಷ್ಣಮೂರ್ತಿ

ಚಿತ್ರ. ೬. ರಂಗಸ್ವಾಮಿ.ಸಿ.ಸಿ.

ಚಿತ್ರ. ೭. ಸಿ. ಜಿ. ರಾಜಶೇಖರ್

ಚಿತ್ರ. ೮. ನಂಜುಂಡಶೆಟ್ಟರು







ಚಿತ್ರ. ೯. ದಾಸಪ್ಪನವರ ಛತ್ರ

ಚಿತ್ರ. ೧೦. ಸಿ. ಜಿ. ರಾಜಶೇಖರ್‌ರವರ ಮನೆ

ಚಿತ್ರ. ೧೧. ಮಾರಿಗುಡಿ (ಸಾರ್ವಜನಿಕ ಸಭೆ ನಡೆಯುತ್ತಿದ್ದ ಸ್ಥಳ)

ಚಿತ್ರ. ೧೨. ಗುರುನಂಜಶೆಟ್ಟರ ಛತ್ರ







ಚಿತ್ರ. ೧೩. ಮಲೆಯೂರು ಚಿಕ್ಕಲಿಂಗಪ್ಪನವರ ಮನೆ

ಚಿತ್ರ. ೧೪. ಡಿ. ಜೆ. ಶಂಕರಪ್ಪನವರ ಮನೆ (ದೊಡ್ಡರಾಯನಪೇಟೆ)








ಚಿತ್ರ. ೧೫. ಗಾಂಧಿ ಪುಟ್ಟನಂಜಪ್ಪನವರ ಮನೆ (ಮಾದಾಪುರ)

ಚಿತ್ರ. ೧೬. ಪುಟ್ಟನಂಜಪ್ಪನವರು ಸ್ವಾತಂತ್ರ್ಯದ ದಿನವೇ ಹೃದಾಯಾಘಾತದಿಂದ ನಿಧನರಾದಾಗ ತೆಗೆದ ಕೊನೆಯ ಫೋಟೋ










ಚಿತ್ರ. ೧೭. ಲಲಿತಾ ಜಿ. ಟ್ಯಾಗೇಟ್


ಚಿತ್ರ. ೧೮. ಸಿ. ಆರ್. ರಂಗಶೆಟ್ಟರು

ಚಿತ್ರ. ೧೯. ಎಸ್. ನಾಗರಾಜ್

ಚಿತ್ರ. ೨೦. ಐ. ಎನ್. ಎ. ರಾಮರಾವ್ (ರಾಮು)







೨೧. ಕೆ.ವಿ.ಕೃಷ್ಣಮೂರ್ತಿ ಅವರಿಗೆ ಭಾರತ ಸರ್ಕಾರ ಕೊಟ್ಟ ತಾಮ್ರಪತ್ರ

೨೨. ಬಿ. ಎಲ್. ನಂಜುಂಡಶೆಟ್ಟರು ೧೯೪೨ರಲ್ಲಿ–ಡಿಟೆನ್ಯೂ. ಆದಪತ್ರ. (ಕ್ಷೇತ್ರಕಾರ್ಯದ ಸಮಯದಲ್ಲಿ ಸಿಕ್ಕಿದ ದಾಖಲೆ)




**೨೩. ಸಿ.ಆರ್.ರಂಗಶೆಟ್ಟರು ಚಾಮರಾಜನಗರದ ಸ್ವಾತಂತ್ರ್ಯ ಹೋರಾಟಗಾರರ ಪ್ರತಿನಿಧಿಯಾಗಿ ದೆಹಲಿಯ ರಾಷ್ಟ್ರಪತಿ ಭವನಕ್ಕೆ ೨೦೧೬ರಲ್ಲಿ ಭೇಟಿ ಕೊಟ್ಟ ಚಿತ್ರ.**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೪೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೪೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೪೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೪೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೪೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೫೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೫೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೫೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೫೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೬೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೬೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೬೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |